ಓದು, ಬರಹ ಬಲ್ಲವರ ಮಾಸಪತ್ರಿಕೆ

ಜಾನಪದ ಸಂಚಿಕೆ

- ವರುಷ ವರುಷದ ಹರುಷದಲಿ
- ವಿಶ್ವದ ಮೊಟ್ಟ ಮೊದಲ ಪ್ರಜಾಸಾಹಿತ್ಯ
- ಋಗ್ವೇದ : ಪ್ರಥಮಸೂಕ್ತ
- ಋಗ್ವೇದದ ಸೂಕ್ತಗಳು
- ಜಾನಪದ ಸಾಹಿತ್ಯ ಕುರಿತು ಮೊಟ್ಟ ಮೊದಲ ಲೇಖನ?
- ಲಾವಣಿ ಪದಗಳು
- ಜೀವನ ಸಂಗೀತ : ಪರಿಚಯ
- ಹುಟ್ಟಿದಹಳ್ಳಿ - ಹಳ್ಳಿಯಹಾಡು : ಅರಿಕೆ
- ಹಕ್ಕಿಪಿಕ್ಕಿಜನಾಂಗ : ಒಂದು ನೋಟ
- ಜನಪದ ಚಿತ್ರಕಲೆ ಮತ್ತು ಜನಜೀವನ
- ಆರು ಪುಸ್ತಕಗಳ ಇಣುಕುನೋಟ
- ಸೌಂದರ್ಯ ಅವಮಾನಿಸಿದ ಭೈರಪ್ಪ
  ಸತ್ಯ ಅನುಮಾನಿಸಿದ ಬಂಜಗೆರೆ

೧೨

ಆಗಸ್ಟ್ ೨೦೦೭

ಸಂಪಾದಕ
ಪುಸ್ತಕಮನೆ ಹರಿಹರಪ್ರಿಯ

ಸಂಚಿಕೆ : ೧೨ ಓದು, ಬರಹ ಬಲ್ಲವರ ಮಾಸಪತ್ರಿಕೆ ಆಗಸ್ಟ್ ೨೦೦೭

ಒಳಪುಟಗಳಲ್ಲಿ....

ಎರಡನೇ ವರ್ಷದ ಚಂದಾದಾರರ ಗಮನಕ್ಕೆ

(ಸಂಚಿಕೆ 13 ರಿಂದ 24ರ ವರೆಗೆ)

ಹಳಬರಿಗೆ (ಆಗಸ್ಟ್ ಒಳಗೇ ಕಳಿಸಲು ಮನವಿ) ರೂ. 250/–

ಹೊಸಬರಿಗೆ (ಈವರೆಗಿನ 12 ಸಂಚಿಕೆಗಳನ್ನೂ ಸೇರಿಸಿ) ರೂ. 500/–

ಬೆಂಗಳೂರಿನ ಹೊರಗಿನವರು ಹಣವನ್ನು ಎಂ.ಓ./ಡಿ.ಡಿ.ಗಳಲ್ಲಿ ಮಾತ್ರ
'ಪುಸ್ತಕಮನೆ' ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ

ಖಾಸಗಿ ಪ್ರಸಾರಕ್ಕಾಗಿ ಮಾತ್ರ *ಬಿಡಿ ಸಂಚಿಕೆ ರೂ. 25/–*

ಪ್ರಕಾಶನ

ಪುಸ್ತಕಮನೆ

702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು 560062
ಮೊಬೈಲ್ : 9845867184 / 9242221506
e-mail : hariharapriya@gmail.com pustakamane@yahoo.com

ಮುದ್ರಣ

ಇಳಾ ಮುದ್ರಣ, ನಂ. 36, 40 ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು 560 026. ದೂರವಾಣಿ : 32715773 / 26757159

೧

ವರುಷ ವರುಷದ ಹರುಷದಲಿ

ಸಂಪಾದಕ

ಮೊನ್ನೆ ತಾನೇ ಕಮಲಾಹಂಪನಾ ಅವರು ಪತ್ರ ಬರೆದು 'ಪ್ರಜಾಸಾಹಿತ್ಯ'ಕ್ಕೆ ವರುಷವಾಯಿತೆ! ಇದೀಗ ಶುರುಮಾಡಿದಂತೆ, ಆ ಬಗ್ಗೆ ಮಾತಾಡಿದಂತೆ, ಹರುಷವಾಗುತ್ತಿದೆ ಎಂದಿದ್ದಾರೆ. ಎರಡನೇ ವರುಷದ ಚಂದಾ ಕೇಳಲು ಹೋದವರ ಬಳಿ ಕೂಡ ಇದೇ ಮಾತುಗಳೇ.

ಅಷ್ಟಲ್ಲದೆ ಮತ್ತೇನು : ವರುಷದಲ್ಲಿ ಅಬ್ಬಬ್ಬಾ ಅಂದರೆ ೧೨ ಸಂಚಿಕೆಗಳನ್ನು ಇರುವಷ್ಟು ಚಂದಾದಾರರಿಗೇ ಸರಿಯಾದ ವೇಳೆಗೆ ತಪ್ಪದೆ ತಲುಪಿಸಲಾಯಿತು. ವಿಜ್ಞಾನಿಗಳಿಂದ ಹಿಡಿದು ವಿದ್ಯಾರ್ಥಿಗಳವರೆಗೆ, ತೊಂಬತ್ತು ದಾಟಿದ ಹಿರಿಯರಿಂದ ಇಪ್ಪತ್ತರ ಕಿರಿಯರವರೆಗೆ, ವಿದ್ವಾಂಸರಿಂದ ಸೃಜನಶೀಲರವರೆಗೆ ತೊಡಗಿಸಿಕೊಂಡು, ಪತ್ರಿಕೆ ಹೊರತಂದಿದ್ದಾಯಿತು. ಕರ್ನಾಟಕ ಮಾತ್ರವೇ ಅಲ್ಲ ಹೊರ ರಾಜ್ಯಗಳಲ್ಲಿರುವ, ದೇಶದ ರಾಜಧಾನಿಯವರೆಗಿನ ಅಭಿಮಾನಿ ಸದಸ್ಯರಿಗೂ ಪತ್ರಿಕೆ ತಲುಪಿಸುವ ಪ್ರಯತ್ನ ಮಾಡಲಾಯಿತು.

ಇದರಲ್ಲಿ ಇಳಾ ಮುದ್ರಣಾಲಯದ ಎಲ್ಲ ನೌಕರವರ್ಗ, ಮುಖ್ಯವಾಗಿ ಬಿ. ಗುರುಮೂರ್ತಿ ಪಾತ್ರವೇ ದೊಡ್ಡದು. ಅಂತೆಯೇ ದೊಡ್ಡಕಲ್ಲಸಂದ್ರ, ತಲಘಟ್ಟಪುರ ಅಂಚೆ ಕಛೇರಿ ಸಿಬ್ಬಂದಿ ಅದರಲ್ಲೂ ವಸಂತಕುಮಾರ್, ಯಲಚೇನಹಳ್ಳಿ ದಿ ಪ್ರೊಫೆಷನಲ್ ಕೊರಿಯರ್ಸ್ ಹಾಗೂ ಗೋಪಾಲಸ್ವಾಮಿ - ಅವರ ಅನುದಿನದ ನೆರವು ಅಪಾರ.

ಇಷ್ಟಾಗಿ ಅಂದುಕೊಂಡದ್ದು ಆಗಿಲ್ಲ : ಸಮಾಜದ ನಾನಾ ಕ್ಷೇತ್ರದಲ್ಲಿ ದುಡಿಯುತ್ತಿರುವವರು, ನಾನಾ ವೃತ್ತಿಯಲ್ಲಿ ತೊಡಗಿಸಿಕೊಂಡವರು ಓದು ಬರಹಗಳಿಗೆ ಹತ್ತಿರವಾಗಬೇಕಾಗಿದೆ. ಐಟಿಬಿಟಿಯಿಂದ ಓದುಬರಹಕ್ಕೆ ಎರವಾಗುತ್ತಿರುವಂತೆಯೇ ಇಂದಿಗೂ ಓದು ಬರಹವಿಲ್ಲದೇ ಬದುಕುತ್ತಿರುವವರು ನಮ್ಮ ನಡುವೆ ಅಸಂಖ್ಯಾತರಿದ್ದಾರೆ. ಈ ಇಬ್ಬರ ನಡುವೆ ಓದು ಬರಹ ಬಲ್ಲವರೂ, ಹೊಟ್ಟೆ ಹೊರೆಯುವುದಕ್ಕೆ ಎಷ್ಟು ಬೇಕೊ ಅಷ್ಟು ಸಾಕು ಎಂಬ ಯಾಂತ್ರಿಕ ಐಷಾರಾಮ ಜೀವನದಲ್ಲಿ ಕಾಲ ಕಳೆಯುತ್ತಿರುವವರೂ ಸಾಕಷ್ಟು ಮಂದಿ ಇದ್ದಾರೆ. ಇಷ್ಟು ಶಾಲಾಕಾಲೇಜುಗಳ ಅಧ್ಯಾಪಕರು, ವಿದ್ಯಾರ್ಥಿಗಳು, ಬೇರೆಬೇರೆ ಉದ್ಯೋಗದಲ್ಲಿರುವವರು, ಸಮಾಜ ಕಾರ್ಯಕರ್ತರು - ಓದುಬರಹ ಇನ್ನೇಕೆ ಎಂದು ಸಂಪಾದನೆಯಲ್ಲಿ ಮುಳುಗಿದ್ದಾರೆ. ಇಂಥವರಿಂದ ಈ ಸಮಾಜ, ಸಮಕಾಲೀನ ಕ್ಷೇತ್ರಗಳು ವಿಶ್ವಮಟ್ಟದಲ್ಲಿ ತಲೆತಗ್ಗಿಸುವ, ಸಂಕುಚಿತಗೊಳ್ಳುವ, ಯಃಕಶ್ಚಿತ್ ಸ್ಥಿತಿಗೆ ನಾವು ಮುಟ್ಟಿಸುತ್ತಿದ್ದೇವೆ ಎಂಬ ತಿಳುವಳಿಕೆ ಇಲ್ಲದಿರುವುದೇ ದುರಂತ. ಇನ್ನು ವರ್ಗ, ವರ್ಣ, ಭಯೋತ್ಪಾದನೆಯ ಕೀಳು ತಿಕ್ಕಾಟ, ದ್ವೇಷ, ಅಸೂಯೆಗಳಲ್ಲಿಯೇ ತೊಳಲಾಡುತ್ತ, ಕೇವಲ ಆರ್ಥಿಕ ಪರಿಸ್ಥಿತಿಯಿಂದಲೇ ಏಳಿಗೆ ಸಾಧ್ಯ ಎಂಬ ಭ್ರಮೆಯಲ್ಲಿ ಮುಳುಗಿರುವವರೆಗೆ ವಿಶ್ವಮಾನವತ್ವವಿರಲಿ, ವಿಶ್ವಪ್ರಜ್ಞೆಯೇ ಇಲ್ಲದಿರುವಾಗ, ಯಾವ ಕ್ಷೇತ್ರವೂ ಯಾರೂ ಏನೂ ಸಾಧನೆ ಮಾಡಲಾರರು.

ನಾವೇ ಶ್ರೇಷ್ಠರು ಎಂಬ ಕ್ಯಾನ್ಸರಿನಿಂದ ಬಳಲುತ್ತಿರುವ, ಮೀಸಲಾತಿ ಒಂದೇ ಮದ್ದು ಎಂಬ ಏಡ್ಸ್‌ನಲ್ಲಿ ಅದಿರಿಹೋಗುತ್ತಿರುವ ಈ ಪವಿತ್ರ ಭಾರತ - ಕರ್ನಾಟಕಗಳ ನೆಲಕ್ಕೆ, ತಾನೂ ತನ್ನ ಕ್ಷೇತ್ರವೂ ವಿಶ್ವಮುಖಿ ಯಾಗಬೇಕೆಂಬ ಕನಸೇ ಇಲ್ಲದಾದ ಭೀಕರಸ್ಥಿತಿ ನಮ್ಮ ಮುಂದಿದೆ. ಇದರಲ್ಲಿ ಇವತ್ತಿನ ಸಮೂಹಮಾಧ್ಯಮಗಳ ಪಾತ್ರವೇ ಹೆಚ್ಚಾಗಿ ಕಂಡುಬರುತ್ತಿದೆ. ಸೆಕ್ಸ್, ಕ್ರೈಂ, ರಾಜಕೀಯ, ಜಾತೀಯತೆಗಳೇ ಕರ್ನಾಟಕ ವಿಜಯ ಎನ್ನುವ ನೀಚ ಮನಸ್ತತ್ತ್ವದ ಮಾಧ್ಯಮಿಗಳು ಬೇಕೆಂದೇ ಅಥವ ತಮ್ಮ ರಂಗುರಂಗಿನ ಆಟಕ್ಕೆ ಬಲಿಗೊಳಿಸು ತ್ತಿರುವುದು ಕಾಲಕ್ರಮೇಣ ಬಹಿರಂಗಗೊಳ್ಳುವಂಥದ್ದು.

ಇಂಥ ಸಂದರ್ಭದಲ್ಲಿ 'ಪ್ರಜಾಸಾಹಿತ್ಯ', ಶಿವರಾಮಕಾರಂತರು ಎಂದೋ ಬರೆದ ಕಾದಂಬರಿಯಂತೆ 'ಒಂಟಿದನಿ'. ದನಿ ಬಹಿರಂಗವಾಗಿಯಲ್ಲದಿದ್ದರೂ ಅಂತರಂಗದಲ್ಲಿ ಸಾಕ್ಷೀಭೂತವಾಗಿ ಕಾಡುವಂಥದ್ದು. ಆ ನಂಬುಗೆಯಿಂದಲೇ ಎರಡನೇ ವರುಷಕ್ಕೆ ಕಾಲಿಡುತ್ತಿದೆ.

ಮೊದಲ ವರುಷದಲ್ಲಿ ಮೊದಲು ಹರೆಸಿದವರು ಚನ್ನಮಲ್ಲ ವೀರಭದ್ರ ಸ್ವಾಮೀಜಿಯವರು. ಕಮಲಾ ಹಂಪನಾ ಹಾಗೂ ಅವರ ಮಗ ಹರ್ಷವರ್ಧನ ಮನೆಗೇ ಕರೆದು ಅಯಿದು ಸಾವಿರ ರೂ.ಗಳನ್ನು ನೀಡಿ, ಮುಂದುವರೆಯಿರಿ ಎಂದು ಉತ್ತೇಜಿಸಿದರು. ಅಂತರರಾಷ್ಟ್ರೀಯ ಖ್ಯಾತಿಯ ಮೃದಂಗವಾದಕರಾದ ಟಿ.ಎ.ಎಸ್. ಮಣಿ, ಮುಖ್ಯ ಗ್ರಂಥಪಾಲಕ ಕೆ.ಜಿ. ವೆಂಕಟೇಶ, ಬನಶಂಕರಿಯ ತರುಣ ಸಮಾಜ ಸೇವಾಕರ್ತ ಹೆಚ್.ಆರ್. ಉಮೇಶ್ – ಅವರು ಎರಡುಮೂರು ಸಾವಿರದಷ್ಟು ನೆರವಾದರು.

ಯುವ ಪ್ರತಿಭಾವಂತ ಲಯವಾದಕ ಆನೂರು ಅನಂತಕೃಷ್ಣಶರ್ಮ ಎಷ್ಟು ವರುಷದ ಚಂದಾ ಕೊಡಲಿ ಎಂದು ಗಾಬರಿ ಹುಟ್ಟಿಸಿ ಒಂದೂವರೆ ಸಾವಿರ ಕೊಟ್ಟದ್ದು, ಹಿರಿಯರೂ ಮಿತ್ರರೂ ಆದ ಕೆ.ವಿ. ಕೃಷ್ಣಯ್ಯ, ಬಿ.ಆರ್. ಛಾಯಾ ಪದ್ಮಪಾಣಿ, ವೆಂಕಟಾಚಲಪತಿ, ಜೆ.ಎಂ.ಎಸ್. ಮಣಿ, ಟಿ.ಎಸ್. ನಾಗಾಭರಣ, ಶ್ರೀನಿವಾಸ ಜಿ. ಕಪ್ಪಣ್ಣ, ಹೆಚ್.ಜಿ. ಸೋಮಶೇಖರರಾವ್, ರು.ಫ. ದೇಸಾಯಿ, ವೈದ್ಯರಾದ ಎಂ. ಪ್ರಭುಸ್ವಾಮಿ, ಶಿವಪುತ್ರ ದಂಪತಿಗಳು, ಮನಶ್ಶಾಸ್ತ್ರಜ್ಞ ಎಂ.ಎಸ್. ತಿಮ್ಮಪ್ಪ, ಗುಬ್ಬಿ ರೇವಣಾರಾಧ್ಯರ ಮೂಲಕ ಶಿಕಾರಿಪುರ ಹರಿಹರೇಶ್ವರ, ವಿಜಯಾ ಸುಬ್ಬರಾಜ್ - ಇವರೆಲ್ಲರೂ ಸಮಯ ಸಂದರ್ಭದಲ್ಲಿ ಸಾವಿರಕ್ಕೂ ಮೀರಿ ಸಹಕರಿಸಿದ್ದಾರೆ.

ನಮ್ಮ ಬಡಾವಣೆಗೇ ಬಂದು ಜೊತೆಯಾದ ಹೂಲಿಶೇಖರ್, ನಮ್ಮೂರಿನವರೇ ಆದ ವಿಜಯಲಕ್ಷ್ಮಿ ಪ್ರಾವಿಷನ್ ಸ್ಟೋರ್ ಉಮಾಪತಿ, ಪಕ್ಕದ ದೊಡ್ಡಕಲ್ಲಸಂದ್ರದ ವಿನಾಯಕ ಸ್ಟೇಷನರೀಸ್ ಅರವಿಂದ, ಎಸ್. ಬಾಲಚಂದ್ರರಾವ್, ಬಿ.ಎಸ್. ಶೈಲಜ, ಬಿ. ಸುರೇಶ, ಹೆಚ್.ಆರ್. ನಟರಾಜಶರ್ಮ ಇವರೆಲ್ಲ ಅಯಿದುನೂರಕ್ಕೂ ಮೀರಿ ಬೆಂಬಲಿಸಿದ್ದಾರೆ.

ದೂರದ ಆರ್ಕೆ ಮಣಿಪಾಲ, ಬಾ.ಹ. ರಮಾಕುಮಾರಿ, ರಾಘವೇಂದ್ರ ಪಾಟೀಲ, ಕೆ. ಸತ್ಯನಾರಾಯಣ - ತಾವು ಮಾತ್ರವಲ್ಲ ತಮ್ಮವರನ್ನೂ ಚಂದಾದಾರರಾಗಿಸಿದ್ದಾರೆ. ದೇಶಕುಲಕರ್ಣಿ, ಆನಂದರಾಮಉಪಾಧ್ಯ, ಬಿ.ಎಸ್. ಚಂದ್ರಶೇಖರ್ ಅವರ ನೆರವು ಮರೆಯುವಂಥದ್ದಲ್ಲ. ವಿಜಯಾ, ಸುಮತೀಂದ್ರ ನಾಡಿಗ, ಕೆ. ವೇಣುಗೋಪಾಲ, ಎಲ್.ಐ.ಸಿ. ರವಿಶಂಕರ್, ಎಸ್. ರಾಜಶೇಖರ್, ಸಕಲವಾರ ಕಾವೇರಪ್ಪ, ನಟರಾಜಶರ್ಮ, ನೈಷಧಂ - ಇವರು, ತಮ್ಮದೇ ಪತ್ರಿಕೆ ಎನ್ನುವಂತೆ ಹಲವರನ್ನು ಹತ್ತಿರ ತಂದಿದ್ದಾರೆ.

ಸೆಲೆಕ್ಟ್ ಬುಕ್‌ಷಾಪ್ ಕೆ.ಕೆ.ಎಸ್. ಮೂರ್ತಿ, ಯಕ್ಷದೇಗುಲ ಮೋಹನ್, ಎಸ್. ರವೀಂದ್ರ, ಬಿ. ನಾಗೇಶರೆಡ್ಡಿ, ಶಿವಮೊಗ್ಗ ಸಾಗರ ಕಂಪ್ಯೂಟರ್ ಸಿಸ್ಟಮ್ಸ್, ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕರ್ಣಾಟಕ ಬ್ಯಾಂಕ್ ಲಿ., ಎಂ. ಶಿವಲಿಂಗಪ್ಪ, ವಾರ್ತಾ ಮತ್ತು ಪ್ರಚಾರ ಇಲಾಖೆ ವಿಶೇಷವಾಗಿ ದೇಸಾಯಿ, ವೆಂಕಟರಾಜ್ ಭಟ್, ಆರ್. ವಿಶ್ವನಾಥ ಮಾನ್ವಿ, ಸುಧಾ ಬುಕ್ ಹೌಸ್, ಐ.ಬಿ.ಹೆಚ್ ಪ್ರಕಾಶನ, ಡಿ.ಎಸ್. ಚೌಗಲೆ, ಇಳಾ ಮುದ್ರಣ - ಇವರೆಲ್ಲ ಆಯಾ ತಿಂಗಳು ಜಾಹೀರಾತಿನ ನೆಪದಲ್ಲಿ ಪತ್ರಿಕೆ ಉಳಿಸುವ ಉಪಕಾರ ಮಾಡಿದ್ದಾರೆ.

ಅದಾವ ಗಳಿಗೆಯಲ್ಲಿ ಚಿ. ಶ್ರೀನಿವಾಸರಾಜು ಎರಡನೆಯ ವರ್ಷವೂ ನೀವು ನಡೆಸುತ್ತೀರಿ, ನಡೆಸಬೇಕು ಎಂದು ನಂಬಿದರೊ, ನಂಬಿಸಿದರೊ ಆ ಭರವಸೆ ಮೇರೆಗೇ ಮುಂದಾಗಿದ್ದೇನೆ. ಮುಂದೆಯೂ ನೀವೆಲ್ಲ ಕೈ ಹಿಡಿದು ನಡೆಸಬೇಕು. ನಿಮ್ಮಂಥವರು ಇನ್ನಷ್ಟು ಮತ್ತಷ್ಟು ಒದಗಿದರೆ, ಎರಡು ವರುಷವೇನು ಹತ್ತಾರು ವರುಷ ನಡೆಸಿಯೇನು. ಆ ಯೋಗ - ಆ ಪ್ರಾಪ್ತಿ 'ಪ್ರಜಾಸಾಹಿತ್ಯ'ಕ್ಕೆ ಎಟುಕಲಿ. ❑

ಮಾನ್ಯ ಹರಿಹರಪ್ರಿಯ ಅವರಿಗೆ,

ನೀವು ಪ್ರೀತಿಯಿಂದ ಕಳಿಸಿದ 'ಪ್ರಜಾಸಾಹಿತ್ಯ'ದ ೧೧ನೇ ಸಂಚಿಕೆ ತಲುಪಿದೆ. 'ಮೂವತ್ತು ವರ್ಷದ ಹಿಂದಿನ ಕೆಲಬರಹಗಾರರ' ಕುರಿತ ನಿಮ್ಮ ಲೇಖನ ನನಗೆ ತುಂಬ ಮೆಚ್ಚಿಗೆಯಾಯ್ತು. ಇಷ್ಟು ಸತ್ಯನಿಷ್ಠುರವಾಗಿ ಬರೆಯಬಲ್ಲ ಇನ್ನೊಬ್ಬ ಲೇಖಕರಿಲ್ಲ ಎನಿಸಿತು. ಉಳಿದ ಲೇಖನಗಳೂ ತುಂಬ ಚೆನ್ನಾಗಿವೆ. 'ಕನ್ನಡದಲ್ಲಿ ಜೀವನ ಚರಿತ್ರೆ' ಎಂ.ಜಿ. ಕೃಷ್ಣಮೂರ್ತಿಯವರು ಬರೆದದ್ದು ಇಂದಿಗೂ ತನ್ನ ಹೊಚ್ಚ ಹೊಸತನದಿಂದ ಕೂಡಿದೆ. ನಿಮ್ಮ ಪತ್ರಿಕೆಗೆ ನಾನು ಎಲ್ಲ ಯಶ ಕೋರುವೆ. ಇಂಥ ಪತ್ರಿಕೆಯ ಅವಶ್ಯಕತೆ ಬಹಳವಿತ್ತು. ಅದನ್ನು ನೀವು ತುಂಬಿಕೊಟ್ಟದ್ದಕ್ಕಾಗಿ ಧನ್ಯವಾದಗಳು.

ತಮ್ಮ ವಿಶ್ವಾಸದ

ಬೀದರ

ವೀರೇಂದ್ರ ಸಿಂಪಿ

೨

ವಿಶ್ವದ ಮೊಟ್ಟ ಮೊದಲ ಪ್ರಜಾಸಾಹಿತ್ಯ

ಋಗ್ವೇದ, ಈವರೆಗಿನ ತಿಳುವಳಿಕೆಯಂತೆ ವಿಶ್ವದ ಮೊಟ್ಟಮೊದಲ ಪ್ರಜಾಸಾಹಿತ್ಯ ಮೌಖಿಕ ಕಾರಣ ಒಂದೇ ಅಲ್ಲ, ನಾನಾ ಕಸುಬಿನ ಜಾತಿಯ ದುಡಿಮೆಯ ಜೊತೆಗೇ ಕಟ್ಟಿದ ಹಾಡು ಅಥವ ಹಾಡಿನಕಟ್ಟು ಎಂಬುದೇ ಇದರ ಮಹತ್ವ ಒಂದರ್ಥದಲ್ಲಿ ಮೊದಲ ಜಾನಪದ ಸಾಹಿತ್ಯವೂ ಕೂಡ. ಆದರೆ ಸಂಸ್ಕೃತ ಭಾಷೆಯಲ್ಲಿ ಮೂಡಿದ ವೇದ, ಕ್ರಮೇಣ ಸನಾತನ ಬ್ರಾಹ್ಮಣ ವೈದಿಕ ವರ್ಗ ತನ್ನ ಸ್ವತ್ತು ಎಂಬಂತೆ ಅಪಾರ್ಥಕ್ಕೆ ಒಳಗಾಗಿಸಿ ಬಿಟ್ಟಿತೇನೊ! ಅವರು ನಂಬಿಸಿದರೊ ಇವರು ನಂಬಿದರೊ ಅಂತು ಇವತ್ತಿನವರೆಗೂ ಒಂದು ಭಾಷೆ, ಸಾಹಿತ್ಯ, ಮಂತ್ರ – ಒಂದು ಜಾತಿಯ ಕಸುಬಿನ ಗುತ್ತಿಗೆ ಎಂಬ ತಪ್ಪು ಕಲ್ಪನೆಯೇ ಕಂಡುಬರುತ್ತಿದೆ. ಇದರಿಂದ ನಂಬಿಸಿದವರು ಪಟ್ಟ ಸುಖಕ್ಕಿಂತ, ನಂಬಿದವರು ಕಳೆದುಕೊಂಡ ನಷ್ಟವೇ ಹೆಚ್ಚಾಯಿತು. ಇದೆಲ್ಲಕ್ಕೂ ಮುಖ್ಯ; ಋಗ್ವೇದ ಏನು, ಏನು ಹೇಳುತ್ತೆ, ಯಾವುದಕ್ಕಾಗಿ ಹೇಳುತ್ತೆ – ಇಂತಹ ಅರಿವಿಗೆ; ಭಾಷೆಯ, ಸಂಸ್ಕೃತಿಯ ಕಟ್ಟುಪಾಡುಗಳೇ ಕಂದಕವಾಗಿ ಸಾಮಾಜಿಕ ಜೀವನ ಛಿದ್ರಛಿದ್ರವಾಯಿತು. ಆ ಮೂಲಕ, ಅರಿತವರು ಅರಿಯದವರು ಇಬ್ಬರೂ ಕೂಡಿಯೇ ಋಗ್ವೇದದ ಮಹೋನ್ನತ ಸಿದ್ಧಿ, ಸಾಧನೆಗಳನ್ನೇ ನೀರುಪಾಲು ಮಾಡಿಬಿಟ್ಟರು.

ಅಂತಹ ಮೌಖಿಕ ಸಾಹಿತ್ಯ, ಬರಹರೂಪಕ್ಕಿಳಿದು, ಗ್ರಂಥಸ್ಥವಾಗಿ, ದೇಸೀಯ ಕನ್ನಡದಲ್ಲಿ ಒಡಮೂಡಬೇಕಾದರೆ ೨೦ನೇ ಶತಮಾನದವರೆಗೆ ಕಾಯಬೇಕಾಯಿತು. ಮೈಸೂರಿನ ಅರಮನೆಯವರು ಹೊರತಂದ ಆ ಬೃಹತ್ ಸಂಪುಟಗಳು, ನಾಡಿನ ಪ್ರಜೆಗಳ ಕೈ ಸೇರುವುದಕ್ಕಿಂತ ಬ್ರಾಹ್ಮಣ – ವೀರಶೈವ ಪಂಡಿತರ ಮನೆಗಳ ಮಠಗಳ ಹಾಸಿಗೆ ದಿಂಬುಗಳಾದದ್ದು ದುರಂತ. ಹೀಗಿರುವಾಗ, ನನಗೆ ತಿಳಿದಂತೆ ಆನಂತರ ಕನ್ನಡದ ಇಬ್ಬರು ವಿದ್ವಾಂಸರು, ಸೃಜನಶೀಲ ಧೀಮಂತರು ಮರುಸೃಷ್ಟಿ ಮಾಡುವ ಪ್ರಯತ್ನ ಕಂಡುಬರುತ್ತಿದೆ. ಕೆ.ಸಿ ಚೌಡಪ್ಪರೆಡ್ಡಿ ಅವರು ಸಂಪಾದಿಸಿದ 'ಗ್ರಾಮಾಭ್ಯುದಯ ಮತ್ತು ಸಹಕಾರ' ಮಾಸ ಪತ್ರಿಕೆಯ ಜನವರಿ ೧೯೫೪ ರಿಪಬ್ಲಿಕ್ ವಿಶೇಷಾಂಕದಲ್ಲಿ ದೇವುಡು ನರಸಿಂಹಶಾಸ್ತ್ರಿ ಅವರು, ಟಿ. ಶ್ರೀಪತಿಯವರು ಸಂಪಾದಿಸಿದ 'ಪ್ರಕಾಶಿನೀ' ಮಾಸ ಪತ್ರಿಕೆಯ ಜನವರಿ ೧೯೬೦ ಪರ್ಯಾಯ ಮಂಗಲೋತ್ಸವ ಹಾಗೂ ಫೆಬ್ರವರಿ ೧೯೬೦ರ ಸಂಚಿಕೆಗಳಲ್ಲಿ ಬನ್ನಂಜೆ ಗೋವಿಂದಾಚಾರ್ಯ ಅವರು – ಪದ್ಯರೂಪದಲ್ಲಿಯೇ ಕನ್ನಡಕ್ಕೆ ತರುವ ಯತ್ನ ಕಂಡುಬರುತ್ತಿದೆ. ಆದರೆ ನನ್ನ ಪಾಲಿಗೆ ಸಿಕ್ಕ 'ಪುಸ್ತಕಮನೆ'ಯಲ್ಲಿರುವ ಭಾಗಗಳು ಇಷ್ಟು ಮಾತ್ರವೇ. ಇನ್ನೆಷ್ಟು ಸಂಚಿಕೆಗಳಲ್ಲಿ, ಇನ್ನೆಷ್ಟು ಭಾಗಗಳು ಪ್ರಕಟವಾಗಿವೆಯೋ ಬಲ್ಲವರು ಹೇಳಬೇಕು. ಅಂತೆಯೇ ಬೇರೆ ಯಾರಾದರೂ ಈ ದಿಕ್ಕಿನಲ್ಲಿ ಕೈಗೊಂಡ ಪ್ರಯತ್ನಗಳು ಏನು ಎಂಬುದು ಇನ್ನು ಮುಂದೆ ಹೊರಬೀಳಬೇಕಾಗಿದೆ.

ನಮ್ಮ ನಡುವೆ ಜೀವಂತವಾಗಿರುವ ಬನ್ನಂಜೆ ಗೋವಿಂದಾಚಾರ್ಯರು ಈ ಕೆಲಸವನ್ನು ಪೂರ್ತಿಮಾಡಿದ್ದರೆ, ಈಗಲೂ ಕೈಗೊಂಡರೆ; ಕನ್ನಡ ಭಾಷೆ, ಸಂಸ್ಕೃತಿಯ ಮೈ ಮನಸ್ಸು ತುಂಬಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಸಂಪಾದಕ

೩

ಋಗ್ವೇದ : ಪ್ರಥಮಸೂಕ್ತ

ದೇವುಡು ನರಸಿಂಹಶಾಸ್ತ್ರಿ

ಹೊಗಳುವೆನಗ್ನಿ ಪುರೋಹಿತನಾ
ಯಜ್ಞದ ದೇವನ ರುತ್ವಿಜನಾ
ದೇವನ ರುತ್ವಿಜನಾ ಹೋತೃವ
ರತ್ನಗಳೀವರೊಳಗ್ಗಳನಾ ॥ ೧ ॥

ಅಂದಿನ ಋಷಿಗಳು ಹೊಗಳಿದರು ।
ಇಂದಿನ ಋಷಿಗಳು ಹೊಗಳುವರು॥
ಋಷಿಗಳು ಹೊಗಳುವರು ಅಗ್ನಿಯು ।
ತಂದಪನಿಲ್ಲಿಗೆ ದೇವರನು ॥ ೨ ॥

ದಿನ ದಿನ ಬೆಳೆಯುವ ಧನಗಳನು ।
ದಾನದಿ ಲಭಿಸುವ ಕೀರ್ತಿಯನೂ ॥
ಲಭಿಸುವ ಕೀರ್ತಿಯನೂ ಅಗ್ನಿಯು ।
ಕೊಡುವನು ವೀರಸುಪುತ್ರರನೂ ॥ ೩ ॥

ನೀಬಳಬಳಸಿರೆ ಯಜ್ಞವದೂ ।
ದೇವತೆಗಳನೇ ಸೇರುವುದು ॥
ನೀ ಬಳಸಿರೆ ಯಜ್ಞವದೂ ಅಗ್ನಿಯೆ ।
ದಿಟವೈ ತೃಪ್ತಿಯನೀಯುವುದು ॥ ೪ ॥

ಹೋತೃವು ಅಗ್ನಿಯು ನುರಿತವನೂ ।
ಚಿತ್ರಶ್ರವರೊಳ ಗುತ್ತಮನೂ ॥
ಶ್ರವರೊಳಗುತ್ತಮನೂ ಸತ್ಯನು
ದೇವನು ದೇವರ ತಂದಪನೂ ॥ ೫ ॥

ಹವಿಯನು ನಿನಗಿತ್ತವನಿಗೆ ನೀ ।
ನೊಲಿದೀಯುವೆ ಧನಕನಕಗಳ॥
ಈಯುವೆ ಧನಕನಕಗಳೆಂಬುದು ।
ಸತ್ಯವು ಸತ್ಯವು ಅಂಗಿರನೇ ॥ ೬ ॥

ಇರಳೂ ಹಗಲೂ ನಮಿಸುತ್ತಾ ।
ಮನದಿಂ ನಿನ್ನನೆ ನೆನೆಯುತ್ತಾ ॥
ನಿನ್ನನೇ ನೆನೆಯುತ್ತಾ ದಿನ ದಿನ ।
ಅಗ್ನಿಯೆ! ಬರುವೆವು ನಿನಗಾಗಿ ॥ ೭ ॥

ಬಾಧೆಯನೀಗಿಸಿ ಯಜ್ಞವನು ।
ಬೆಳಗಿಪ ಬೆಳಗುವ ನಾಥನನೂ ॥
ಬೆಳಗುವ ನಾಥನನೂ ನುತಿಪೆವು ।
ನಿಜನಿಲಯದೆ ವರ್ಧಿಸುವನನೂ ॥ ೮ ॥

ತಂದೆಯು ತನುಜಗೆ ವೊಲಿವಂತೆ,
ಅಗ್ನಿಯೆ ! ಸುಲಭದಿ ವೊಲಿಯಯ್ಯ
ಸುಲಭದಿ ವೊಲಿಯಯ್ಯ ! ಸ್ವಸ್ತಿಯು
ನಮಗೊಳ್ಳೆಯದೇ ಬರಲಯ್ಯ ॥ ೯ ॥

೪

ಋಗ್ವೇದದ ಸೂಕ್ತಗಳು

ಬನ್ನಂಜೆ ಗೋವಿಂದಾಚಾರ್ಯ

॥೧॥ ಓ ಅಗ್ನಿನಾರಾಯಣನೆ, ನಿನ್ನ ನುತಿಸುವೆ-ನೀನೆ
ಜೀವನದ ಪುರೋಹಿತನು ದೇವತೆಯು ಋತ್ವಿಜನು
ಹೋಮಿಸುವನೂ ನೀನೆ ಸುಖಿಗಳರಸ

॥೨॥ ಹಳಬರೂ ಹೊಸಬರೂ ಎಲ್ಲ ಕವಿಗಳು ಕೂಡಿ
ಹಾಡಿ ಕೊಂಡಾಡಿರುವ ಅಗ್ನಿದೇವನು ನಮ್ಮ
ಬಾಳ ಹೊಸಿತಿಲಿಗೆ ದಿವ್ಯವಂ ಕರತರಲಿ

॥೩॥ ಅಗ್ನಿಯಿಂದಲೆ ಹಿರಿಯ ಸಿರಿಯನ್ನು ಪಡೆಯುವರು
ದಿನದಿನಕೆ ಬೆಳೆಯುವರು, ಅಗ್ನಿಯಿಂದಲೆ ಎಲ್ಲ
ಜೀವನದ ಸಾಫಲ್ಯ-ಮರಿಮಕ್ಕಳು

॥೪॥ ಸರಿಯಾದ ದಾರಿಯಲಿ ನಡೆದುಬಂದಿಹ ಬಾಳು
ಅಗ್ನಿದೇವನೆ, ನಿನ್ನ ಕಾಪಿನಲಿ ಸಾಗುವುದು
ಅಂಥವರ ಬಾಳೊಂದೆ ದಿವ್ಯಕೇರುವುದು

॥೫॥ ಅಗ್ನಿ ಹೋಮಿಸುವವನು, ಎಲ್ಲವನು ಬಲ್ಲವನು
ಎಲ್ಲಗುಣ ಉಳ್ಳವನು, ಕೀರ್ತಿಭರಿತನು ತಾನು
ಐತರಲಿ ನಮ್ಮೆಡೆಗೆ ಎಲ್ಲ ದೇವತೆಗಳೊಡನೆ

॥೬॥ ಅಂಗಗಳ ನೇತಾರ, ಅಗ್ನಿನಾರಾಯಣನೆ,
ಕೊಡುವವಗೆ ಹಿತವನ್ನು ನೀಂ ಮಾಡಲೆಳಸಿದೊಡೆ
ನಿನ್ನ ಬಯಕೆಯು ಒಂದು ಹುಸಿಯಾದುದುಂಟೆ

॥೭॥ ಅಗ್ನಿ ದೇವನೆ, ಬಾರ ದಿನದಿನವು ಹಗಲಿರುಳು
ನಿನ್ನನ್ನೆ ನೆನೆಯುವೆವು – ನಿನಗೆಂದೆ ನಮಿಸುವೆವು
ನಿನ್ನ ಬಳಿಗೇ ಇಹುದು ನಮ್ಮ ಪಯಣ

॥೮॥ ಬಾಳಿನೊಡೆಯನೆ ಬಾರ, ತಿಳಿವನುಳಿಸೌ ಬಾರ,
ನಮ್ಮ ಹೃದಯಾಂತರಾಳದಲಿ ಬೆಳಗುವವನೇ ಬಾರ,
ಪರಿಪೂರ್ಣತತ್ವವೇ ಬಾ ನಮ್ಮ ಬಳಿಗೆ

॥೯॥ ಮಕ್ಕಳನು ತಂದೆ ತಾ ಮಮತೆಯಲಿ ಕಾಣನೆ?
ಓ ಜಗಜ್ಜನಕನೇ ನೀನೆನ್ನ ಸರ್ವಸ್ವ
ಮಂಗಳದ ಪಥಕೆನ್ನ ಕೊಂಡೊಯ್ದು ಸಲಹು

॥೧೦॥ ವಾಯುದೇವನೇ, ಬಾರ, ತಿಳಿವಿನಾಗರ ಬಾರ
ಇದಕೊ-ನಿನಗೆಂದೆ ಮಾಡಿರುವ ಹಸನಾದ ಸೋಮರಸ
ನಮ್ಮ ಕರೆ ಕೇಳಿಸಿತೆ? ಬಂದದನು ಕೊಳುವೆಯ

॥೧೧॥ ಬಾಳಕತೆಯನು ಬಲ್ಲ ನಾವೀಗ ಹಿಂಡಿರುವ
ಜೀವನದ ಸೋಮರಸ ನಿನಗಾಗಿ ಓ ವಾಯು,
ನಮ್ಮ ನುಡಿ ಹಾಡುವುದು ನಿನ್ನ ಗುಣವನ್ನೆ

॥೧೨॥ ನಿನ್ನ ಕುರಿತಾಡಿರುವ ಭವ್ಯತೆಯ ನುಡಿಜೇನು
ಜೀವನದ ರಸಹೀರಿ ಜೀವನದ ಪಥ ಮೀರಿ
ನಿಂತ ಯಜಮಾನಗದು ಕಾಮಧೇನು

॥೧೩॥ ಓ ಇಂದ್ರ, ಓ ವಾಯು, ಬಟ್ಟಲಲಿ ಒಟ್ಟಿರುವ
ಸೋಮರಸ ನಿಮಗಾಗಿ ತುಂಬಿ ತುಳುಕಾಡುತಿದೆ
ಹಿತವರೊಡನೈತಂದು ಸವಿಯಬಹುದಲ್ಲ

॥೧೪॥ ಮುಗಿಲಿನಲಿ ಅರಳಿರುವ ಜೀವನದ ಬೆಳಕಿನಲಿ
ಅವಿತಿರುವ ಓ ವಾಯು, ಓ ಇಂದ್ರ, ತಳುವದಿರಿ
ಬನ್ನಿ–ಈ ಸೋಮರಸ ನಿಮಗೆಂದೆ–ಬನ್ನಿ

॥೧೫॥ ಓ ವಾಯು, ಓ ಇಂದ್ರ, ಓ ನಿತ್ಯನಿರ್ಮಲರೆ,
ಬಾಳ ಬೇಳುವ ಜನಕೆ ಬಳುವಳಿಯ ನೀಡಲ್ಕೆ
ಮನದಿ ಮಮತೆಯ ಹೊತ್ತು ತಳುವದೆಯೆ ನೀವಿತ್ತ ಚಿತ್ತೈಸಬೇಕು

॥೧೬॥ ಮಿತ್ರನನು ಕರೆಯುವೆಂ, ವರುಣನನು ಕರೆಯುವೆಂ
ಸೊಗದ ಸುಗ್ಗಿಗಳವರು ಎಮ್ಮ ಬಗೆ ತೊಳೆಯುವರು
ಬ್ರಹ್ಮದರಿವನು ಜತೆಗೆ ಮೂಡಿಸುವರು

॥೧೭॥ ವೇದಗಳು ಹಾಡಿರುವ ಪೂರ್ಣತೆಯ ಮಟ್ಟಿರುವ
ಓ ಮಿತ್ರ, ಓ ವರುಣ, ನಿಮ್ಮ ಕರುಣೆಯ ಬಲದಿ
ನಮ್ಮ ಬಾಳಿನ ಪಥದೊಳರಿವು ತುಂಬಿರಲಿ

॥೧೮॥ ಎಲ್ಲವನು ಬಲ್ಲವರೆ, ಎಲ್ಲರೊಳಗುಳ್ಳವರೆ,
ಪರಿಪೂರ್ಣರಾದ ಓ ಮಿತ್ರ–ವರುಣರೆ, ಬಾಳ
ಕಣದಿ ಹೋರುವ ಜಾಣು ನಮಗೆ ಬರಲಿ

॥೧೯॥ ಅಶ್ವಿನಿಗಳೇ, ಶುಭದ ರಕ್ಷಣೆಗಳೇ ನಿಮಗೆ
ಜಗವ ಕಾಯುವ ದೀಕ್ಷೆ, ಜನದ ಬಯಕೆ ತುಂಬುವದೀಕ್ಷೆ
ಬದುಕಲೆಳಸುವ ಜನಕೆ ಕರುಣಿಸುವಿರಾ ಒಂದು ತುತ್ತು

॥೨೦॥ ಅಶ್ವಿನಿಗಳೇ, ನಿತ್ಯ ಜಗದ ಹೊರೆ ಹೊತ್ತಿರುವ
ನಿಮಗೆನಿತು ಕಜ್ಜವೋ! ಆದರೂ ಮನಗೊಟ್ಟು
ಆಲಿಸುವಿರಾ ನಮ್ಮ ಬೇಡಿಕೆಗಳನ್ನು

॥೨೧॥ ನಾಸತ್ಯರೇ, ನಿಮಗೆ ಪ್ರಾಣದೇವನ ನೇಹ
ನಿಮಗಿಲ್ಲ ಶತ್ರುಗಳು, ಜೀವನದ ಯಜಮಾನ
ಹಿಂಡಿರುವ ಸೋಮರಸ ನಿಮ್ಮದೇ – ಬನ್ನಿ

॥೨೨॥ ದೇವರಾಜನೆ, ಬಾರ–ದಿವ್ಯತೇಜನೇ, ಬಾರ
ನವುರಾದ ಬಟ್ಟೆಯಿಂ ಸೋಸಿರುವ ಸೊಗಸಾದ
ಸೋಮರಸ ಕಾದಿಹುದು ನಿನ್ನ ಬರವನ್ನೆ

॥೨೩॥ ನಿನ್ನ ತುತಿಸುವೆವಾವು ವಿಪ್ರರಭ್ಯರ್ಥಿಸುವರ್
ಹಿಂಡಿರುವ ಸೋಮರಸ – ಹಾಡಿರುವ ಗಾನರಸ
ಸವಿಯಲ್ಕೆ ಓ ಇಂದ್ರ, ಚಿತ್ತೈಸಬೇಕು

॥೨೪॥ ದುಃಖಪರಿಹಾರಕನೆ, ಇಂದ್ರದೇವನೆ, ಬಾರ
ನಮ್ಮ ನುತಿಯಾಲಿಸಲು ತ್ವರೆಯಿಂದಲೈತಂದು
ಮನಮಾಡು ನಾವಿತ್ತ ಸೋಮರಸದಲ್ಲಿ

॥೨೫॥ ಲೋಕವನು ಹೊತ್ತವರೆ, ಎಲ್ಲವನು ಬಲ್ಲವರೆ,
ಜಗದ ದಾತಾರರೇ, ವಿಶ್ವ – ದೇವತೆಗಳಿರ,
ನಮ್ಮ ಈ ಸೋಮರಸದ ಕೊಳಲು ಬನ್ನಿ

॥೨೬॥ ಕರ್ಮದೀಕ್ಷಿತರಿರಾ, ವಿಶ್ವದೇವತೆಗಳಿರ,
ಹಗಲಿನಲಿ ಹೊಂಬೆಳಕು ಹರಿವಂತೆ ಜೀವನದ
ರಸದೆಡೆಗೆ ನಿಮ್ಮೊಲವು ಹೊನಲಾಗಿ ಹೊಮ್ಮಿಬರಲಿ

॥೨೭॥ ವಿಶ್ವದಧಿದೈವಗಳೆ, ನೀವು ಹಿಂಸಕರಲ್ಲ
ದುಗುಡ ಕೊಡುವವರಲ್ಲ – ನಿಮ್ಮರಿವು ನಿಚ್ಚಳಂ
ಓ ಜಗಜ್ಜೀವನರೆ, ನಮ್ಮೆಡೆಗೆ ಬನ್ನಿ

॥೨೮॥ ನುಡಿಯ ದೇವತೆ, ಬಾರ ಓ ಸರಸ್ವತಿ, ಬಾರ
ತೊಳೆದು ಮನವವು ತೊಳಗು, ಅಲ್ಲೆ ಬಗೆಯಲಿ ಬೆಳಗು
ಈ ಕಾವ್ಯಯಜ್ಞವನು ಒಲುಮೆಯಿಂ ಹರಸು

೨೯॥ ನನ್ನ ನಾಲಿಗೆಯಿಂದ ನಲ್ನುಡಿಯ ನುಡಿಸುತಿಹ,
ನನ್ನಂತರಂಗವನು ಒಳಿತಿನೆಡೆ ನಡೆಸುತಿಹ,
ಸರಸತಿಯೆ ಕೃತಿಯಜ್ಞಮಂ ಪೊರೆಯುತಿಹಳು

॥೩೦॥ ಸರಸತಿಯ ಹಿರಿತನಕೆ–ಸುಖಕೆ ಪರಿಮಿತಿಯಿಲ್ಲ
ನಮಗೆ ತಿಳಿವನ್ನಿತ್ತು ನಮ್ಮನೆಚ್ಚರಿಸುವಳು
ನಮ್ಮ ಧೀಶಕ್ತಿಯಂ ಬೆಳಗಿಸುವಳು

॥೩೧॥ ಸಾಧುರೂಪವ ಹೊತ್ತ ಓ ಇಂದ್ರ, ನೀನೆಮಗೆ
ಹಾಲುಣ್ಣುವಾತನಿಗೆ ಕಾಮಧೇನುವಿನಂತೆ!
ನಮ್ಮ ರಕ್ಷಣೆಗಾಗಿ ನಿನ್ನನ್ನು ಕೂಗುತಿಹೆವು

॥೩೨॥ ಸೋಮಪನೆ, ಭಕ್ತಿಯಿಂ ನಿನ್ನ ಪೂಜಿಸುವವಗೆ
ಸುಖವೀವೆ, ತಿಳಿವೀವೆ, ನಮ್ಮ ಯಾಗಕು ಬಂದು
ಸೋಮರಸ ಕೊಳಬೇಕು – ಸವಿಯಬೇಕು

॥೩೩॥ ನಿನ್ನ ಮಹಿಮೆಯಪಾರ ನಾವದನು ತಿಳಿಯುವೆವು
ನಮ್ಮ ಕಡೆಗೇ ಇರಲಿ ನಿನ್ನ ಕರುಣಾದೃಷ್ಟಿ
ನೀನು ಚಿತ್ತೈಸಬೇಕೆಮ್ಮ ಬಳಿಗೆ

॥೩೪॥ ಯಾರಿಗೂ ತಿಳಿಯದೊಲು ಎಲ್ಲ ಕಡೆ ತುಂಬಿರುವ
ಸರ್ವಜ್ಞನೆಲ್ಲರಿಗು ಹಿರಿಯ ನೇಹಿಗನಿಂದ್ರಂ
ಆತನಿಗೆ ಶರಣಾಗು – ಗುರುಮುಖದಿ ಕೇಳು

॥೩೫॥ ಭಗವಂತನೆಡೆಯವರೆ, ಅವನನ್ನೆ ನೆನೆವವರೆ,
ಸಂಸಾರಸಾರವನೀಸಿ ಪಾರಾದವರೆ,
ನೀಮೆಮಗೆ ಭಗವಂತನರಿವು ಕರುಣಿಸಬೇಕು

॥೩೬॥ ಶತ್ರುಪರಿಹಾರಕನೆ, ನಮ್ಮ ಬಾಳಿನ ಸೊಬಗು
ನಮ್ಮರಿಗಳೂ ಕಂಡು ಮೆಚ್ಚುವಂತಿರಬೇಕು
ನಿನ್ನೊಲುಮೆಯಿಂ ಸುಖದಿ ಬದುಕಬೇಕು

॥೩೭॥ ಸಂತಸದಿ ಬೀಳಿಸುವ-ಎದ್ದವನನೋಡಿಸುವ
ಹರಿಯುತಿಹ ಸೋಮರಸ ಬಾಳಬೇಳ್ವೆಗೆ ತೊಡಿಗೆ -
ಪರಮವೀರನೆ, ಬಾರ-ಸವಿದುನೋಡ

॥೩೮॥ ನೂರು ಯಾಗವ ಮಾಡಿ ಸೋಮರಸಮಂ ಕುಡಿದು
ಅಜ್ಞಾನ ಬಂಧನವ ನೀಂ ತೊಡೆದುಕೊಂಡಿರುವೆ-
ದಾನಮಾಡುವ ಜನಕೆ ಸುಖವ ಕೊಡುವೆ

॥೩೯॥ ಅಜ್ಞಾನ ದಾರಿದ್ರ್ಯದೊಡನೆ ಹೋರುವ ಬಯಕೆ
ತಿಳಿವನರಸುವ ಬಯಕೆ ನಮಗುಂಟು - ಇನ್ನೇನು ?
ಹೋರಾಟದಲಿ ನಿನ್ನ ಹರಕೆಯುಂಟು

॥೪೦॥ ಸಂಪದದ ನೆಲೆ-ಸುಖದ ಸೆಲೆ-ದುಗುಡದವಸಾನ
ಸೋಮರಸ ನೀಡುವಗೆ ಪರಮಸುಹೃದಿಂದ್ರನಂ
ಸಾಮಮಂತ್ರಗಳಿಂದ ಹಾಡಿಕೊಂಡಾಡಿರಿ

॥೪೧॥ ಸಾಮಗಾನವ ಬಲ್ಲ ಗೆಳೆಯರಿರ, ಓ ಬನ್ನಿ
ಆಸನವ ಮಂಡಿಸಿರಿ, ಇಂದ್ರದೇವನ ಮೈಮೆ-
ಯುದ್ಗಾನದಿಂದೆಮ್ಮ ಮೋದಗೊಳಿಸಿ

॥೪೨॥ ಪೂರ್ಣರಿಗು ಪೂರ್ಣತಮ, ಬಯಸಲಹ ವಸ್ತುಗಳಿ-
ಗೆಲ್ಲಕೀಶ್ವರನವನು; ಸೋಮರಸ ಸಿದ್ಧವಿದೆ.
ಇಂದ್ರನನು ಮನವಿಟ್ಟು ಹಾಡಿಕೊಂಡಾಡಿರಿ

ಈಶಾವಾಸ್ಯಂ, ಅಂಬಲಪಾಡಿ, ಉಡುಪಿ ೫೭೬ ೧೦೩ ☐

ಪ್ರಿಯ ಹರಿಹರಪ್ರಿಯ,
ನಿಮ್ಮ 'ಪ್ರಜಾಸಾಹಿತ್ಯ'ದ ಹತ್ತನೇ ಸಂಚಿಕೆ ಓದಿ ಖುಷಿ ಆಯಿತು.
ನಿಜ ಹೇಳಬೇಕೆಂದರೆ, ಈತರದ ಪತ್ರಿಕೆ ಕನ್ನಡದಲ್ಲಿ ಇರಲಿಲ್ಲ. ಹಿಂದಿನದನ್ನು, ಈಗಿನದನ್ನು ಮಿಶ್ರಮಾಡುವ ನಿಮ್ಮ ಚಾಕಚಕ್ಯತೆ ನನಗೆ ಮೆಚ್ಚಿಗೆ ಆಯಿತು. ಹಿಂದಿನದು ಎಂದರೆ ಹಳಗನ್ನಡ ಕಾಲದ್ದಲ್ಲ; ೨೦ನೇ ಶತಮಾನದ ಲೇಖಕರಿಗೆ ಸಂಬಂಧಿಸಿದವು.
ನಾನು ನೀವು ೨೦ನೇ ಶತಮಾನದಲ್ಲೇ ಬೆಳೆದವರು. ೨೦ನೇ ಶತಮಾನದ ವ್ಯವಹಾರಗಳು ನಮಗೆ ಗೊತ್ತು. ಆದರೆ ಎಲ್ಲವೂ ನಮಗೆ ಗೊತ್ತಿದೆ ಎಂದು ಹೇಳಲು ಸಾಧ್ಯವಿಲ್ಲ. ನಿಮ್ಮ ಪತ್ರಿಕೆ ಎಷ್ಟೋ ವಿಷಯಗಳನ್ನು ನನಗೆ ತಿಳಿಸಿಕೊಟ್ಟಿತು. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ.
ನಿಮ್ಮ 'ಪ್ರಜಾಸಾಹಿತ್ಯ' ಸಮೃದ್ಧವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ನಿಮ್ಮ ಪ್ರಯತ್ನ ಯಶಸ್ವಿಯಾಗಲಿ. ಸಾಹಿತ್ಯಪ್ರಿಯರು 'ಪ್ರಜಾಸಾಹಿತ್ಯ'ವನ್ನು ಕೊಂಡು ಓದುವಂತಾಗಲಿ.

ನಿಮ್ಮ

ಬಿ.ವಿ. ವೈಕುಂಠರಾಜು

೫

ಜಾನಪದ ಸಾಹಿತ್ಯ ಕುರಿತು ಮೊಟ್ಟ ಮೊದಲ ಲೇಖನ?

ಸಿ.ಟಿ.ಗುರುಪ್ರಸಾದ್ ಅವರು (ಕನ್ನಡ ಜಾನಪದ ಗ್ರಂಥಸೂಚಿ, ೨೦೦೦) ಗುರುತಿಸಿರುವಂತೆ, ಹಾಮಾನಾಯಕ (ಕನ್ನಡ ಜಾನಪದ ಗ್ರಂಥಸೂಚಿ, ೧೯೭೪) ಅವರು ೧೮೦೦ರಿಂದ ೧೯೭೪ರ ವರೆಗೆ ಪ್ರಕಟವಾದ ಜಾನಪದ ಗ್ರಂಥಗಳ ಸೂಚಿಯನ್ನು ಮುಂದುವರೆಸಿ ೧೯೭೫ರಿಂದ ೨೦೦೦ ವರೆಗಿನ ಜಾನಪದ ಗ್ರಂಥಗಳ ಸೂಚಿಯನ್ನು ಮಾಡಿದ್ದಾರೆ. ಆದರೆ, ನಾಯಕರು ತಮ್ಮ ಕೃತಿಯ ಮುನ್ನುಡಿಯಲ್ಲಿ :

> "ಕರ್ನಾಟಕದಲ್ಲಿ ಜಾನಪದ ಸಂಗ್ರಹ ಕಳೆದ ಶತಮಾನದಿಂದಲೇ ಆರಂಭವಾದರೂ ಗೀತೆ ಮತ್ತು ಗಾದೆಗಳಿಗೆ ಸಂಬಂಧಿಸಿದಂತೆ ಮಾತ್ರ ಆ ಕಾರ್ಯ ತಕ್ಕ ಮಟ್ಟಿಗೆ ಆಗಿದೆ. ಜಾನಪದದ ಉಳಿದ ಪ್ರಕಾರಗಳತ್ತ ಯಾರೂ ವಿಶೇಷವಾದ ಆಸಕ್ತಿಯನ್ನು ಹರಿಸದೆ ಆ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಅಪಾರವಾಗಿ ಉಳಿದಿದೆ."

ನನಗೆ ತಿಳಿದಂತೆ ಗಾದೆ, ಜಾನಪದ ಅಧ್ಯಯನ ಕ್ಷೇತ್ರಕ್ಕೆ ಸೇರುವಂತೆಯೇ ಈವರೆಗೂ ಭಾಷಾಶಾಸ್ತ್ರ, ನಿಘಂಟು ಕ್ಷೇತ್ರಗಳಿಗೂ ವಿಸ್ತರಿಸಿಕೊಳ್ಳುತ್ತ ಬಂದದ್ದರಿಂದ, ಈಗಾಗಲೇ ಜಾನಪದ ಅಭ್ಯಾಸಿಗಳು ಗ್ರಹಿಸಿರುವಂತೆ, ಜೂನ್ ೧೯೩೧ರಲ್ಲಿ ಹೊರಬಂದ, ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು ಸಂಗ್ರಹಿಸಿದ 'ಗರತಿಯ ಹಾಡು', ಕನ್ನಡದ ಮೊದಲ ಜಾನಪದ ಸಂಗ್ರಹ, ಚೆನ್ನಮಲ್ಲಪ್ಪ ಎಂದರೆ ಮಧುರಚೆನ್ನ ಅವರು. ಲಿಂಗಪ್ಪ ಅಂದರೆ ಯಾರು? ರೇವಪ್ಪ ಯಾರು? ಮೊದಲಾದ ಗೆಳೆಯರು ಎಂದರೆ ಇನ್ನೂ ಯಾರು ಯಾರು? ಮುಂದೆ ಎರಡೇ ವರ್ಷಕ್ಕೆ (೧೯೩೩) ಹೊರತಂದ ಇನ್ನೊಂದು ಕೃತಿ ಸಿಂಪಿಲಿಂಗಣ್ಣ ಹಾಗೂ ಪಿ. ಧೂಲಾ ಅವರ 'ಜೀವನ ಸಂಗೀತ'. ಲಿಂಗಪ್ಪ – ಲಿಂಗಣ್ಣ ಇಬ್ಬರೂ ಒಬ್ಬರೊ? ಅಥವಾ ೧೯೫೫ರಲ್ಲಿ 'ಗರತಿಯ ಹಾಡು'ಗೆ ಅರಿಕೆ ಬರೆದ ಸಿಂಪಿಲಿಂಗಣ್ಣ ಅವರು, ಪಿ. ಧೂಲಾ ಅವರು, ಈ ಮೊದಲು ಪ್ರಸ್ತಾಪಿಸಿದ 'ಮೊದಲಾದ ಗೆಳೆಯರು' ಗುಂಪಿನಲ್ಲಿದ್ದವರೊ? ದಯವಿಟ್ಟು ಬಲ್ಲವರು ಈಗಲಾದರು ದಾಖಲಿಸಬೇಕಾಗಿ ಕೋರುವೆ.

ಅಂತೆಯೇ 'ಗರತಿಯ ಹಾಡು' ಸಂಕಲನದಲ್ಲಿ ಅಭ್ಯಾಸಪೂರ್ಣ ವಿಮರ್ಶಾತ್ಮಕ ಲೇಖನಗಳನ್ನು ಬರೆದ ನಾಲ್ವರಲ್ಲಿ (ಹೀಗೆ ಕನ್ನಡದಲ್ಲಿ ಒಂದು ಕೃತಿಗೆ ನಾಲ್ಕು ಹಾಗೂ ಅದಕ್ಕೂ ಹೆಚ್ಚಿನ ಮುನ್ನುಡಿಗಳನ್ನು ಬರೆದವು ಎಷ್ಟಿವೆ?) ಒಬ್ಬರಾದ ದ.ರಾ. ಬೇಂದ್ರೆ ಅವರು ಒಂದು ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ:

> "ನನಗೆ ತಿಳಿದ ಮಟ್ಟಿಗೆ ಗೆ। ಚೆನ್ನಮಲ್ಲಪ್ಪನವರು ವಿಜಾಪೂರ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಹಳ್ಳಿಯ ಸಾಹಿತ್ಯದ ವಿಷಯವಾಗಿ ಮಾತನಾಡಿದುದೇ ಮೊದಲು. ಅವರ ಪುಟ್ಟ ನಿಬಂಧವು ಮುಂದೆ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಯಿತು. ಹೊಸಪೇಟೆಯ ಶ್ರೀ ಹಣುಮಂತ ಗೌಡರು ಮೊದಲಾದವರು ಲಾವಣಿಗಳ ಸಂದರ್ಭವನ್ನು ಆಗಾಗ ಎತ್ತಿ ಮಾತನಾಡಿದರೂ, ಲಾವಣಿ ಸಾಂಗತ್ಯಗಳ ವಿಷಯವಾಗಿ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್‌ರವರು ಪರಿಷತ್ಪತ್ರಿಕೆಯಲ್ಲಿ ಬರೆದ ಸೊಗಸಾದ ಲೇಖನವೇ ಮಹತ್ವದ ಬರೆಹ. ಕಲಬುರ್ಗಿ, ಬೆಳಗಾವಿ ಮತ್ತು ಮೈಸೂರು ಈ ಮೂರು ಸಮ್ಮೇಲನಗಳಲ್ಲಿಯೂ ಪ್ರಮುಖವಾಗಿ ಶ್ರೀಮಾನ್ ಶ್ರೀಕಂಠಯ್ಯನವರ ಪ್ರೋತ್ಸಾಹದಿಂದಲೂ ಪ್ರೀತಿಗಾಗಿಯೂ ಜನಪದ ಸಾಹಿತ್ಯ ವಿಚಾರವನ್ನು ಕುರಿತು ಸಮ್ಮೇಲನದ ಸಭಾಸದರ ಸಮಕ್ಷಮದಲ್ಲಿ ಚರ್ಚಿಸುವ ಸಂಧಿ ನನಗೆ ದೊರೆಯಿತು. ಬೆಳಗಾವಿಯ ಸಮ್ಮೇಲನದಲ್ಲಿ ಮಾಸ್ತಿಯವರು ಈ ವಿಷಯವನ್ನು ಕುರಿತು ಮಾತನಾಡಿದರು. ಮುಂದೆ ಜಯಕರ್ನಾಟಕ ಪತ್ರಿಕೆಯವರು ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಯತ್ನಗಳಿಗೆ ಪ್ರೋಷಣೆಯನ್ನೀಯಲು ಆ ಮಾಸ ಪತ್ರಿಕೆಯಲ್ಲಿ ಪ್ರತ್ಯೇಕವಾಗಿ ಪುಟಗಳನ್ನು ಕೊಡುತ್ತ ಬಂದರು. ಈ ಮಧ್ಯದಲ್ಲಿ ಗೆ। ಪ್ರಹ್ಲಾದ ನರೇಗಲ್ಲರವರು 'ಕರ್ನಾಟಕ ಕಾಲೇಜ್ ಪತ್ರಿಕೆ'ಯಲ್ಲಿ 'ವಾಸ್ತವ

ಸಾಹಿತ್ಯ' ಎಂಬ ಲೇಖನವನ್ನೂ ಗ. ಬೆಟಗೇರಿಯವರು ಪರಿಷತ್ ಪತ್ರಿಕೆಯಲ್ಲಿ 'ಹಳ್ಳಿಗರ ಹಾಡುಗಳು' ಎಂಬ ಸೋದಾಹರಣವಾದ ನಿತಾಂತಮನೋಹರವಾದ ನಿಬಂಧವೊಂದನ್ನೂ ಮುಂಬಯಿಯ ಪ್ರಬೋಧಕ ಮಾಸಪತ್ರಿಕೆಯ ಸಂಪಾದಕರು ಹಿರಿಬರೆಹವೊಂದನ್ನೂ ಬರೆದು ಜನಪದ ಸಾಹಿತ್ಯ ಸಂಗ್ರಹದ ಕಾರ್ಯವನ್ನು ಎತ್ತಿ ಹಿಡಿದಿದ್ದಾರೆ. ಪ್ರಬುದ್ಧ ಕರ್ಣಾಟಕ, ರಂಗಭೂಮಿ, ಕಥಾಂಜಲಿ ಮೊದಲಾದ ಪತ್ರಿಕೆಗಳಲ್ಲಿಯೂ ಜನಪದ ಸಾಹಿತ್ಯವು ತಲೆದೋರದೆ ಇಲ್ಲ. ಈ ಪ್ರಯತ್ನಗಳ ಪ್ರಥಮ ಫಲವೆಂದು ಗ. ಚೆನ್ನಮಲ್ಲಪ್ಪನವರೂ ಅವರ ಗೆಳೆಯರೂ ಪ್ರಮುಖತಃ ಸಂಗ್ರಹಿಸಿದ, ಸಂಪಾದಿಸಿದ ಜನಪದಗಾಥಾ–ಸಂಹಿತೆಯನ್ನು ಕನ್ನಡಿಗರಿಗೆ ಕೊಡುವ ಸುಯೋಗವು ಉಂಟಾಗಿದೆ."

ಮೇಲೆ ಪ್ರಸ್ತಾಪಿಸಿದ ಸಂಗತಿಯ ಸ್ಪಷ್ಟತೆಗೆ: ವಿಜಾಪುರದಲ್ಲಿ ಸಾಹಿತ್ಯ ಸಮ್ಮೇಳನ ನಡೆದದ್ದು, ೧೯೨೩ರಲ್ಲಿ ೯ನೇ ಸಮ್ಮೇಳನ. ಮಾಸ್ತಿಯವರು 'ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು' ಲೇಖನ ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಸಂಪುಟ – ೯, ಸಂಚಿಕೆ–೪ ಜನವರಿ ೧೯೨೫ರಲ್ಲಿ ಪ್ರಕಟವಾಗಿದೆ. ಹೀಗಿರುವಾಗ ದಕ್ಷಿಣ ಕರ್ನಾಟಕದ ಮೊಟ್ಟ ಮೊದಲ ಜಾನಪದ ಸಂಗ್ರಹ ಬಂದದ್ದು ೧೯೩೩ರಲ್ಲಿ. ಅರ್ಚಕ ಬಿ.ರಂಗಸ್ವಾಮಿಭಟ್ಟರ 'ಹುಟ್ಟಿದಹಳ್ಳಿ ಹಳ್ಳಿಯಹಾಡು'. ರಂಗಸ್ವಾಮಿಯವರು ತಮ್ಮ ಅರಿಕೆಯಲ್ಲಿ:

"ಹಳ್ಳಿಯ ವಾಸದಲ್ಲಿ ವ್ಯರ್ಥವಾಗಿ ಎಷ್ಟೋ ದಿನಗಳು ಕಳೆದ ಮೇಲೊಂದು ದಿನ 'ವಿಶ್ವಕರ್ಣಾಟಕ' ಪತ್ರಿಕೆಯಲ್ಲಿ 'ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂದು ಬರೆದಿದ್ದನ್ನು ಓದಿದೆನು."

ಆದರೆ ಆ ಒಂದುದಿನ ಅಥವ "ವಿಶ್ವಕರ್ಣಾಟಕ"ದ ಯಾವ ಸಂಚಿಕೆ, ಇಸವಿ ಎಂಬುದನ್ನು ಸದ್ಯ ಪತ್ತೆ ಹಚ್ಚಲು ನನ್ನಿಂದ ಆಗಿಲ್ಲ. ದ.ರಾ.ಬೇಂದ್ರೆ ಅವರ ಲೇಖನ ಬರೆದಾದ ಮೇಲೆ ಅದು ಪ್ರಕಟವಾದದ್ದೊ ಹೇಗೆ? ಅಥವ ಅದನ್ನು ನೋಡಿಯೂ ಮರೆತರೊ ?

ಈ ನಡುವೆ 'ಪುಸ್ತಕಮನೆ'ಯಲ್ಲಿರುವ ಪತ್ರಿಕೆಗಳನ್ನು ಶೋಧಿಸುತ್ತಿರುವಾಗ ವೀರಶೈವ ತರುಣ ಸಂಘದವರು ಪ್ರಕಟಿಸಿ, ಡಿಸೆಂಬರ ೧೯೧೯, ಸಂಪುಟ ೨, ಸಂಚಿಕೆ ೨ 'ಪ್ರಬೋಧ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ ಕಣ್ಣಿಗೆ ಬಿದ್ದಿತು. ಹಾಗಿದ್ದಲ್ಲಿ ಜಾನಪದ ಸಾಹಿತ್ಯ ಕುರಿತು ಕನ್ನಡದಲ್ಲಿ ಬಂದ ಮೊಟ್ಟ ಮೊದಲ ಲೇಖನ ಇದೇ ಆಗಿರಬಹುದೇ? ಯಾರು ಈ ಇಂದುಧರ ಅವರು ? ಈ ಬಗ್ಗೆ ಮಾಹಿತಿಯುಳ್ಳವರು ದಯವಿಟ್ಟು "ಪ್ರಜಾಸಾಹಿತ್ಯ"ಕ್ಕೆ ಒದಗಿಸಬೇಕಾಗಿ ಪ್ರಾರ್ಥನೆ.

ಈ ದಿಕ್ಕಿನಲ್ಲಿ ಇನ್ನಷ್ಟು ಚರ್ಚೆ ನಡೆಯಲಿ ಎಂಬ ಕಾರಣಕ್ಕಾಗಿ ಇಂದುಧರ, ಸಿಂಪಿಲಿಂಗಣ್ಣ, ಪಿ. ಧೂಲಾ, ಅರ್ಚಕ ಬಿ.ರಂಗಸ್ವಾಮಿ ಭಟ್ಟ–ಅವರ ಲೇಖನಗಳನ್ನು ಇವತ್ತಿನ ಓದುಗರಿಗೆ ನೀಡಲಾಗುತ್ತಿದೆ.

ಸಂಪಾದಕ

೬

ಲಾವಣಿ ಪದಗಳು

"ಇಂದುಧರ"

ಎಂ.ಸಿ. ಕಾಲೇಜ ಮದ್ರಾಸು

ಲಾವಣಿಪದ – ಹಾ ತಡೆಯಿರಿ. ಅಸಹ್ಯಪಡಬೇಡರಿ. ಲಾವಣಿಪದಗಳೆಂದಂದ ಕೂಡಲೆ ನಮ್ಮ ಆಧುನಿಕ ವಾಚಕ ಮಹಾಶಯರು ಜಿಗುಪ್ಸೆಕೊಂಡು ಅವನ್ನು ಬಹಳ ನಿಕೃಷ್ಟವಾಗಿ ಕಾಣುವರು. ಯಾರಾದರು ಈ ಲಾವಣಿಪದಗಳನ್ನು ಹಾಡುತ್ತಿದ್ದರೆ ನಮ್ಮ ಆಧುನಿಕರು ಅವುಗಳ ಮಹಿಮಾತಿಶಯಂಗಳಿಗೆ ಕಿವಿಗೊಡದೆ, ಏನೊವೊಂದು ವಿಧ ಅಲಕ್ಷ್ಯ ಭಾವದಿಂದ ಅವುಗಳಿಗೆ ಗಮನಕೊಡರು. ಇಂಥಾ ಶೋಚನೀಯವಾದ ಇವುಗಳ ಸ್ಥಿತಿಗೆ ಎರಡೇ ಎರಡು ಕಾರಣಗಳುಂಟು. (೧) ಸಾಧಾರಣವಾಗೀ ಹಾಡುಗಳನ್ನು ಹಾಡುವದು

ಹಳ್ಳಿಯವರ ಹಾಗೂ ಭಿಕ್ಷಾಧಿಕಾರಿಗಳ ವಾಡಿಕೆಯಾಗಿರುವುದರಿಂದಲೂ (೨) ಮತ್ತು ಕೆಲವು ನೀತಿಬಾಹ್ಯವಾದ ಲಾವಣಿಪದಗಳೆ ಜನರಲ್ಲಿ ವಿಶೇಷವಾಗಿ ಹಾಡಲ್ಪಡುವರಿಂದಲೂ ನವನಾಗರಿಕರಿಗೆ ಅವುಗಳು ರುಚಿಸದೆ ಇರುವದು ಸಹಜವಾಗಿದೆ. ಆದರೆ ಈ ಎರಡು ಕಾರಣಗಳಿಗೋಸ್ಕರ ನಮ್ಮ ಕರ್ನಾಟಕ ಭಾಷಾರಂಜನೆಗನುವಾದ ಸಾಧನಗಳಲ್ಲಿಯೊಂದಾದ ಲಾವಣಿಪದಗಳನ್ನು ಅಸಹ್ಯವಾಗಿ ಕಾಣುವದು ತುಂಬಾ ವಿಷಾದಕರವಾದ ಸಂಗತಿಯು.

ಪಾಶ್ಚಾತ್ತ್ಯರ ದೇಶಗಳಲ್ಲಿ ಲಾವಣಿಪದಗಳು ಕವಿತ್ವಕ್ಕೂ, ಭಾಷಾಪ್ರಚಾರಕ್ಕೂ, ಮತ್ತು ದೇಶೋನ್ನತಿಗೂ ಯಾವ ವಿಧವಾಗಿ ಸಹಾಯ ಮಾಡಿರುವವೊ ವಿಚಾರಿಸುವ. ಇಲ್ಲಿಯ ಹಾಗೆ ಆಂಗ್ಲೇಯ ದೇಶದಲ್ಲಿ ಕೂಡ ಲಾವಣಿಪದಗಳು ಬಹಳ ಹೀನವಾಗಿ ಕಾಣಲ್ಪಡುತ್ತಿದ್ದವು. ಆದರೆ ೧೭೬೫ನೆ ವರ್ಷದಲ್ಲಿ ಪರ್ಸಿಯೆಂಬುವರು ಹಳ್ಳಿಗಾಡು ಜನರು ಹಾಡಿಕೊಳ್ಳುತ್ತಿದ್ದ ಹಾಡುಗಳನ್ನು ಕೇಳಿ ಅವುಗಳ ಶೈಲಿಸರಳತೆಗೂ, ಮಾನಸಾಕರ್ಷಣ ಶಕ್ತಿಗೂ, ಚರಿತಾವಿಷಯಕ್ಕೂ ಮೆಚ್ಚಿ, ಅವುಗಳನ್ನೆಲ್ಲಾ ಕ್ರೋಢೀಕರಿಸಿ ಪ್ರಸಿದ್ಧಮಾಡಿದರು. "ಅವುಗಳನ್ನೆಲ್ಲಾ ಓದಿದ ಕೂಡಲೆ ಜನರಿಗೆ ಪದ್ಯಕಾವ್ಯಗಳಲ್ಲಿ ಅಭಿರುಚಿಯುಂಟಾಯಿತು. ಅವು ಇಂಗ್ಲಷು ಭಾಷೆಗೆ ಅಮೋಘವಾದ ಸೇವೆಯನ್ನು ಮಾಡಿರುತ್ತವೆ"ಂದು ಪ್ರೊ. ಹೇಲ್ಸ್‌ಸಾಹೇಬರು ಹೇಳಿರುತ್ತಾರೆ. ಅದ್ಭುತ ಕಾದಂಬರಿಗಳಿಗೆ ಮೇಲ್ಪಂಕ್ತಿಯನ್ನು ಹಾಕಿ ಪ್ರಸಿದ್ಧರಾಗಿ ಹೋದ ಸರ್‌ವಾಲ್ಟರ್ ಸ್ಕಾಟರವರು ತಮ್ಮ ಯೌವನಾವಸ್ಥೆಯನ್ನೆಲ್ಲಾ ಹಳ್ಳಿಹಳ್ಳಿಗೆ ತಿರಿಗಿ ಈ ಲಾವಣಿಪದಗಳನ್ನು ಸಂಗ್ರಹಿಸುವದರಲ್ಲಿಯೆ ಕಳೆದದ್ದರಿಂದಲೆ ಅವರಿಗಂಥಾ ಮೇಧಾಶಕ್ತಿಯು, ಅತಿವಿರಳವಾಗಿ ಜನರ ನಡೆ ನುಡಿಗಳು ವಿಶದವಾಗಿರುವ ಸಾಂಘಿಕ ಕಾದಂಬರಿಗಳನ್ನು ಬರೆಯುವ ಶಕ್ತಿಯುಂಟಾದವು. ಗೊಲ್ಡುಸ್ಮಿತ್ ಕವಿಯು ಕೈಯಲ್ಲಿ ಒಂದು ಕಾಸು ಇಲ್ಲದಲೆ, ಒಂದು ಹರಕು ಸಂಚಿಯಿಂದಲೂ, ಒಂದು ಬಿದರಿನ ಕೊಳಲಿನಿಂದಲೂ ಅರ್ಧ ಯುರೋಪಾಖಂಡವನ್ನು ತಿರಿಗಿ ಅಲ್ಲಲ್ಲಿ ಲಾವಣಿಪದಗಳನ್ನು ಹಾಡಿ ಹೊಟ್ಟೆ ಹೊರದುಕೊಂಡು ಪುನಃ ಸ್ವದೇಶಕ್ಕೆ ಬಂದು ಕವಿಗಳೆಲ್ಲರೂ ಮೆಚ್ಚುವಂಥಾ 'ಪ್ರಾಯಾಣಿಕನು' (The Traveller) ಮುಂತಾದ ಪದ್ಯಕಾವ್ಯಗಳನ್ನು ರಚಿಸಿ ಪ್ರಸಿದ್ಧನಾದನು.

ಕರ್ನಾಟಕದ ಭಾಷೆಯಲ್ಲಿಯೂ ನಮ್ಮ ಪೂರ್ವಜರು ಮಾಡಿ ಹೋದ ಅನೇಕ ಮಹತ್ಕಾರ್ಯಗಳನ್ನು ಬೋಧಿಸುವ ಲಾವಣಿಗಳೆಷ್ಟೊ ಇರುವವು. ಗಂಟೆ-ಅಯ್ಯನವರು ಮುಂತಾದ ಭಿಕ್ಷುಕರು ಅಲ್ಲಲ್ಲಿ ಇವುಗಳನ್ನು ಹಾಡುವುದನ್ನು ನಾವು ಕೇಳಿರುತ್ತೇವೆ. ಇವುಗಳನ್ನೆಲ್ಲಾಕೂಡಿಸಿದರೆ ಭಾಷಾಭಿವೃದ್ಧಿಗೆಷ್ಟೊ ಅನುಕೂಲವಾಗುವದು. ಮತ್ತು ಇವು ಸಮಕಾಲದ (Contemporary event) ವಿಷಯಗಳನ್ನು ಸೂಚಿಸುವುದರಿಂದ ಚರಿತ್ರಾಂಶಕ್ಕೆಷ್ಟೊ ಸಹಾಯವಾಗುವವು. ವೀರಶೈವ ತರುಣ ಸಹೋದರರೇ! ಇನ್ನು ಮೇಲೆ ಲಾವಣಿಪದಗಳ ಮೇಲಿರುವ ನಿಮ್ಮ ಅಸಹ್ಯವನ್ನು ಬಿಡಿರಿ. ಆದಷ್ಟು ಮಟ್ಟಿಗೆ ಅವುಗಳ ಕಡಿಗೆ ಗಮನಕೊಟ್ಟು ಅವುಗಳನ್ನು ಕೂಡಿಸುವ ಪ್ರಯತ್ನ ಮಾಡಿರಿ. ಯಾವ ಭಾಷೆಯೂ ನಮ್ಮ ಮತ ಪ್ರಚಾರಕ್ಕೆ ವಿಶೇಷ ಸಹಾಯ ಮಾಡಿತೊ,ಯಾವ ಭಾಷೆಯ ಸೇವೆಯಲ್ಲಿ ಷಡಾಕ್ಷರಿಕವೀಶ್ವರರು ಮುಂತಾದವರು ಪ್ರಸಿದ್ಧರಾಗಿ ಹೋದರೊ ಯಾವದು ನಮ್ಮ ಮಾತೃ ಭಾಷೆಯಾಗಿರುವದೊ ಅಂಥಾ ಕರ್ನಾಟಕ ಭಾಷಾಭಿವೃದ್ಧಿಯ ಬಾಧ್ಯತೆಯು ವೀರಶೈವರಾದ ನಮ್ಮ ಮೇಲೆ ಬಹಳವಾಗಿರುವದು. ಕವಿತಾಶಕ್ತಿಯು ನಿಮ್ಮಲ್ಲಿ ಇನ್ನೂ ಬೇರೂರದೆ ಇದ್ದರೂ, ಚರಿತ್ರೆ ಕಾದಂಬರಿ ಮುಂತಾದ ಗದ್ಯ ಕಾವ್ಯಗಳನ್ನೂ ರಚಿಸುವದಕ್ಕೆ ಇನ್ನೂ ಶಕ್ತಿಯುಂಟಾಗದಿದ್ದರೂ ಸರ್‌ವಾಲ್ಟರ್ ಸ್ಕಾಟನಂತೆ ಲಾವಣಿಪದಗಳನ್ನು ಕೂಡಿಸಿ ಪ್ರಸಿದ್ಧಮಾಡುವ ಮಹನಿಯರ ಕಡಿಗೆ ಕಳಿಸಿಕೊಡಿರಿ.

ಲಾವಣಿಪದಗಳಲ್ಲಿರುವ ವಿಶೇಷವೇನಂದರೆ, ಅವುಗಳಲ್ಲಿ ಕ್ಲಿಷ್ಟ ಪದಗಳಿರದೆ ಬಹಳ ಸರಳವಾಗಿ' ಕಿವಿಗಿಂಪಾಗಿರುವುದರಿಂದ ಮನಸ್ಸನ್ನು ಜಾಗ್ರತೆಯಾಗಿ ಆಕರ್ಷಣೆ ಮಾಡಿಕೊಳ್ಳುವವು. ಇವುಗಳ ವಿಷಯವಾಗಿ ಪ್ರೊ.ಹಡ್ಸನ್ನರವರು ಹೀಗೆ ಬರೆದಿರುವರು.

"Their themes commonly furnish the more elementary aspect of life ; large space is given in them to tales of adventure fighting deeds of prowess and valour, they have frequently a strong infusion of supernaturalism ; while love, hatred, pity and other simpler interest of the domestic lot receive a full share of attention In method and style they are characterised by straigth - for-wardness and rapidity of narration and a certain childlike naivete. They are often energetic. Many of these ballads have immense dramatic power and wonderful

meterial beauty and for this reason they must be assigned to a distinct place among the great imperishable things of our literature".

ಇವುಗಳೆಷ್ಟು ಹೃದಯಾಹ್ಲಾದವಾಗಿರುವೊ ಈ ಕೆಳಗಿನ ಲಾವಣಿಯಿಂದ ಕಂಡು ಬರುತ್ತದೆ.

ಏನು ಹೋದೆಲಾ ಹೋದ್ಯೊರನ್ನಾ ।
ಸಕ್ಕರಿ ಕರಡೆಪ್ಪ ಪುತ್ಥಳಿಚಿನ್ನಾ ॥ಪಲ್ಲ॥ ಏನು.
ಘನಮಾದ ಪೂರ್ವದ ಪುಣ್ಯಾ ।
ಮಾನವನಲ್ಲೊಸದ್ಭಕ್ತಿಸಂಪನ್ನಾ ॥ ಅನುಪಲ್ಲ ॥ ಏನು

ಮರಿಸ್ವಾಮಿವರವಿಲೆ ಹುಟ್ಟಿ ।
ಕರಡೆಪ್ಪ ನಡಸಿದಿ ಜಗದೋಳು ಸೃಷ್ಟಿ ॥
ಹರಮತವನು ಬೆಳಸಿಟ್ಟಿ
ಪರಮಾತ್ಮ ಜನರಿಗೆ ಬಹುಸುಖಕೊಟ್ಟಿ ॥೧॥ ಏನು

ಛಪ್ಪನ್ನ ದೇಶಕ್ಕೆ ಬೆಳದಿ
ಸರ್ವರಿಗೆ ಸರ್ಕಾರ್ಕ ಬೇಕಾಗಿನಡದಿ॥
ಮುಪ್ಪೂರ ಸಂಹಾರ ನಳದಿ ।
ಅಪ್ಪಗಣಂಗಳ ಕೈಬಿಟ್ಟುನಡದಿ ॥೨॥ ಏನು

ಬಳ್ಳಾರಿ ಕಲ್ಯಾಣಮಾಡಿ।
ನಡದೆಲ್ಲೊ ಸರ್ವಗಣಂಗಳ ಕೂಡಿ ॥
ಬಲ್ಲಿದ ಮುನಿಪುರ ಶಾಂತನ ಕೂಡಿ ।
ಕರಡೆಪ್ಪನಡೆದಾನು ಜಯಜಯಪಾಡಿ ॥೩॥ ಏನು

ವಾಚಕರೆ! ನೋಡಿದಿರಾ ಮೇಲಿನ ಲಾವಣಿ. ವೀರಶೈವ ಸದ್ಭಕ್ತ ಶಿರೋಮಣಿಯಾದ ಬಳ್ಳಾರಿ ಸಕ್ಕರೆ ಕರಡೆಪ್ಪ ಶರಣರ ಗುಣಗಳನ್ನು ಎಷ್ಟು ಕೊಂಡಾಡುತ್ತಿರುವದು. ಇದರಲ್ಲಿ ಕಠಿಣ ಶಬ್ದಗಳು ಶೈಲಿಯು ಇರದೆ, ಕೇವಲ ವ್ಯವಹಾರ ಪದಗಳೇ ಇದ್ದು ಸರಳವಾದ ಶೈಲಿಯಲ್ಲಿರುವುದರಿಂದ ಎಂಥಾ ಜನರಿಗಾದರೂ ಕೇಳಿದ ಕೂಡಲೆ ಜ್ಞಾಪಕದಲ್ಲಿ ನಿಂತು ಮನಸ್ಸನ್ನೂ ಕರಗಿಸಿ, ಭಕ್ತಿ, ಆಚಾರ, ಧರ್ಮ ಮುಂತಾದ ಸದ್ಗುಣಗಳನ್ನುಂಟು ಮಾಡುವದು. ಇದರಿಂದ ಜನರ ಸನ್ಮಾರ್ಗಪ್ರವರ್ತನೆಗೂ ಆಚಾರ ಧರ್ಮಕ್ಕೂ, ಮತ ಸುಧಾರಣೆಗೆಷ್ಟೋ ಪ್ರಯೋಜನವಾಗುವುದು. ಸಾಧಾರಣ ಜನರನ್ನು ಆಕರ್ಷಿಸುವದಕ್ಕೆ ಈ ಲಾವಣಿಪದಗಳೇ ಸಾಧನವಾಗಿರುವದರಿಂದಲೂ, ಮತ್ತು ಸಾಧಾರಣ ಜನರೆ ನೂರಕ್ಕೆ ೯೫ ಮಂದಿ ಇರುವದರಿಂದಲೂ ಸ್ವಾರಸ್ಯವಾದ ಗಂಭೀರವಾದ ಲಾವಣಿಗಳನ್ನು ಸಂಗ್ರಹಿಸಿ ಪ್ರಚಾರಮಾಡುವುದು ನಮ್ಮ ಕರ್ತವ್ಯವಲ್ಲವೇ? ❑

೭

ಜೀವನ ಸಂಗೀತ : ಪರಿಚಯ

ಸಿಂಪಿ ಲಿಂಗಣ್ಣ ಹಾಗೂ ಪಿ. ಧೂಲಾ

ಲಾವಣಿಕಾರರಲ್ಲಿ 'ಹರಿದಾಸ' ಮತ್ತು 'ನಾಗೇಶಿ' ಎಂದು ಎರಡು ವರ್ಗಗಳುಂಟು. 'ತುರಾಯಿ' ಮತ್ತು 'ಕಲ್ಕಿ' ಎಂತಲೂ ಇವಕ್ಕೇ ಎನ್ನುವುದುಂಟು. ಇವೆರಡೂ ವರ್ಗದ ಲಾವಣಿಕಾರರು ಒಬ್ಬರಿಗೊಬ್ಬರು ಇದಿರುಬದಿರಾಗಿ ಹಾಡುತ್ತಿರುತ್ತಾರೆ. ಹರಿದಾಸರದು ಗಂಡಿನ ಪಕ್ಷ, ನಾಗೇಶಿಯವರದು ಹೆಣ್ಣಿನ ಪಕ್ಷ. ಅವರವರು ತಮ್ಮ ತಮ್ಮ ಪಕ್ಷವನ್ನು ಎತ್ತಿ ಹಿಡಿದು ಹಾಡುವುದುಂಟು. ಒಮ್ಮೊಮ್ಮೆ ತಮ್ಮ ಪಕ್ಷವನ್ನು

ಬೆಳೆಸುವ ಭರದಲ್ಲಿ ಪ್ರತಿಪಕ್ಷದ ವಿಡಂಬನೆಯು ಮಿತಿಮೀರಿ ಹೋಗುತ್ತಿರುವುದೂ ಉಂಟು. ಲಾವಣಿಗಳ ಲಾವಣ್ಯಕ್ಕೆ ಎಲ್ಲಿಯಾದರೂ ಒಮ್ಮೊಮ್ಮೆ ಭಂಗ ಬರುತ್ತಿದ್ದರೆ ಅದು ಈ ಸಾಂಪ್ರದಾಯಿಕತೆಯ ಬಲೆಯಲ್ಲಿಯೇ ಸರಿ.

ನಮ್ಮ ಈ ಸಂಗ್ರಹದಲ್ಲಿ ನಾವು ಪ್ರಸಿದ್ಧರಾದ ಏಳು ಮಂದಿ ಲಾವಣಿಕಾರರ ಮಿಗಿಲಾದ ಹನ್ನೆರಡು ಲಾವಣಿಗಳನ್ನು ನಾಡಿಗರ ಇದಿರಿಗೆ ಇಟ್ಟಿದ್ದೇವೆ. ಅಲ್ಲದೆ ಎರಡು ಚಿಕ್ಕ ಉಪಲಾವಣಿಗಳುಂಟು. ಅವುಗಳನ್ನು ಇಡಿಯ ಸಂಗ್ರಹದ ಮೊದಲಿಗೊಂದು, ಕೊನೆಗೊಂದು ಸೇರಿಸಿದ್ದೇವೆ. ಯಾಕಂದರೆ ಹಾಡುಗಾರರು ಪ್ರತಿಯೊಂದು ಲಾವಣಿಯನ್ನು ಹಾಡುವಾಗ ಮೊದಲಿಗೊಂದು ಉಪೋದ್ಘಾತ ಸ್ವರೂಪದ ಚಿಕ್ಕ ಹಾಡನ್ನೂ ಕೊನೆಗೊಂದು ಉಪಸಂಹಾರ ಸ್ವರೂಪದ ಹಾಡನ್ನೂ ಹಾಡುವ ವಾಡಿಕೆಯುಂಟು. ಮೊದಲಿಗೆ ಸೂಚನಾ ಪಲ್ಲವಿಯಂತೆ ಹೇಳುವುದಕ್ಕೆ 'ಸಖಿ' ಎಂದೂ, ಕೊನೆಯದಕ್ಕೆ 'ಖ್ಯಾಲಿ' ಎಂದೂ ಅವರು ಹೆಸರು ಕೊಟ್ಟಿದ್ದಾರೆ. ನಾವು ಸಂಗ್ರಹಿಸಿರುವ ಪ್ರತಿಯೊಂದು ಲಾವಣಿಗೂ ಕೊನೆ ಮೊದಲಿನ ಎರಡೆರಡು ಖ್ಯಾಲಿ – ಸಖಿಗಳನ್ನು ಕೊಡದೆ ಎಲ್ಲ ಹಾಡುಗಳಿಗೆ ಕೂಡಿ ಮೊಟ್ಟ ಮೊದಲಿಗೆ ಒಂದು ಒಳ್ಳೇ ಸಖೀ ಹಾಡನ್ನೂ ಕೊಟ್ಟ ಕೊನೆಗೆ ಒಂದು ಖ್ಯಾಲಿಯನ್ನು ಪ್ರತ್ಯೇಕವಾಗಿ ಜೋಡಿಸಿದ್ದೇವೆ.

ಈ ಸಂಗ್ರಹದಲ್ಲಿ ಬಂದ ಲಾವಣಿಗಳೆಲ್ಲಾ ಸುಮಾರು ಇಪ್ಪತ್ತು ವರ್ಷಗಳಿಗಿಂತ ಮೊದಲಿನವು. ಇವುಗಳಿಗೆ ಜನರು ಹಳೆ ಲಾವಣಿಗಳೆಂದು ಹೇಳುವರು. ಇವುಗಳನ್ನು ರಚಿಸುವುದರಲ್ಲಿ ಇಂದಿಗೆ ಬಹುಶಃ ಸ್ವರ್ಗವಾಸಿಗಳಾದವರೇ ಹೆಚ್ಚು. ಶ್ರೀ ಕುಬ್ಬಣ್ಣನವರು ಮಾತ್ರ ಈ ಏಳ್ವರಲ್ಲಿ ಜೀವಿಸುವವರಾಗಿದ್ದಾರೆ. ಶ್ರೀ ಗೋಪಾಳ ದುರದುಂಡಿ ಮತ್ತು ಶ್ರೀ 'ನಾನಾ ಸಾಯ್ಬ' ಹಾಗೂ ಶ್ರೀ 'ನ್ಯಾಮಣ್ಣ' ಇದರ ವಿಷಯಕ್ಕೆ ನಮಗೆ ಹೆಚ್ಚಿಗೇನೂ ಗೊತ್ತಾಗಿಲ್ಲ. ಶ್ರೀ ಖಾಜಾಭಾಯಿ ಮತ್ತು ಶ್ರೀ ಸಿದ್ದು – ಶಿವಲಿಂಗ ಹಾಗೂ ಸಂಗು–ರಾಯಪ್ಪ ಇವರಿಷ್ಟು ಜನರು ಮಾತ್ರ ದಿವಂಗತರಾಗಿ ಹಲವು ವರ್ಷಗಳಾದವು.

ಇದೀಗ ನಾವು ಹಳೆಯ ಲಾವಣಿಗಳನ್ನಷ್ಟೇ ಸ್ವೀಕರಿಸಿ ಹೊಸ ಲಾವಣಿಗಳಿಗೆ ಕೈಹಚ್ಚದಿರುವುದಕ್ಕೆ ಒಂದು ಕಾರಣವುಂಟು. ಅದೇನೆಂದರೆ ಮಹಾಯುದ್ಧದಿಂದ ಈಚೆಗಿನ ಕಾಲದ ಜನಜೀವನದಲ್ಲಿ ಹೊರಜಂಬ ಹೆಚ್ಚಾಗಿ ಒಳ ಜೊಳ್ಳುತನ ಬೆಳೆದು ಬಂದದ್ದರಿಂದ ಜನರಲ್ಲಿದ್ದ ಸವಿಗಾರಿಕೆಯೆಲ್ಲ ಲೋಪವಾಗಿ ರಸವಂತಿಕೆಯು ಮುಳುಗಿಹೋಗಿದೆ. ಜೀವನದಲ್ಲಿಯೇ ರಸವಿಲ್ಲದಾಗ ಅವರ ಹಾಡಿನಲ್ಲಿ ಎಲ್ಲಿಯ ರಸವು ಬರಬೇಕು ? ಈಚೆಗಿನ ಹಾಡುಗಳೆಂದರೆ ನೀರಸವಾದ ಲೆಕ್ಚರನ್ನು ಧ್ವನಿಕೂಡಿಸಿ ತಾಳದಲ್ಲಿ ಹೇಳಿದಂತೆ. ಕೆಲವರು ನೀತಿಯ ನಿಬಂಧಗಳನ್ನು ಪ್ರಾಸಕ್ಕೆ ಸರಿಹೊಂದಿಸಿ ನೀತಿಸಾರ ಲಾವಣಿಯೆಂದು ಹೇಳುವರು. ಇನ್ನು ಕೆಲವರು ಕೈವಲ್ಯ–ಜ್ಞಾನಸಿಂಧುಗಳ ಪುಟಗಳನ್ನೇ ತಾಳ ಮೆಟ್ಟಿಗೆಗೆ ತಂದು ತತ್ತ್ವಸಾರ ಲಾವಣಿಯೆಂದು ಹೇಳುವರು. ಈಗಿನ ಕಥಾಸಾರ ಲಾವಣಿಗಳನ್ನಂತೂ ಕೇಳಲಾಸಲ್ಲ. ಕಥೆ ಗೊತ್ತಿಲ್ಲದವರಿಗೆ ಹೊಸ ಕಥೆಯೆನಿಸಿ ಏನಾದರೂ ತುಸು ಹರುಷವಾದರೆ ಆಗಬೇಕು. ಒಟ್ಟಿನಲ್ಲಿ ಈಚೆಗೆ ಇಪ್ಪತ್ತು ವರ್ಷಗಳಲ್ಲಿ ಹೊರಟ ಹೊಸ ಲಾವಣಿಕಾರರ ಹಾಡುಗಳಲ್ಲಿ ಕಾವ್ಯದ ವಿಲಾಸವಲ್ಲ, ಬರಿ ಸಂಗೀತಮಯ ಲೆಕ್ಚರ್.

ಅಲ್ಲದೆ, ಹಳೆಯ ಲಾವಣಿಗಳನ್ನು ಈಗಿನ ಹಳ್ಳಿಗರು ಕೇಳಲೂ ಒಪ್ಪುವದಿಲ್ಲವೆಂದು ಹಾಡುಗಾರರೇ ಸ್ವತಃ ಹೇಳುತ್ತಾರೆ. ಇದೂ ಸರಿಯೇ. ಜನರಲ್ಲೇ ರಸವನ್ನು ಆಸ್ವಾದಿಸುವ ಶಕ್ತಿಯು ಲೋಪಿಸಿರುವಾಗ ಅವರೊಳಗಿಂದಲೇ ಹೊರಬೀಳುವ ಹಾಡುಗಾರರಲ್ಲಾದರೂ ರಸೋನ್ಮೇಷವು ಎಲ್ಲಿಂದ ಬರಬೇಕು?

ಮನುಷ್ಯನು ನಿರಕ್ಷರನಾಗಿದ್ದರೂ ಕೂಡ ಅವನಲ್ಲಿ ಪ್ರತಿಭೆಯು ಉದಯಿಸಿದರೆ ಕಲಿತವರನ್ನೂ ಕೂಡ ನಾಚಿಸುವ ಕೃತಿಗಳು ಆತನಿಂದ ಹೊರಪಡುವವೆಂಬ ಮಾತು ನವಶಿಕ್ಷಿತರಿಗೆ ಮನವರಿಕೆಯಾಗುವುದಕ್ಕೆ ಈ ಹಳೇ ಲಾವಣಿಗಳು ಸಾಕ್ಷಿಯಾಗಿವೆ. ಆದುದರಿಂದ ಮುಂದೆ ಕವಿಕೋಟಿಗೆ ಸೇರಲೆಳಸುವವರು ಪ್ರತಿಭೆಯ ಪರಿಚಯವನ್ನು ಪಡೆದುಕೊಳ್ಳದೆ ಗತ್ಯಂತರವಿಲ್ಲ ಎಂಬುದನ್ನು ಅರಿತುಕೊಳ್ಳುವುದಕ್ಕೂ ಇವು ಸಾಧನಗಳಾಗಿವೆ. ಅಲ್ಲದೆ ವಿದ್ಯಾರಹಿತರೂ ಕೂಡ ರಸೋನ್ಮೇಷಕ್ಕೆ ಬಂದು ಮುಟ್ಟಿರುವಾಗ ತಾವೇಕೆ ಆ ಸೆಲೆಗೆ ಮುಟ್ಟಬಾರದೆಂಬ ಆಶೆ ಭರವಸೆಗಳು ಹೊಸಬರಲ್ಲಿ ಹೊರಚಿಮ್ಮುವುದಕ್ಕೂ ಇವು ಸಹಾಯಕಾರಿಗಳಾಗಿವೆ.

ಆಂಗ್ಲ ವಿದ್ಯಾವ್ಯಾಸಂಗಿಗಳಿಗೂ, ಸಂಸ್ಕೃತ ಸಾಹಿತ್ಯ ಪರಿಚಿತರಿಗೂ, ಹಳಗನ್ನಡದ ಹುರುಳನ್ನು ಅರಿತವರಿಗೂ ಹೇಗಾದರೂ ಉಚ್ಚ ಕಾವ್ಯಗಳ ದರ್ಶನವು ಆಗೇ ಆಗುತ್ತದೆ. ಆದರೆ ಬರಿ ಹೊಸಗನ್ನಡದವರಿಗೆ ಕಾವ್ಯವೆಂದರೆ ಧ್ವನಿ ತೆಗೆದು ಹೇಳುವುದೊಂದೇನೋ ಎಂಬುದಕ್ಕಿಂತ ಹೆಚ್ಚಿಗೇನೂ ಗೊತ್ತಾಗುವಂತಿರಲಿಲ್ಲ.

ಅದರಲ್ಲಿ ನಾಲ್ಕೈದು ವರ್ಷಗಳಲ್ಲಿ ಮಾತ್ರ ಇಂಥವರಿಗೆ ತುಸುತುಸು ಅನ್ನವು ಸಿಗಹತ್ತಿದೆ. ಈಗ ನಾವು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಇದೇ ಕಾರ್ಯಕ್ಕೆ ಕೈಲಾದಷ್ಟು ಕೈಹಚ್ಚುತ್ತಿದ್ದೇವೆ.

ಶೃಂಗಾರ ಲಾವಣಿಗಳಲ್ಲಿ ಬರುವ ಗ್ರಾಮ್ಯ ರೀತಿಯ ಕೆಲವು ಸಂಗತಿಗಳು ಸುಶಿಕ್ಷಿತರಿಗೆ ಅಸೌಜನ್ಯವೆಂದು ತೋರಬಹುದು. ಆದರೆ ನಾವಿಲ್ಲಿ ಹೇಳುವುದೇನಂದರೆ ಅಲ್ಲಲ್ಲಿ ಕಾಣುವ ಕವಿಕಲ್ಪನೆಯ ಅಗಾಧ ವೈವಿಧ್ಯವನ್ನು ತೋರಿಸಿ ಕೊಡುವುದಿಷ್ಟೇ ನಮ್ಮ ಉದ್ದೇಶವಿದೆ. ಶ್ರೀ ಖಾಜಾಭಾಯಿಯವರ ಶೃಂಗಾರ ಲಾವಣಿಗಳ ಮೊದಲಿನ ಚೌಕಗಳಲ್ಲಿ ಕಾಣುವ ಊರ ವರ್ಣನಾಚಾತುರ್ಯವನ್ನು ಹೊಗಳದಿರಲಿಕ್ಕಾದೀತೇ? ಶ್ರೀ ಸಂಗೂ ಅವರ ಗೋಕುಲಾಷ್ಟಮಿಯ ಲಾವಣಿಯನ್ನೋದಿ ಯಾರು ಬೆರಗಾಗಲಿಕ್ಕಿಲ್ಲ?

ಒಬ್ಬೊಬ್ಬರಲ್ಲಿ ಒಂದೊಂದು ಕೌತುಕವನ್ನು ಕಾಣಬಹುದು. ಶ್ರೀ ಕುಬ್ಬಣ್ಣನವರ ಕಥೆಗಾರಿಕೆಯು ಹೊಗಳುವಂಥಾದ್ದು. ವತ್ಸಲಾಹರಣ ಹಾಡಿನಲ್ಲಿ ಕಥಾವಸ್ತುವನ್ನು ವಿಸ್ತರಿಸಬೇಕಾದಲ್ಲಿ ವಿಸ್ತರಿಸಿ, ಸಂಕ್ಷೇಪಿಸಬೇಕಾದಲ್ಲಿ ಸಂಕ್ಷೇಪಿಸಿ ಮುಖ್ಯ ರಸಕ್ಕೆ ಭಂಗಬಾರದಂತೆ ಮಾಡಿರುವುದು ಅವರ ಔಚಿತ್ಯಗುಣಕ್ಕೆ ತಕ್ಕ ನಿದರ್ಶನವಾಗಿದೆ.

ಸಿದ್ದೂ-ಶಿವಲಿಂಗ ಅವರ ಭೀಷ್ಮಪರ್ವದ ಲಾವಣಿಯಲ್ಲಿ ಕಂಡುಬರುವ ಭಾವಗಂಗೆಯ ಗಂಭೀರಗತಿಯನ್ನು ಎಷ್ಟೆಂದು ಹೊಗಳಿದರೂ ಸ್ವಲ್ಪವೇ ಅಲ್ಲವೇ? ಈ ಹಾಡಿನಲ್ಲಿ ಮೊದಲಿನಿಂದ ಕೊನೆಯವರೆಗೂ ನಾವು ಏಕಾತನತೆಯಲ್ಲಿ ಓಲಾಡುವೆವು.

ಶ್ರೀ ಗೋಪಾಲ-ದುರದುಂಡಿಯವರೂ ಬಹಳ ಪ್ರಖ್ಯಾತರು. ಆದರೆ ಅವರ ಹಾಡುಗಳು ನಮಗೆ ಹೆಚ್ಚಿಗೆ ಸಿಕ್ಕಿಲ್ಲ. ಆದರೂ ಅವರ ಸಮಾಜ ವಿಡಂಬನೆಯ ತೀಕ್ಷ್ಣ ಟೀಕೆಯನ್ನು 'ಅಷ್ಟೂರ ಮಾಡಿದು' ಎಂಬ ಹಾಡಿನಲ್ಲಿ ದಿಗ್ದರ್ಶನದ ಮಟ್ಟಿಗಾದರೂ ಕಾಣುವೆವೆಂಬುದರಲ್ಲಿ ಸಂದೇಹವಿಲ್ಲ.

ಶ್ರೀ ನಾನಾ ಅವರೂ, ನ್ಯಾಮಣ್ಣ ಅವರೂ ಇದಿರು ಬದಿರು ತೋಡಿಗೆ ತೋಡಿ ಹಾಡಿದ ಹಾಡುಗಳು ಬಹಳ ಚಮತ್ಕಾರದವು. 'ಬಸರಿದ್ದೇನೆ' ಎಂಬ ಹಾಡಿನಲ್ಲಿ ನಾನಾ ಅವರು ಮುಂದೆ ನಡೆಯಬೇಕಾದ ಸಂಗತಿಗಳನ್ನು ಇಂದೇ ಅಭಿಲಕ್ಷಿಸಿ ನಗೆಗೀಡಾಡುಗುವುದನ್ನು ಚಿತ್ರಿಸಿದಂತೆಯೇ ನ್ಯಾಮಣ್ಣ ಅವರು "ನಾಗರ ಪಂಚಮಿ"ಯ ಹಾಡಿನಲ್ಲಿ ಇನ್ನೊಂದು ವಿಧದಿಂದ ಆಶಾ ಪರ್ಯಾವಸಾಯಿಯಾಗುವಂತೆ ಮಾಡಿದ್ದಾರೆ.

ಕೊನೆಗೆ ದಿವಂಗತರಾದ ಶ್ರೀ ಖಾಜಾಭಾಯಿಯವರ 'ಕರೀಹುಡುಗಿ' ಹಾಡಿನ ಬಗೆಗೆ ಒಂದು ಮಾತನ್ನು ಹೇಳುವುದು ಅವಶ್ಯವಾಗಿದೆ. ಗಂಡು ಹೆಣ್ಣಿನ ಹೆಚ್ಚು-ಕಡಿಮೆಯ ವಾದದ ಹಾಡುಗಳಲ್ಲಿ ಇದು ಒಳ್ಳೇ ಚಿತ್ರ ವಿಚಿತ್ರಗಳಿಂದ ತುಂಬಿದುದಾಗಿದೆ.

ಇನ್ನೇನು? ಲಾವಣಿ ಕವಿಗಳು ಶೃಂಗಾರ ಪದಗಳನ್ನೇ ಅತಿಶಯವಾಗಿ ಬಳಸುತ್ತಿದ್ದರೂ ಅವರ ಜೀವನವು ಕೇವಲ ದೇಹಾತ್ಮ ಬುದ್ಧಿಯ ಕೊಳೆಯಲ್ಲೇ ಹೊರಳಾಡಿ ಹಾಳಾಗಲಾರದೆಂಬ ಅಂಶವನ್ನು 'ಪ್ರಾರ್ಥನೆ' ಮತ್ತು 'ನಿನ್ನ ಹೊರತು ದೇವರೇ ಇಲ್ಲ' ಎಂಬ ಕಿರಿ ಹಾಡುಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುವೆವು. ಲಾವಣೀ ಕವಿಗಳ ಜೀವನವು ವಿವಿಧ ರಸಗಳಲ್ಲಿ ವಿಸ್ತಾರ ಹೊಂದುತ್ತ ಕೊನೆಕೊನೆಗೆ ಶಾಂತಿರಸದ ಸಿರಿನಾಡಿಗೆ ಬಂದು ಸೇರದೆ ಹೋಗುವಂತಿಲ್ಲವೆಂಬುದನ್ನು ನಾವು ಬಹಳ ಕಡೆಗೆ ಕಂಡಿದ್ದೇವೆ. ಕೈಗೆ ಸಿಕ್ಕ ವೇದಾಂತ ಪುಸ್ತಕಗಳನ್ನೋದಿ ವೈರಾಗಿಯಾದವರಿಗಿಂತ ವಿವಿಧ ರಸ ಪೋಷಣೆಗಳಲ್ಲಿ ಬೆಳೆದು ಲಾವಣೀ ಕವಿಗಳ ವೃದ್ಧಾಪ್ಯಜೀವನವು ಬಹಳೇ ಪ್ರಶಾಂತ ರಮಣೀಯವಾಗಿರುವುದುಂಟು. ಅದಕ್ಕೆಂತಲೇ ನಾವು ಈ ಸಂಗ್ರಹಕ್ಕೆ 'ಜೀವನ ಸಂಗೀತ'ವೆಂದು ಹೆಸರನ್ನಿಟ್ಟಿದ್ದೇವೆ. ವಿವಿಧ ಸ್ವರಗಳನ್ನು ಉಚಿತವಾಗಿ ಬಳಸಿಕೊಂಡರೆ ಅದು ಸಂಗೀತ; ವಿವಿಧ ರಸಗಳನ್ನು ಉಚಿತವಾಗಿ ಉಪಯೋಗಿಸಿಕೊಂಡರೆ ಅದು ಜೀವನ; ಅಂತೇ ಇದು ಜೀವನ ಸಂಗೀತ. ಶ್ರೀಕೃಷ್ಣ ಭಗವಂತನು ಇಂಥ ಜೀವನ ಸಂಗೀತದ ಆದಿಗುರುವು. ಅವನ ಲೀಲೆಯ ಪ್ರಥಮ ಭಾಗವು ಶೃಂಗಾರಮಯ; ಕೊನೆಯದು ವೀರ ಆಧ್ಯಾತ್ಮ. ಅಂತೇ ಮುರಲೀಧರನು ಜೀವನ ಸಂಗೀತದ ಆದಿ ಪ್ರವರ್ತಕನು. ಆ ರಾಧಾಕೃಷ್ಣರ ಪ್ರತಿನಿಧಿಗಳೇ ನಮ್ಮ ಲಾವಣೀಕಾರರ ನರ-ನಾರಿಯರು. ಜೀವನದ ಪೂರ್ವರಂಗದ ರಥಿ-ಸಾರಥಿಯರಿವರು. ಇವರ ಓಂಕಾರ ಬೀಜವೇ ಶೃಂಗಾರರಸವು. ಆದುದರಿಂದ ಶೃಂಗಾರವೆಂದ ಕೂಡಲೇ ಹಾರಿನಿಲ್ಲುವ ಮಡಿವಂತಿಕೆಯೂ, ಹೆಸರು ಕೇಳಿದೊಡನೆ ಎಸರೊಸರುವ ಜೊಲ್ಲೆತನವೂ ನಮ್ಮ ದೃಷ್ಟಿಯಿಂದ ತ್ಯಾಜ್ಯವೆಂದೇ ನಾವು ಒತ್ತಿ ಅಡಿ ಬಿಡುವೆವು.

ಈ ಲಾವಣೀ ಸಂಗ್ರಹವನ್ನು ನಮಗೆ ಒದಗಿಸಿ ಕೊಟ್ಟವರೆಂದರೆ ಆ ಹಾಡುಗಳನ್ನು ನಮಗೆ ಹೇಳಿಕೊಟ್ಟವರೇ

ಸರಿ. ಇಲ್ಲದಿದ್ದರೆ ಈ 'ಜೀವನ ಸಂಗೀತ'ವು ನಾಡಿನ ಸಾಹಿತಿಗಳಿಗೆ ಅಪರಿಚಿತವಾಗಿಯೇ ಉಳಿದು ಬಿಡುತ್ತಿತ್ತು. ಶ್ರೀ ಕುಬ್ಬಣ್ಣನವರ ಮಕ್ಕಳಾದ ಶ್ರೀ ವೀರಭದ್ರಪ್ಪನವರೇ ಸ್ವತಃ ಚಡಚಣಕ್ಕೆ ಬಂದಾಗ ತಮ್ಮ ತಂದೆಯವರ ಕೆಲವು ಹಾಡುಗಳನ್ನು ನಮ್ಮ ಗೆಳೆಯರಿಗೆ ಬರೆದುಕೊಟ್ಟು ಉಪಕಾರ ಮಾಡಿರುವರು. ಹಲಸಂಗಿಯ ದಿವಂಗತ ಖಾಜಾಭಾಯಿಯವರ ಹಾಗೂ ಅವರ ವಸ್ತಾದರಾದ ದಿ॥ ಸಂಗೂ-ರಾಯಪ್ಪ ಅವರ ಹಾಡುಗಳನ್ನು ಇಲ್ಲಿಯ ರಾ॥ ಓಲಿಕಾರ – ರಾಮಚಂದ್ರಪ್ಪ ಎಂಬುವರು ಹೇಳಿಕೊಟ್ಟಿರುವರು. ಅಲ್ಲದೆ ಇಲ್ಲಿಯ ದಿ॥ ಸಿದ್ದೂ-ಶಿವಲಿಂಗ ಇವರ ಹಾಡುಗಳನ್ನು ಇನ್ನು ಕೆಲವರು ಹೇಳಿದರು. ಇವರೆಲ್ಲರಿಗೆ ಹಾಗೂ ಮೂಲ ಕವಿಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಇನ್ನೊಂದು ಮಾತೇನೆಂದರೆ ಶ್ರೀ ಕುಬ್ಬಣ್ಣನವರ ಮುಮ್ಮಕ್ಕಳೊಬ್ಬರು ಒಳ್ಳೆ ಸಾಹಸದಿಂದ ತಮ್ಮ ಮುತ್ತಯ್ಯನವರ ಹಾಡುಗಳನ್ನೆಲ್ಲ ಬರೆದು ಸಂಗ್ರಹಿಸಿ ಇಟ್ಟಿದ್ದಾರೆಂದು ಕೇಳಿದ್ದೇವೆ. ನಾಡಿನ ರಸಿಕರು ಯಾರಾದರೂ ಆ ಸಂಗ್ರಹವನ್ನು ದೊರಕಿಸಿ ಪ್ರಸಿದ್ಧಪಡಿಸಿದರೆ ನಾಡಿಗೆ ಬಹಳೇ ಭೂಷಣವಾಗುವುದೆಂದು ನಿವೇದಿಸುವೆವು.

❑

೮

ಹುಟ್ಟಿದಹಳ್ಳಿ – ಹಳ್ಳಿಯಹಾಡು : ಅರಿಕೆ

ಅರ್ಚಕ ಬಿ.ರಂಗಸ್ವಾಮಿ ಭಟ್ಟ

ಹಳ್ಳಿಯ ವಾಸದಲ್ಲಿ ವ್ಯರ್ಥವಾಗಿ ಎಷ್ಟೋದಿನಗಳು ಕಳೆದ ಮೇಲೊಂದು ದಿನ 'ವಿಶ್ವಕರ್ಣಾಟಕ' ಪತ್ರಿಕೆಯಲ್ಲಿ "ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ" ಎಂದು ಬರೆದಿದ್ದದನ್ನು ಓದಿದೆನು. ಆಗ ಆ ವಾಕ್ಯದ ಮಹತ್ತ್ವದ ಕಡೆಗೆ ಲಕ್ಷ್ಯವು ಕಡಮೆಯಾಗಿಯೇ ಇತ್ತು. ಹಳ್ಳಿಗರ ರಾಗಿ ಬೀಸುವ ಪದ, ಕೋಲಾಟದ ಪದ, ಕಣಗಳಲ್ಲಿ ಹಾಡುವ ಪದ, ಇವೆಲ್ಲವುಗಳ ಅರ್ಥದ ಕಡೆಗೆ ಲಕ್ಷ್ಯವಿಟ್ಟು ನೋಡಿದಾಗ ಮೇಲಿನ ವಾಕ್ಯವು ಹೃದಯದಲ್ಲಿ ತನ್ನದೇ ಒಂದು ರಾಜ್ಯವನ್ನು ಕಟ್ಟಿತು. ಅದರ ಕ್ರಮವೇ ಈ'ಹುಟ್ಟಿದಹಳ್ಳಿ'ಯಾಗಿ ಪರಿಣಮಿಸಿತು.

ಆಮೇಲೆ ಪಾಮರ ಸಾಹಿತ್ಯವನ್ನು ಸಂಗ್ರಹಿಸಿಟ್ಟರೆ ಸಾಹಿತ್ಯ ಸೇವೆಯ ಜೊತೆಗೆ ಹಳ್ಳಿಗರ ಅನೂಚಾನವಾದ ಆಚಾರವನ್ನು ಭದ್ರವಾದ ಬರಹವನ್ನಾಗಿ ಮಾಡಿಟ್ಟಂತೆ ಆಗುವುದೆಂದು ತೋರಿತು. ಹೆಸರಿಗೆ 'ಪಾಮರ ಸಾಹಿತ್ಯ'ವೆಂಬುದು ದಿಟ. ಆದರೆ ರಸದ ಝರಿಯು ಪಂಡಿತ ಸಾಹಿತ್ಯದ ಜೊತೆಯಲ್ಲಿಯೇ ಹರಿಯುವುದು. ಮೇಲಿನ ತೊಗಟೆಯಾದ ಭಾಷೆಯು ಮಾತ್ರ ಹಳ್ಳಿಯದು. ಆದುದರಿಂದಲೇ ಆ ಹೆಸರು ಬಂದಿತು.

ಒಂದು ಜನಾಂಗದ ಸಾಹಿತ್ಯವು ಸರ್ವಾಂಗಪುಷ್ಟವಾಗಿ ಬೆಳೆದರೆ ಜನರ ಲಕ್ಷ್ಯವು ಆ ಕಡೆಗೆ ತಿರುಗುವುದು. ಆ ಸರ್ವತೋಭದ್ರವಾದ ಸಾಹಿತ್ಯವು ತನ್ನ ಸಂಸ್ಕೃತಿಯನ್ನು ಉಪಾಸಕರ ಹೃದಯದಲ್ಲಿ ತುಂಬುವುದು. ಒಡನೆಯೇ ಅಂತರಂಗ ಬಹಿರಂಗಗಳಲ್ಲಿ ಆ ಸಂಸ್ಕೃತಿಯ ಪ್ರಾದುರ್ಭಾವವಾಗುವುದು. ಪ್ರಕೃತ ಇಂಗ್ಲಿಷ್ ಸಾಹಿತ್ಯವನ್ನು ತೆಗೆದುಕೊಳ್ಳೋಣ. ಸಂಸ್ಕೃತ ಸಾಹಿತ್ಯದ ಸಂಪ್ರದಾಯವುಳ್ಳ ಆರ್ಯಾವರ್ತದ ಜನಾಂಗವನ್ನು ಇನ್ನಾವ ಸಾಹಿತ್ಯವೂ ತನ್ನದನ್ನಾಗಿ ಇಷ್ಟು ಮಟ್ಟಿಗೆ ಮಾಡಿಕೊಳ್ಳಲಿಲ್ಲ. ರಾಜಕೀಯ ಬಲವಿದೆಯೆನ್ನುವಿರಿ. ಇತರರಿಗಿರಲಿಲ್ಲವೆ?

ನಮ್ಮ ಸಾಹಿತ್ಯವು ಬೀಳಾಗಿದೆ. ಬೀಳೆಂದು ಬಿಟ್ಟು ಬಿಡಲು ಸಾಧ್ಯವಿಲ್ಲ. ನಾವು ಇಂಗ್ಲಿಷ್ ಸಾಹಿತ್ಯವನ್ನು ನಮ್ಮ ಮಾತೃಭಾಷೆಯನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ನಮ್ಮದರಲ್ಲಿ ಮುರಿದ ಭಾಗವನ್ನು ಸಂಪಾದಿಸಬೇಕು. ಸಾಹಿತ್ಯದೇವಿಗೆ ಹಳ್ಳಿಯ ವಿಚಾರ ರೂಪವಾದ ಉಡುಗೊರೆಯನ್ನು ನಮ್ಮ ಕನ್ನಡ ನಾಡಿನವರೇ ಕೊಡಬೇಕು. ಪಂಡಿತರು ತಮ್ಮ ಕೈಲಾದಷ್ಟು ಉತ್ತಮ ಕಾವ್ಯಗಳನ್ನು ಬರೆಯಲಿ. ಬಲು ಸಂತಸ. ಅದರ ಜೊತೆಯಲ್ಲಿ ಹಳ್ಳಿಯ ಪಾಮರ ಸಾಹಿತ್ಯವೂ ಬೆಳೆಯಲಿ. ಎರಡೂ ರಾಶಿ ರಾಶಿಯಾಗಿ ಬಿದ್ದಾಗ ಇದು ಚರಿತ್ರೆಯ ಭಾಗ. ಇದು ವೇದಾಂತ ಭಾಗ. ಇತ್ಯಾದಿಯಾಗಿ ಆರಿಸುವವರು ಆರಿಸಿ

ಜೋಡಿಸಲಿ. ಅಂತು ಮುಂದೆ ಕನ್ನಡ ನಾಡಿನಲ್ಲಿ ಹುಟ್ಟಿದವನು ವಾಙ್ಮಯ ದೃಷ್ಟಿಯಿಂದಲೂ ತಾನು ಕನ್ನಡ ನಾಡಿನಲ್ಲಿ ಹುಟ್ಟಿದುದು ಸಾರ್ಥಕವಾಯಿತೆಂದು ನಿಜವಾದ ಸಮಾಧಾನ ಹೊಂದುವಂತೆ ನಾವು ದುಡಿಯಬೇಕು.

ಈಗ ನಮ್ಮ ಸಾಹಿತ್ಯ ಝುರಿಗೆ ವರ್ಷಾಕಾಲವು ಪ್ರಾಪ್ತವಾಗಿದೆ. ಆಂಗ್ಲ, ಸಂಸ್ಕೃತ, ಹಳೆಯದು, ಹೊಸದು, ಪಟ್ಟಣದ್ದು, ಹಳ್ಳಿಯದು, ಅರಮನೆ, ಗುರುಮನೆ,ಗುಡಿಸಲು, ದೇಶೀಯ, ವಿದೇಶೀಯ ಮುಂತಾದವುಗಳ ವಿಚಾರಗಳೆಲ್ಲ ಕನ್ನಡದಲ್ಲಿ ಪ್ರಚಾರವಾಗುತ್ತಲಿದೆ. ಹೇಳಿದುದನ್ನೇ ಹೇಳಬೇಕಾದರೆ ಕರ್ಣಾಟಕ ಸಂಘಗಳೂ ಹಿರಿಯರೂ ಕನ್ನಡದ ಕಡೆಗೆ ಹೊರಳಿದುದು, ವಿದ್ಯಾಪೀಠದಲ್ಲಿ ಕನ್ನಡ ಸಾಹಿತ್ಯವು ಭದ್ರವಾಗಿ ನಿಲ್ಲದಿದ್ದರೂ ಹೋಗಿ ಬಂದು ಮಾಡುವ ಅಪ್ಪಣೆ ಸಿಕ್ಕಿದುದು ಇವೆಲ್ಲಾ ಸಕಾಲದಲ್ಲಿ ಒಂದೊಂದು ಹದವಾದ ಮಳೆಗಳು ಬಂದಂತೆ.

ಯಾವ ಭಾಗವನ್ನು ತೆಗೆದುಕೊಂಡರೂ ತಾಳ್ಮೆಗಾರರು ಮಧ್ಯಸ್ಥಗಾರರು ಆವೇಶಯುತರು ಇದ್ದೇ ಇರುವರು. ಸಾಹಿತ್ಯ ಭಾಗದ ಆವೇಶಗಾರರಿಗೆ ನಖಶಿಖಾಂತವಾಗಿ ಕನ್ನಡಿಗರೆಂದು ಹೆಸರು. ಇವರದು ಒಂದೇ ದಾರಿ. ದೀಪಾವಳಿ ಹಬ್ಬವೆನ್ನುವುದಕ್ಕೆ ಸೊಡರ ಸಾಲಿನ ಹಬ್ಬವೆನ್ನುವರು. ಕೆಲವರು ಪಾಳು ಕೋಟೆಯ ಕಲ್ಲನ್ನು ತಿದ್ದಿ ಹೊಸದಾಗಿ ಸೇತುವೆ ಕಟ್ಟಿಕೊಂಡಂತೆ ಹಳೆಯ ಸಾಹಿತ್ಯವನ್ನು ಕಾಲಕ್ಕೆ ತಕ್ಕಂತೆ ಛಂದಸ್ಸು ಆದಿಯಾಗಿ ಮಾರ್ಪಡಿಸಬೇಕೆನ್ನುವರು. ಛಂದಸ್ಸು ರಸಕ್ಕೆ ಅಡ್ಡಗಟ್ಟೆಂದು ಕೆಲವರು. ಇತರರು ಹಳೆಯದು ಸ್ವಲ್ಪ ಹೊಸದು ಸ್ವಲ್ಪ ಸೇರಿಸಿ ಅರಮನೆ ದರ್ಬಾರಿನ ಚಂದದಂತೆ ಸಾಹಿತ್ಯ ದೇವಿಯನ್ನು ಅಲಂಕರಿಸಬೇಕೆನ್ನುವರು. ಎಲ್ಲರಿಗೂ ಧನ್ಯವಾದಗಳು, ಎಲ್ಲರ ಸದುದ್ದೇಶಗಳೂ ಕೈಗೂಡಲಿ. ಹಳೆಯ ಸಂಸ್ಕೃತಿಯು ಅಂದರೆ ನಿಜವಾದ ಕನ್ನಡದ ಸಂಪ್ರದಾಯವು ಸಾಹಿತ್ಯ ಮಾರ್ಗದಲ್ಲೂ ಇರಬೇಕೆಂದು ನಮ್ಮ ಮತ.

ಸಾಹಿತ್ಯವು ಒಂದೇದಿನ ಸರ್ವತೋಮುಖವಾಗಿ ಸೊಗಸಾಗುವುದಿಲ್ಲ. ನೂರಾರು ವರ್ಷಗಳು ಕಳೆದ ನಂತರ ನವರಸ ಭರಿತವಾಗುವುದು. ಅಷ್ಟಾಗುವವರೆಗೆ ಕನ್ನಡಿಗರು ದುಡಿಯಬೇಕಾಗಿದೆ. ಅಳಿಲ ಭಕ್ತಿ ಮಳಲ ಸೇವೆಯೆಂಬ ಗಾದೆಯಂತೆ ನಮಗೆ ಇನ್ನಾವ ರೀತಿಯಿಂದಲೂ ಸೇವೆಗನುಕೂಲವಿಲ್ಲದಿರುವುದರಿಂದ ಹಳ್ಳಿಯ ವಿಚಾರವನ್ನೊಳಗೊಂಡ ಈ ಪುಟ್ಟ ಪುಸ್ತಕ ರೂಪವಾದ ಸೇವೆಯು ಒದಗಿದುದಕ್ಕಾಗಿ ಮನಸ್ಸಮಾಧಾನವಾಗಿದೆ.

ನಾವು ಹಳ್ಳಿಯ ಸಾಹಿತ್ಯವನ್ನು ಸಂಗ್ರಹ ಮಾಡಲು ಹೊರಟಾಗ ಬರೀ ಬೆಂಗಾಡಿನ ಪ್ರಯಾಣದಂತೆ ತೋರಿತು. ಬರುಬರುತ್ತ "ಬೆಳೆಯು ಬೇಕಾದಷ್ಟಿದೆ, ಕುಯ್ಯುವವರೇ ಇಲ್ಲವಲ್ಲ" ಎನ್ನುವ ಉದ್ಗಾರವು ಹೊರಡುವಂತಾಯ್ತು. ನೂರಿಪ್ಪತ್ತು ಮನೆಯಿರುವ ನಮ್ಮೂರಿನಲ್ಲೇ ಇಷ್ಟು ವಿಚಾರಗಳು ದೊರೆತಿರುವಾಗ ಡಕಣಾಚಾರಿಯ ಕಟ್ಟಡಗಳು ಕೋಟೆ ಕೊತ್ತಲುಗಳು ಶಾಸನ ಸಾಮಗ್ರಿಗಳು ಇತ್ಯಾದಿ ಅನೇಕಾನೇಕ ವಿಚಾರಗಳಿರುವ ಊರಿನಲ್ಲಿ ಇನ್ನೆಷ್ಟು ಸಾಹಿತ್ಯಕ್ಕೆ ಅನುಕೂಲ ಸನ್ನಿವೇಶವಿದೆಯೋ ಎಂದು ತೋರಿತು. ಮುಖ್ಯವಾಗಿ ಕನ್ನಡ ನಾಡಿನ ಸಾಹಿತ್ಯ ಭಕ್ತರು ಹಳ್ಳಿಯ ಕಡೆಗೆ ಹೊರಳದಿದ್ದರೆ ಸ್ವಾರಸ್ಯವಿಲ್ಲ.

ಶಾಸನದ ಇಲಾಖೆಯವರು ಹಳ್ಳಿಗಳಿಗೆ ಬಂದು ತಮ್ಮ ಕಾರ್ಯರಂಗಕ್ಕಿಳಿದಾಗ ಅಟ್ಟಬೆಟ್ಟಗಳಲ್ಲಿ ಅಡಗಿದ್ದ ಓಲೆಯ ಗರಿ, ತಾಮ್ರ, ಕಂಚು, ಕರಡುಕಾಗದ, ಶಿಲಾ ಮುಂತಾದವುಗಳ ಶಾಸನಗಳನ್ನು ಹೊರಗೆಡಹಿದರು. ಆದರೆ ಸಾಹಿತ್ಯ ಸೇವಕರಾದ ಜೋಗಿಗಳು ಬಂದಾಗ ಒಬ್ಬರೂ ಕೈಗೆ ಸಿಕ್ಕುವುದಿಲ್ಲ. ಅಷ್ಟಾಗಿ ನಾವು ಹಿಂದಾದ ಮನಸ್ಸುಳ್ಳವರಾಗಬಾರದು. ನಾವು ಹಳ್ಳಿಯವರಿಗಿಂತ ಹಳ್ಳಿಯವರಾಗಿ ಅವರಲ್ಲೇ ಕಲೆತು ಪ್ರೀತಿಯಿಂದ ಕಾರ್ಯಸಾಧನೆ ಮಾಡಬೇಕು. ಕೆಲವರು ನಾಚಿಕೆಯಿಂದ ಹಾಡುಗಳನ್ನು ಹಾಡುವುದಿಲ್ಲ. ಕೆಲವರು ಅಯ್ಯೋ ಅರ್ಥಮರ್ಥ ವಿಚಾರಗಳನ್ನು ಏನು ಹೇಳುವುದೆಂದು ಸುಮ್ಮನಾಗುವರು. ಇತರರು ಇವೇನೋ ಗಂಡಾಂತರ ಬಂದಿತೆಂದು ಭಾವಿಸುವರು. ಟಿಕೇಟಿನ ದುಡ್ಡು ಕೆಳಗೆ ಬಿದ್ದುಹೋಗಿ ಅದನ್ನು ಹುಡುಕುತ್ತ ಹಿಂದಿರುಗುವವನ ಮನಸ್ಸಿನಷ್ಟು ಬೇಜಾರಾಗುವುದು. ಆದರೆ ದೇಶ ಸೇವೆಯನ್ನು ಮರೆಯುವುದಕ್ಕಾದೀತೇ? ವೃತ್ತಿವಂತರು, ಜಹಗೀರ್ದಾರರು, ಹಳ್ಳಿಯ ಉಪಾಧ್ಯಾಯರು, ಗ್ರಾಮದ ಮುಖಂಡರು ಮುಂತಾದವರು ಈ ವಿಧವಾದ ಕಾರ್ಯರಂಗಕ್ಕಿಳಿದರೆ ಕರ್ಣಾಟಕ ಸಾಹಿತ್ಯವನ್ನು ತುಂಬಿಡಲು ಕಟ್ಟಡವನ್ನೆಬ್ಬಿ ತರೋಣ?

ಈ ಪುಸ್ತಕದಲ್ಲಿ ಊರಿನ ಚಿತ್ರ, ಹೇಮಗಿರಿ ಬೆಟ್ಟದ ಮೇಲೆ ಕಾಣುವ ಸೊಬಗಿನ ರೂಪರೇಖೆ, ಸುಗ್ಗಿಯ ನೋಟ, ಹೇಮಾವತಿಯ ಭಾವಚಿತ್ರಗಳ ಇವುಗಳನ್ನಾದರೂ ಸೇರಿಸಬೇಕಾಗಿತ್ತು. ಈ ನವೀನಯುಗದಲ್ಲಿ ಚಿತ್ರಸಹಿತವಾದ ಸಾಹಿತ್ಯವು ಬೆಳೆದಷ್ಟೂ ಒಳ್ಳೆಯದು. ಆದರೆ ಆ ಅನುಕೂಲಗಳೆಲ್ಲ ಹಳ್ಳಿಯ ಹುಡುಗರಿಗೆಲ್ಲಿ ಬರಬೇಕು ? ಹಲ್ಲಿದ್ದರೆ ಕಡಲೆಯಿಲ್ಲ, ಕಡಲೆಯಿದ್ದರೆ ಹಲ್ಲಿಲ್ಲ.

ಪ್ರಪಂಚದ ಜನಾಂಗಗಳಲ್ಲಿ ಈಗ ನಮಗೆ ನಾಗರಿಕರೆಂದು ತೋರುವ ಪಾಶ್ಚಾತ್ಯರಲ್ಲಿರುವ ಮುಖ್ಯ ಗುಣ ವ್ಯವಸ್ಥೆ. ಸೈನ್ಯ ಸಿದ್ಧತೆಗಳೆಷ್ಟು ವ್ಯವಸ್ಥೆಯೋ ಸಾಹಿತ್ಯ ಪ್ರಚಾರದಲ್ಲಿಯೂ ಅಷ್ಟೇ ವ್ಯವಸ್ಥಾ ಮಾರ್ಗವುಂಟು. ಪ್ರಕೃತ ಹಳ್ಳಿಯಲ್ಲಿ ನಮಗೆ ಒಡಕು ಪಾತ್ರೆಯಂತೆ ಸಿಕ್ಕುವ ಗದ್ಯ ಪದ್ಯದ ಚೂರುಗಳನ್ನು ಆರಿಸಿ ಸರಿಯಾದ ಒಂದು ರೂಪು ಕೊಡುವ ವ್ಯವಸ್ಥೆಯಾಗಬೇಕಾಗಿದೆ. ರಸಪ್ರಧಾನರು ಛಂಧಸ್ಸುಗಳ ಅಡ್ಡಗಟ್ಟನ್ನು ಕಿತ್ತೊಗೆಯಬೇಕೆನ್ನುವರು. ಇದರ ಫಲವಾಗಿ ಕನ್ನಡ ಪದ್ಯದ ದ್ವಿತೀಯಾಕ್ಷರ ಪ್ರಾಸವು ಮಾಯವಾಗುತ್ತಿದೆ. ಇಷ್ಟೇ ಅಲ್ಲ. ಷಟ್ಪದಿಯು ಅಷ್ಟಪದಿ ನವಪದಿಯಾಗುತ್ತಿದೆ. ಓಗೆ ದಿಕ್ಕಾಪಾಲಾಗಿ ನೂತನ ಸಾಹಿತ್ಯವು ಓಡುವುದೊಂದು ಕಡೆ. ಒತ್ತಟ್ಟು ಹಳ್ಳಿಯ ಸಾಹಿತ್ಯದಲ್ಲಿ ಕಾಣುವ ವೃತ್ತಗಳು ಅದಾವ ಗುಂಪಿನವೋ ತಿಳಿಯದ ಹಾಗಿರುವುವು. ಇದಕ್ಕೆಲ್ಲ ಸಾಹಿತ್ಯ ಭಕ್ತರು ಏನಾದರೊಂದು ವ್ಯವಸ್ಥೆ ಮಾಡಿ ಒಂದು ಶಿಸ್ತನ್ನು ಏರ್ಪಡಿಸಿದರೆ ಎಷ್ಟೋ ಲಕ್ಷಣ. ಇಲ್ಲದಿದ್ದರೆ ಛಂದಸ್ಸಿಗೇ ಪ್ರಾಬಲ್ಯ ಬಂದ ಕಾಲದಲ್ಲಿ ಈಗಿನ ಕೃತಿಯು ಪುಡಿಯಾಗಿ ಉದುರಿ; ಕಾಡಿನಲ್ಲಿ ಉದುರಿ ಬಿದ್ದಿರುವ ಗುಲಾಬಿಯ ಹೂವಿನಂತಾಗಬಹುದು. ಹಾಗಾದಂತೆ ಮಾಡಲು ಹಿರಿಯರಿಗಿದೇನೂ ಅಷ್ಟು ಕಷ್ಟವಾದ ಕೆಲಸವಲ್ಲ. ಸಾರಾಂಶ–ಗುಣವುಳ್ಳ ಕೃತಿಗಳು ಹಳೆಯವಾಗಿರಲಿ, ಹೊಸವಾಗಿರಲಿ ಅವಕ್ಕೂ ಒಂದು ಶಾಸನಬದ್ಧವಾದ ಮುದ್ರೆಯಿದ್ದರೆ ಬೆಲೆಯಧಿಕ.

ನಾವು ಸಾಧ್ಯವಾದಷ್ಟು ಎಚ್ಚರಿಕೆಯಿಂದ ಹಳ್ಳಿಗರ ಬಾಯಿಂದ ಬಂದ ಪದ್ಯಗಳನ್ನೂ ಮತ್ತಿತರ ವಿಷಯಗಳನ್ನೂ ಸಾವಧಾನದಿಂದ ಯೋಚಿಸಿ ಬರೆದಿರುವೆವು. ಆದರೆ ದೀಪದ ಹತ್ತಿರ ಕತ್ತಲೆಯಿರುವಂತೆ ಮನಸ್ಸಿನ ಹತ್ತಿರ ಮರೆವು ಇರುವುದುಂಟು. ಅದರಿಂದೇನಾದರೂ ವಿಷಯಗಳು ಬಿಟ್ಟುಹೋಗಿದ್ದರೆ ವಾಚಕರು ಮನ್ನಿಸಬೇಕು. ಗದ್ಯಪದ್ಯಗಳಲ್ಲಿ ಗಾದೆಯ ಮಾತುಗಳಲ್ಲಿ ಅತಿ ಭೀಭತ್ಸಿತ ರಸವುಳ್ಳ ಕೃತಿಯನ್ನು ಕೆಲವು ಕಷ್ಟ ಮರ್ಯಾದೆಯ ಮಾರ್ಗಕ್ಕೆ ತಿರುಗಿಸಿ ಅಸಾಧ್ಯವಾದುದನ್ನು ಬಿಟ್ಟುಬಿಟ್ಟಿರುವುದಾಗಿದೆ. ಹಳ್ಳಿಗರು ಕೋಲಾಟದ ಪದ್ಯಗಳನ್ನೂ ಹಾಡುಗಳನ್ನೂ ಕಲಿತುಕೊಳ್ಳಬಹುದು. ಆದರೀಗ ಯಕ್ಷಗಾನವು ಸಾಮಗಾನಕ್ಕೆ ತಿರುಗುವಕಾಲ. ಹೆಂಗಸರು ಸಂಗೀತ ಪಾರಿಜಾತಕದ ಕಡೆಗೆ ತಿರುಗಿರುವರು. ಆದುದರಿಂದ ಇದೆಲ್ಲ ಸಾಹಿತ್ಯದಲ್ಲಿ ಸಂಗ್ರಹಿಸುವ ವಿಷಯವಾಗಿ ಕಾಲಾನುಕಾಲಕ್ಕೆ ಪರಿಣಮಿಸಬಹುದು, ಕಾಲಗತಿಯನ್ನು ತಡೆಯುವವರಾರು?

ಯಾವ ಮಾತಿನಲ್ಲೂ ವ್ಯಂಗ ಮರ್ಯಾದೆಯಿರಬಾರದು. ಅದರಲ್ಲೂ ದೇಶಾಭ್ಯುದಯ ಸಾಧಕಗಳಾದ ಗ್ರಂಥಗಳಲ್ಲಿ ವ್ಯಂಗ್ಯ ಮರ್ಯಾದೆಯು ಎಳ್ಳಿನ ಮೊನೆಯಷ್ಟೂ ಇರಬಾರದೆಂದು ಕೆಲವರ ಮತ. ಸರಿ–ಎಂತಹ ವ್ಯಂಗ್ಯವು ಇರಲೇಬಾರದು? ಇನ್ನೊಬ್ಬರ ಮನಸ್ಸನ್ನು ಚುರುಚುರೆನ್ನಿಸುವುದು ಕೂಡದು. ಅದು ನಮಗೂ ಇಷ್ಟ. ಚಮತ್ಕಾರ ಸದುದ್ದೇಶ ಗಂಭೀರ ವಾಣಿಯಿಂದ ದೋಷದ ಸ್ವರೂಪವನ್ನ ಪ್ರಕಾಶ ಪಡಿಸುವ ವ್ಯಂಗವು ಇಲ್ಲದ ಮಾತೆಂತಹುದು? ಬಿ.ವೆಂಕಟಾಚಾರ್ಯರ ಅಡವಿಯ ಹುಡುಗಿಗಿಂತಲೂ ಕಾಡು ಕಗ್ಗಲ್ಲು ಹುಡುಗಿಯಂತಹುದೆಂದು ನಮ್ಮ ನಂಬಿಕೆ. ಅದಲ್ಲದೆ ಸರಸವಾಗಿ ವ್ಯಂಗ್ಯ ಮರ್ಯಾದೆಯಿಂದ ಮಾತಾಡುವುದು ಸ್ವಭಾವ ಗುಣ. ವಿದ್ಯಾರ್ಥಿವೇತನ ಕೊಡಿಸಿ ಕೊಡಿ ಎಂದು ಕೇಳಿದರೆ 'ಹೋಗೋ ಕೊಡೋದಿಲ್ಲ' ಅನ್ನುವವರೂ ಇದ್ದಾರೆ. ನೀನು ಕೇಳುವುದು ಸರಿ. ನೀನು ಬುದ್ಧಿವಂತನೂ ಅಹುದು. ಆದರೆ ನಿನಗೆ ಓದುವುದಕ್ಕೇ ಪುರಸತ್ತು ಇಲ್ಲವಲ್ಲ. ಏನು ಮಾಡೋಣ ಎನ್ನುವವರಿಲ್ಲವೇ? ಇಲ್ಲವೆಂದು ಹೇಳುವುದಕ್ಕಾದೀತೆ? ಇದನ್ನೆಲ್ಲ ಏಕೆ ಹೇಳಬೇಕಾಯಿತೆಂದರೆ – ಈ ಪುಸ್ತಕದಲ್ಲೂ ವ್ಯಂಗ್ಯಗರ್ಭಿವಾದ ಮಾತುಗಳಿಲ್ಲದೆ ಇಲ್ಲ. ಆದರವು ಸದುದ್ದೇಶದ ಗುರಿಯಿಟ್ಟುಕೊಂಡೇ ಹೊರಹೊರಟಿವೆ ಎಂದು ಹೇಳುವುದಕ್ಕಾಗಿ.

ಮನುಷ್ಯನಿಗೆ ಹೇಗೆ ವೇಷ ಭಾಷೆಗಳು ಅಚ್ಚುಗಟ್ಟಾಗಿರಬೇಕೋ ಅಂತೆಯೇ ಗ್ರಂಥಕ್ಕೂ. ಇಲ್ಲಿಯವರೆಗೆ ಈ ಪುಸ್ತಕದ ವೇಷದ ಸ್ವರೂಪವನ್ನು ಹೇಳಿದುದಾಯಿತು. ಇನ್ನು ಭಾಷೆ–ಇದರಲ್ಲಿ ಗ್ರಂಥದ ಹಳ್ಳಿಯ ವ್ಯವಹಾರಗಳ ಭಾಷೆಯೆಲ್ಲ ಸೇರಿ ಹೋಗಿದೆ. ಓದುಗರಿಗೆ ಸ್ವಲ್ಪ ಶ್ರಮವೇ ಆಗಬಹುದು. ಸಾರವೇನಾದರೂ ಇದ್ದರೆ ಗಟ್ಟಿ. ಬಾಕಿಯ ಕಡೆ ಗಮನ ಕೊಡದಿದ್ದರೆ ಸರಿ. ಸಾರಾಂಶ – ಭಾಷೆ ಜೌಜೌ.

ಈ ಗ್ರಂಥದಲ್ಲಿ ವಿಶೇಷವಾಗಿ "ಹಿಂದೆ ಈ ರೀತಿಯಾಗಿತ್ತು. ಈಗ ಇಲ್ಲವೇ" ಎನ್ನುವ ಸಂದೇಹ ಬರುವಂತೆ ಆದ್ಯತನ ಭೂತಕಾಲವನ್ನು ಸೂಚಿಸುವ ಕ್ರಿಯಾಪದಗಳೇ ಹೇರಳವಾಗಿವೆ. ನಾಟಕ ನೋಡಿದವರು ಅದರ ವಿಚಾರವನ್ನು ತಿಳಿಸುವಂತೆ ಈ ಮಾದರಿ ಇನ್ನೊಂದು ನಾಟಕ. ಜಗತ್ತು ರಂಗಭೂಮಿ.

ಇನ್ನೇನು ಹೇಳಬೇಕೋ, ಅದು ವಾಚಕರ ಆಧೀನ. ಈಗಿನ ಬರೆಹಗಾರರು ತಮ್ಮನ್ನು ತಾವೇ ತಿದ್ದಿಕೊಂಡು ಗದ್ಯಪದ್ಯಗಳಲ್ಲಿ ಔಚಿತ್ಯವನ್ನೂ ಸದ್ಯದ ಜನಮನೋಭೂಮಿಕೆಗೆ ಅನುಗುಣವಾದ ಸನ್ನಿವೇಶವನ್ನೂ ಕಲ್ಪಿಸಿಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಇದೇ ಮೊದಲಿನ ಪ್ರಯತ್ನವಾಗಿರುವುದರಿಂದ ಮೇಲಿನ ಮಾತನ್ನು ಹೇಳಬೇಕಾಯಿತು.

ಸ್ನೇಹಿತರೇ! ಸಂಸ್ಕೃತಿಯನ್ನು ಬಿಟ್ಟೀರಿ ಜೋಕೆ. ಔಚಿತ್ಯವನ್ನು ಮರೆತೀರಿ ಎಚ್ಚರಿಕೆ. ಕನ್ನಡನಾಡಿದು ಮೈಸೂರು ಎಂಬುದನ್ನು ನಿಮ್ಮ ಜ್ಞಾಪಕದಲ್ಲಿಡಿ. ಮೈಸೂರಿನಲ್ಲಿ ಉದಯವಾಗುತ್ತಿರುವ ಕಟ್ಟಡಗಳು, ಪಾಡುತ್ತಿರುವ ರಾಗಗಳು, ಹಾಕಿಕೊಳ್ಳುವ ವೇಷಗಳು ಎಲ್ಲವೂ ಮನಸ್ಸಿಗೆ ಒಂದು ವಿಧವಾದ ಕಳವಳವನ್ನುಂಟು ಮಾಡಿ ರಾಮನನ್ನು ನೋಡಿದ ಗುಹನ ಮನೋಭಾವನೆಯನ್ನುಂಟು ಮಾಡುತ್ತಿವೆ. ಕರ್ಣಾಟಕ ಸಂಸ್ಕತಿಯೆನ್ನುವ ಪದಾರ್ಥವೊಂದಿಲ್ಲದಿದ್ದರೆ, ಈ ರೀತಿ ತಳಮಳವೇಕೆಂದು ನನ್ನಲ್ಲಿ ನಾನೇ ಪ್ರಶ್ನೆ ಮಾಡಿಕೊಳ್ಳುತ್ತೇನೆ. ಕರ್ಣಾಟಕ ತತ್ತ್ವವು ಸ್ವತಂತ್ರವಾಗಬಲ್ಲುದೆಂದು ನನಗೆ ಆತ್ಮವಿಶ್ವಾಸವಿದೆ. ಹಳ್ಳಿಗಳ ನಾನಾ ಶಾಖೆಗಳ ವಿಚಾರ ಮಾಡಲಾಗಿ ಆಯಾ ಭಾಗಗಳಿಗೆ ಅನುಗುಣವಾದ ಶಬ್ದಭಂಡಾರಗಳು ದೊರೆತು ನನ್ನ ಆತ್ಮವಿಶ್ವಾಸವು ದೃಢಪಟ್ಟಿದೆ. ಅದನ್ನು ಕಾಪಾಡುವುದು ನನ್ನ ಮತ್ತು ನನ್ನ ಕರ್ಣಾಟಕ ಸ್ನೇಹಿತರ ಕರ್ತವ್ಯ. ಇನ್ನೆಷ್ಟು ಹೇಳಿದರೂ ಅಷ್ಟೆ. ಯಾವುದು ಕನ್ನಡನಾಡಿಗೆ ಶ್ರೇಯಸ್ಸೋ ಅದನ್ನು ಅನುಸರಿಸಿರಿ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿ ತಪ್ಪುಗಳನ್ನು ತಿದ್ದಿ ಇನ್ನೂ ಅನೇಕ ವಿಧವಾಗಿ ಕನ್ನಡನಾಡಿನ ದೃಷ್ಟಿಯಿಂದ ಸಹಾಯ ಮಾಡಿದ ಅರಮನೆಯ ವಿದ್ವಾನ್ ನ್ಯಾಯತೀರ್ಥ, ಜೈನಶಾಸ್ತ್ರ ವಿಶಾರದ ಮ.ರಾ.ಶಾಂತರಾಜಶಾಸ್ತ್ರಿಗಳು ದೀರ್ಘಾಯುಷ್ಮಂತರಾಗಿದ್ದು ಕರ್ಣಾಟಕದ ಅಭಿವೃದ್ಧಿಗೆ ಇತೋಪ್ಯತಿಶಯವಾಗಿ ಸಹಾಯಮಾಡುವಂತೆ ಅನುಗ್ರಹಿಸೆಂದು ಹೇಮಗಿರಿಗಧಿನಾಯಕನನ್ನು ಪ್ರಾರ್ಥಿಸಿ, ಕನ್ನಡಿಗರಿಗಭಿವಂದಿಸಿ ಈ ಮುನ್ನುಡಿಯನ್ನು ಮುಗಿಸುತ್ತೇನೆ.

❑

೬

ಹಕ್ಕಿಪಿಕ್ಕಿಜನಾಂಗ : ಒಂದು ನೋಟ

(ಸಾಕ್ಷ್ಯಚಿತ್ರಕ್ಕಾಗಿ ಮಾಡಿಕೊಂಡ ಟಿಪ್ಪಣಿ)

ರುದ್ರಣ್ಣ ಚಿಕ್ಕಜಾಲ

ಮುಂಜಾನೆ ಆಯಿತೆಂದರೆ ಮೊದಲು ಕೇಳಿಬರುವುದು ಹಕ್ಕಿಗಳ ಕಲರವ. ಇವು ಸೋಮಾರಿತನದ ಮಾನವ ಜನಾಂಗವನ್ನ ಬೆಳಗಾಯಿತು ಎಂದು ಎಚ್ಚರಿಸುವ ನೀನಾದವು ಹೌದು. ಯಾರ ಹಂಗೂ ಇಲ್ಲದೇ ನೀಲಾಕಾಶದಲ್ಲಿ ಸ್ವೇಚ್ಛೆಯಿಂದ ಹಾರಾಡುತ್ತಿರುವ ಈ ಹಕ್ಕಿಗಳಿಗೆ ಇನ್ನು ಕೆಲವೇ ಕ್ಷಣಗಳಲ್ಲಿ ವ್ಯಕ್ತಿಯೊಬ್ಬನ ಕೈಸೆರೆಯಾಗುತ್ತೇವೆ ಎಂಬುದರ ಅರಿವು ಇಲ್ಲದೆ ತಮ್ಮದೇ ಆದ ಭಾಷೆಯಲ್ಲಿ ಹಾಡುತ್ತಾ ಪಾಡುತ್ತಾ ಹಾರಾಡುತ್ತಿವೆ. ಒಂದೊಂದು ಹಕ್ಕಿಯು ಭೂಮಿಯಲ್ಲಿ ನನ್ನ ಆಹಾರವನ್ನು ಹೆಕ್ಕಿಹೆಕ್ಕಿ ಹುಡುಕಾಟ ಮಾಡುತ್ತಿವೆ.

ಬಂದ ನೋಡಿ, ಮಾನವ ರೂಪದ ದೈತ್ಯ ಈತನೇ ಹಕ್ಕಿಗಳನ್ನ ಹಿಡಿಯುವಾತ. ಈತನನ್ನ ಕಾಲಗರ್ಭದಲ್ಲಿ ಪಿಕ್ಕಿ ಎಂದು ಗುರುತಿಸಲಾಗಿದೆ. ಹಕ್ಕಿಗಳ ಧ್ವನಿಯನ್ನು ಅನುಸರಿಸಿ ತಾನೇ ಕೂಗೂಡುತ್ತಾ ಅವುಗಳನ್ನ ಹಿಂಬಾಲಿಸಿ ಹಿಡಿಯುವಾತ. ಕಾಲಕ್ರಮೇಣ ಇವರ ಜನಾಂಗವೇ ಹಕ್ಕಿಪಿಕ್ಕಿ ಜನಾಂಗ ಎಂದು ಗುರುತಿಸಲ್ಪಟ್ಟಿದೆ.

ಹಲವು ರೀತಿಯ ಸಲಕರಣೆ ಅಂದರೆ ತಾವೇ ತಯಾರಿಸಿ ಸಿದ್ಧಪಡಿಸಿಕೊಂಡ ಬಲೆಗಳನ್ನ ತಾವಿರುವ ಪ್ರದೇಶಗಳ ಬಳಿ ಅಥವಾ ಕಾಡು ಪ್ರದೇಶಗಳಿಗೆ ತೆಗೆದುಕೊಂಡು ಹೋಗಿ ಆ ಬಲೆಗಳನ್ನು ಅಲ್ಲಿ ಹಾಕುತ್ತಾರೆ. ಅವರ ಜೊತೆಯಲ್ಲಿ ಸದಾ ಹಸು ಒಂದು ಇದ್ದೇ ಇರುತ್ತದೆ. ಆ ಹಸು ಮೇಯುತ್ತಿರುವಾಗ ಅದನ್ನು ಕಂಡ ಹಕ್ಕಿಗಳು ತಮಗೂ ಈ ಸ್ಥಳದಲ್ಲಿ ಆಹಾರ ದೊರಕಬಹುದೆಂದು ಕೆಳಗಿಳಿದು ಬಂದು ಹುಡುಕಾಡುತ್ತಾ ಈ ಪಿಕ್ಕಿ ಹಾಕಿರುವ ಬಲೆಗಳಿಗೆ ತಗುಲಿಹಾಕಿಕೊಳ್ಳುತ್ತವೆ. ಇದಕ್ಕಾಗಿಯೇ ಹಕ್ಕಿಪಿಕ್ಕಿಗಳು ಬಹುತೇಕ ಕಾಡುಗಳ ಬಳಿ ತಮ್ಮ ತಾಂಡಗಳನ್ನ ನಿರ್ಮಿಸಿಕೊಂಡು ಹಕ್ಕಿ ಹಿಡಿದು ಮಾರಾಟಮಾಡುವ ಅಥವಾ ತಾವೇ ಅದನ್ನ ಆಹಾರವನ್ನಾಗಿ ಬಳಸುವುದನ್ನ ರೂಢಿಮಾಡಿಕೊಂಡು ಬಂದಿರುವುದನ್ನು ನಾವು ಬಹುಹಿಂದಿನ ಕಾಲದಿಂದಲೂ ಕಾಣಬಹುದಾಗಿದೆ.

ನಮ್ಮ ಕರ್ನಾಟಕದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಕೆಲವು ಕೇಂದ್ರಗಳಲ್ಲಿ: ತುಮಕೂರು, ಮೈಸೂರು, ಹಾಸನ, ಹುಣಸೂರು, ಚಿಕ್ಕಮಗಳೂರು, ಬಳ್ಳಾರಿ, ಹೊಸಪೇಟೆ, ದಾವಣಗೆರೆಯ ಹಲವು ಪ್ರದೇಶಗಳಲ್ಲಿ ಈ ಹಕ್ಕಿಪಿಕ್ಕಿ ಜನಾಂಗದವರು ಕಂಡುಬರುತ್ತಾರೆ. ೧೯೯೧ರ ಜನಗಣತಿಯ ಪ್ರಕಾರ ೫೨೮೭ರಷ್ಟು ಜನಸಂಖ್ಯೆಯು ಹಕ್ಕಿಪಿಕ್ಕಿಯವರಾದಾಗಿತ್ತು ಎಂದು ಹೇಳಲಾಗಿದೆ.

ವಿದ್ವಾಂಸರ, ಇತಿಹಾಸಕಾರರ, ಮಾನವಶಾಸ್ತ್ರಜ್ಞರ ಪ್ರಕಾರ ಹಕ್ಕಿಪಿಕ್ಕಿ ಜನಾಂಗದವರು ಮೂಲತಃ ಗುಜರಾತಿನಿಂದ ರಾಜಸ್ಥಾನ, ಮಹಾರಾಷ್ಟ್ರಗಳ ಮೂಲಕವಾಗಿ ಕರ್ನಾಟಕಕ್ಕೆ ಬಂದು ನೆಲಸಿದರು ಎನ್ನಲಾಗಿದೆ. ಅಲ್ಲದೇ ಈ ಜನಾಂಗದವರನ್ನ ನಾವು ಪಕ್ಕದ ಆಂಧ್ರಪ್ರದೇಶದಲ್ಲೂ ಸಹ ಕಾಣಬಹುದು ಎನ್ನಲಾಗಿದೆ.

ಸುಂದರ ನಯನ ಮನೋಹರವಾದ ರುದ್ರರಮಣೀಯ ನಿಸರ್ಗದ ಮಧ್ಯದಲ್ಲಿ, ತಪ್ಪಲುಗಳಲ್ಲಿ ಈ ಜನಾಂಗದವರು ತಮ್ಮ ಸ್ಥಳಗಳನ್ನ ನಿರ್ಧರಿಸಿಕೊಂಡಿದ್ದಾರೆ. ಅಲ್ಲಿಯವರೆಗೆ ನಿಸರ್ಗದ ದೇಣಿಗೆಗಳಿಂದ ಆರ್ಥಿಕವಾಗಿ ಅನುಕೂಲವಾಗಿರುವುದರ ಜೊತೆಗೆ ದೈಹಿಕವಾಗಿಯೂ ಮಾನಸಿಕವಾಗಿಯು ಸಹ ಬಲಿಷ್ಠರಾಗಿದ್ದಾರೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಇವರ ಜೀವನಶೈಲಿ ನಿಸರ್ಗಕ್ಕೆ ಹೊಂದಿಕೊಂಡಿದ್ದು ಆಧುನಿಕ ನಾಗರೀಕತೆಯ ಸೆಳೆತವನ್ನ ಪಡೆಯುವಷ್ಟು ಆರ್ಥಿಕತೆಯು ಇವರಿಗೆ ಒದಗಿಬಂದಿಲ್ಲ. ಆದುದರಿಂದಾಗಿ ಇಂದಿಗೂ ಸಹ ಇವರು ಇಂತಹ ಪ್ರದೇಶಗಳಲ್ಲೇ ವಾಸಿಸಲು ಇದು ಒಂದು ಕಾರಣವಾಗಿರಬಹುದು ಎನ್ನಲಾಗಿದೆ. ನಾವು ಇವರು ವಾಸಿಸುವ ಸ್ಥಳಗಳನ್ನ ನೋಡಿದಾಗ ತಿಳಿಯುವುದು, ಪ್ರತ್ಯೇಕತೆ. ಅದು ಇಂದಿಗೂ ಈ ಜನಾಂಗ ಅಸ್ತಿತ್ವದಲ್ಲಿರಲು ಒಂದು ಮಹತ್ವದ ಕಾರಣವಾಗಿದೆ ಎನ್ನಬಹುದು.

ಈ ಹಕ್ಕಿಪಿಕ್ಕಿ ಜನಾಂಗದವರನ್ನ ಅವರು ಧಾರ್ಮಿಕ ಚಟುವಟಿಕೆ ಮತ್ತು ಪೂಜಿಸುವ, ಆರಾಧಿಸುವ ದೇವರು, ಈ ಆಧಾರದಿಂದ ಕೆಲವು ಉಪಜಾತಿ ಜನಾಂಗಗಳನ್ನಾಗಿ ನಾವು ಗುರ್ತಿಸಬಹುದಾಗಿದೆ. ಅದು ಕೇವಲ ಧಾರ್ಮಿಕ ಚಟುವಟಿಕೆ, ಸಂಪ್ರದಾಯಗಳ ಆಚರಣೆಯಲ್ಲಿ ಮಾತ್ರ ಕಂಡುಬರುತ್ತದೆಯೇ ಹೊರತು, ಅವರ ನಡೆ ನುಡಿ, ಉಡುಗೆ ತೊಡುಗೆಗಳಲ್ಲಿ ಕಂಡುಬರುವುದಿಲ್ಲ. ಈ ಕುರಿತಂತೆ ಅವರ ಹಿರಿಯರು ಹೀಗೇ ಅನ್ನುತ್ತಾರೆ.

ಊಟೋಪಚಾರದ ಸಿದ್ಧತೆ ಮತ್ತು ಬಳಕೆ

ಹಕ್ಕಿಪಿಕ್ಕಿ ಜನಾಂಗದವರು ಸಸ್ಯಹಾರಿಗಳು ಹೌದು, ಮಾಂಸಾಹಾರಿಗಳು ಹೌದು. ಇವರು ತಮ್ಮ ದುಡಿಮೆಯಿಂದ ಬಂದ ಹಣದಿಂದ ದವಸಧಾನ್ಯಗಳನ್ನ ಕೊಂಡುತಂದು ಅನ್ನ, ಸಾರುವಿನಂತಹ ಸಸ್ಯ ಆಹಾರವನ್ನು ತಯಾರಿಸಿ ಬಳಸುವುದನ್ನು ನಾವು ಕಾಣಬಹುದು.

ಇನ್ನು ಕಾಡಿನ ಹಲವು ರೀತಿಯ ಪ್ರಾಣಿಗಳನ್ನು ಬೇಟೆಯಾಡಿ ತಂದು ಅವನ್ನೆ ಆಹಾರವನ್ನಾಗಿ ಬಳಸುವುದನ್ನು ಸಹ ನಾವು ದಿನನಿತ್ಯ ಕಾಣಬಹುದಾಗಿದೆ. ಇದು ಇವರ ಮೂಲ ಆಹಾರ ವಿಧಾನವಾಗಿದ್ದು ಕಾಲಕ್ರಮೇಣ, ಸರ್ಕಾರದ ಕೆಲವು ಕಾನೂನುಗಳಿಂದಾಗಿ ಇದು ಕಡಿಮೆಯಾಗುತ್ತಾ ಬಂದಿದೆ ಎನ್ನುತ್ತಾರೆ ಈ ಜನ. ಆದರೂ ತಾವು ದುಡಿದ ಹಣದಿಂದಲೇ ಇವರು ಮಾಂಸವನ್ನ ಖರೀದಿಸಿ ಬಳಸುತ್ತಾರೆ. ಹೀಗಾಗಿ ನಾವು ಈ ಹಕ್ಕಿಪಿಕ್ಕಿ ಜನಾಂಗದವರು ಸಸ್ಯ ಮತ್ತು ಮಾಂಸಾಹಾರಿಗಳೆಂದು ಗುರುತಿಸಬಹುದಾಗಿದೆ. ಆದರೆ ಮಾಂಸ ಮತ್ತು ಮದ್ಯದ ಬಳಕೆ ಇವರಲ್ಲಿ ಹೆಚ್ಚುಹೆಚ್ಚು ರೂಢಿಯಲ್ಲಿರುವುದು ಕಂಡುಬರುತ್ತದೆ.

ಕುಟುಂಬ ವ್ಯವಸ್ಥೆ

ಇನ್ನು ನಾವು ಇವರ ಕೌಟುಂಬಿಕ ವ್ಯವಸ್ಥೆ ಮತ್ತು ಪದ್ಧತಿಗಳಿಗೆ ಬಂದರೆ, ಬಹುತೇಕ ಖಚಿತವಾದ ನಿಖರವಾದ ಮಾಹಿತಿಯು ಇಂದಿಗೂ ತಿಳಿದುಬಂದಿಲ್ಲ ಎನ್ನುತ್ತಾರೆ ವಿದ್ವಾಂಸರು. ಆದರೂ ಜನಾಂಗದ ಹಿರಿಯರ ಅಭಿಪ್ರಾಯದಂತೆ, ಈ ಹಕ್ಕಿಪಿಕ್ಕಿ ಜನಾಂಗದವರು ಅಲೆಮಾರಿಗಳಾಗಿದ್ದು ಕಾಡುಗಳಲ್ಲಿ ಕಾಡುಗಳ ಬಳಿ ಸಂಚರಿಸುತ್ತಿದ್ದರಿಂದ ಇವರು ಒಟ್ಟಿಗೆ ಒಗ್ಗಟ್ಟಾಗಿಯೇ ಓಡಾಡುತ್ತಿದ್ದರು. ಇದರಿಂದಾಗಿ ಇವರಿಗೆ ರಕ್ಷಣೆ ದೊರಕುತ್ತದೆ ಎಂಬ ಭಾವನೆಯು ಇತ್ತು. ನಂತರ ಒಂದು ಕಡೆ ನೆಲೆಸಿದರೂ ಸಹ ಎಲ್ಲರೂ ಒಗ್ಗಟ್ಟಾಗಿಯೇ ನೆಲೆಸುತ್ತಿದ್ದರು. ಹೀಗಾಗಿ ನಾವು ಪ್ರಾರಂಭದಲ್ಲಿ ಇವರಲ್ಲಿ ಅವಿಭಕ್ತ ಕುಟುಂಬದ ವ್ಯವಸ್ಥೆಯನ್ನ ಗುರುತಿಸಬಹುದು. ಕ್ರಮೇಣ ಈ ಕುಟುಂಬಗಳು ಕಡಿಮೆಯಾಗಿ ವಿಭಕ್ತ ಕುಟುಂಬಗಳು ಅಂದರೆ ತಂದೆತಾಯಿ, ಗಂಡ ಹೆಂಡತಿ ಮಕ್ಕಳು ಒಟ್ಟಾಗಿ ಇರುವಂತಹ ಕುಟುಂಬ ವ್ಯವಸ್ಥೆಯು ಕಂಡುಬರುತ್ತಿದ್ದು ಇಂದಿಗೂ ಸಹ ಇದೇ ಪದ್ಧತಿಯನ್ನ ನಾವು ಕಾಣಬಹುದಾಗಿದೆ.

ಆರ್ಥಿಕ ಜೀವನ

ಇನ್ನು ಇವರ ಆರ್ಥಿಕ ಜೀವನಕ್ಕೆ ಬಂದರೆ ಪ್ಲಾಸ್ಟಿಕ್‌ನ ಗೃಹ ಅಲಂಕಾರಿಕಾ ವಸ್ತುಗಳ ತಯಾರಿಕೆಯು, ಬಹುತೇಕ ಕರ್ನಾಟಕದ ಎಲ್ಲಾ ಸ್ಥಳಗಳ ಹಕ್ಕಿಪಿಕ್ಕಿ ಜನಾಂಗದವರ ಪ್ರಮುಖವಾದ ಮತ್ತು ಬಹುಮುಖ್ಯವಾದ ಆರ್ಥಿಕ ಬೆನ್ನೆಲುಬು ಎಂದರೂ ತಪ್ಪಾಗಲಾರದು. ಇದು ಇವರ ಜೀವನಾಧಾರದ ಮೂಲ ಕಸುಬು, ವೃತ್ತಿ ಎನ್ನಬಹುದಾಗಿದೆ. ಇದು ತದನಂತರದಲ್ಲಿ ಇವರಿಗೆ ಜೀವನ ನಡೆಸಲು ಇವರೇ ಕಂಡುಕೊಂಡ ಒಂದು ಉದ್ಯೋಗ ಕಸುಬೇ ಹೊರತು ಮೂಲದ್ದಾದ ವೃತ್ತಿ ಅಲ್ಲ. ಹಲವು ರೀತಿಯ ಗೃಹ ಅಲಂಕಾರಿಕಾ ಸಲಕರಣೆಗಳನ್ನ ತಮ್ಮ ಬುದ್ಧಿವಂತಿಕೆಯಿಂದ ಅಭಿವೃದ್ಧಿಪಡಿಸಿ ತಯಾರಿಸಿ, ಮಾರಾಟ ಮಾಡಿ ಬಂದ ಹಣದಿಂದ ಜೀವನ ನಡೆಸುತ್ತಿರುವುದನ್ನು ನಾವು ಇಂದು ಕಾಣಬಹುದಾಗಿದೆ. ಇವುಗಳನ್ನು ಮಾರಾಟ ಮಾಡಲು ಹೊರ ಊರುಗಳಿಗೆ, ಹೊರ ರಾಜ್ಯಗಳಿಗೂ ಸಹ ಇವರು ಹೋಗುತ್ತಾರೆ. ಹೆಣ್ಣು ಮಕ್ಕಳು ಮನೆಯಲ್ಲಿ ಇದ್ದು ತಯಾರಿಸಿ ಕೊಟ್ಟರೆ ಇವರು ಸುತ್ತಾಡಿ ಅವುಗಳನ್ನ ಮಾರಾಟ ಮಾಡುತ್ತಾರೆ, ಹಕ್ಕಿಪಿಕ್ಕಿ ಪುರುಷರು. ಇವರ ವೃತ್ತಿ ಕುರಿತಂತೆ ಒಬ್ಬ ಯುವಕ ಹೀಗೇ ಅನ್ನುತ್ತಾನೆ.

ಕಾಡುಪ್ರಾಣಿಗಳ ಪ್ರತಿರೂಪಗಳನ್ನ ತಯಾರು ಮಾಡುವುದು ಸಹ ಇವರ ಉಪಕಸುಬು ಆಗಿದೆ. ಆದರೆ ಹಲವು ಕಾರಣಗಳಿಂದಾಗಿ ದಿನೇದಿನೇ ಈ ವೃತ್ತಿಯು ನಶಿಸಿಹೋಗುತ್ತಿದೆ ಎನ್ನುತ್ತಾರೆ. ಆದರೂ ಸಹ ತಮ್ಮ ಬುದ್ಧಿವಂತಿಕೆಯಿಂದ ಹಲವು ರೀತಿಯ ಹೊಸ ಹೊಸ ಕಚ್ಚಾಪದಾರ್ಥಗಳನ್ನು ಬಳಸಿ ಸ್ಥಳೀಯವಾಗಿಯೇ ಹೊಸ ಹೊಸ ಸಲಕರಣೆಗಳನ್ನ ಅಭಿವೃದ್ಧಿಪಡಿಸಿ ಮಾರಾಟ ಮಾಡುತ್ತಿದ್ದಾರೆ. ಅವುಗಳ ಬಳಕೆಯನ್ನು ಕುರಿತಂತೆ ಅವರ ವಾದವೇ ಬೇರೆತೆರನಾದುದು. ಜನಾಕರ್ಷಣೆ ಇದ್ದರೆ ಇಂತಹ ವಸ್ತುಗಳ ಮಾರಾಟವು ಬಹು ಸುಲಭ ಎನ್ನುತ್ತಾರೆ. ಇಂತಹ ಹೊಸ ಕುಲಕಸುಬುಗಳನ್ನ ಹಕ್ಕಿಪಿಕ್ಕಿಯವರು ದಿನೇದಿನೇ ಅಭಿವೃದ್ಧಿ ಪಡಿಸಿಕೊಳ್ಳುತ್ತಿರುವುದನ್ನ ನಾವಿಂದು ಕಾಣಬಹುದಾಗಿದೆ.

ಇತ್ತೀಚೆಗೆ ಇವರು ತೋಟಗಾರಿಕೆಯನ್ನು ಅಳವಡಿಸಿಕೊಂಡಿರುವುದನ್ನ ಸಹ ನಾವು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ಸಂಪೂರ್ಣ ಸಹಕಾರ, ಸಲಹೆ, ಆರ್ಥಿಕ ಸೌಲಭ್ಯವನ್ನು ಸರ್ಕಾರವು, ಇಲಾಖೆಯ ದಕ್ಷ ಅಧಿಕಾರಿಗಳ ಮುಖೇನ ಇವರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿರುವುದನ್ನು ನಾವು ಈ ಬೆಳೆಗಳಲ್ಲಿ ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ಈ ಫಲಾನುಭವಿಯ ಅಭಿಪ್ರಾಯವನ್ನೇ ಕೇಳಿ.

ಕುರಿ ಸಾಕಾಣಿಕೆಯನ್ನು ಸಹ ಪ್ರಾರಂಭಿಸಿದ್ದು ಕೋಳಿ ಸಾಕಾಣಿಕೆಯ ಜೊತೆಯಲ್ಲಿ. ಪಶು ಸಂಗೋಪನೆಯನ್ನು ಸಹ ಇತ್ತೀಚಿನ ದಿನಗಳಲ್ಲಿ ರೂಢಿಸಿಕೊಂಡಿರುವುದನ್ನ ನಾವಿಂದು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿಯು ಸಹ ಸರ್ಕಾರದ ಸಾಲಸೌಲಭ್ಯವಿದೆ ಎನ್ನುತ್ತಾರೆ ಈ ಹಕ್ಕಿಪಿಕ್ಕಿ ಜನರು.

ಉಡುಪು

ಇವರನ್ನ ನೋಡಿದರೆ ತಿಳಿಯುತ್ತದೆ ಇವರ ಉಡುಪಿನ ಬಗ್ಗೆ. ಈ ಜನರೆ ಹೇಳುವಂತೆ ಊಟಕ್ಕಿಲ್ಲ ಇನ್ನು ಬಟ್ಟೆಗೆ ಎಲ್ಲಿಯದು. ಪುಟಕೋಸಿ, ತಲೆಗೆ ಒಂದು ತುಂಡು ಟವಲ್, ಕತ್ತಿನಲ್ಲಿ ತಾವೆ ತಯಾರಿಸಿಕೊಂಡ ಮಣಿಸರ, ಬಗಲಲ್ಲಿ ಬೇಟೆಯ ಸಾಧನಾ ಸಲಕರಣೆಗಳು – ಇವಿಷ್ಟೆ ಹಕ್ಕಿಪಿಕ್ಕಿ ಜನರ ಪುರುಷರ ಉಡುಪು.

ಬಹುತೇಕ ಹಕ್ಕಿಪಿಕ್ಕಿ ಜನಾಂಗದ ಎಲ್ಲಾ ಮಹಿಳೆಯರಲ್ಲೂ ಸಹ ಲಂಗ ದಾವಣಿ ಬಳಸುವಿಕೆಯನ್ನ ನಾವು ಕಾಣಬಹುದು. ಲಂಗ ಉಟ್ಟಿದ್ದು ಮೇಲೊಂದು ತುಂಡು ಬಟ್ಟೆಯನ್ನು ದಾವಣಿಯಂತೆ ಸುತ್ತಿಕೊಳ್ಳುತ್ತಾರೆ. ಇತ್ತೀಚೆಗೆ ಕೆಲವು ಮಹಿಳೆಯರು ಸೀರೆ ಉಡುವುದನ್ನ ರೂಢಿಮಾಡಿಕೊಂಡಿದ್ದಾರೆ. ಆದರೂ ಸಹ ವಿಚಿತ್ರವಾಗಿ ಸೀರೆ ಉಡುವುದಲ್ಲದೇ ಇತ್ತೀಚಿನ ನಾಗರೀಕತೆಯ ಸೆಳೆತದಿಂದ ವಿವಿಧ ರೀತಿಯ ಮೇಲ್‌ತೊಡುಗೆಗಳನ್ನ ಬಳಸುವುದನ್ನ ರೂಢಿ ಮಾಡಿಕೊಂಡಿದ್ದಾರೆ. ತಲೆ ಬಾಚಿಕೊಂಡಿದ್ದು ತಲಿಗೆ ಹಲವು ರೀತಿಯ ಗರಿಗಳನ್ನ ಸಿಕ್ಕಿಸಿಕೊಂಡು ಕೊರಳತುಂಬ ಮಣಿಸರಗಳನ್ನು ತರಿಸಿ ಇತರೇ ಮಹಿಳೆಯರಿಗಿಂತಲೂ ಸಂಪೂರ್ಣವಾಗಿ ಭಿನ್ನರಾಗಿಯೇ ಕಂಡುಬರುತ್ತಾರೆ. ಒಟ್ಟಾರೆ ಲಂಗ ದಾವಣಿಯ ಬಳಕೆಯು ಬಹುತೇಕ ಕಡಿಮೆಯಾಗುತ್ತಿದ್ದು ಕಡಿಮೆ ದರದ ಇತ್ತೀಚಿನ ಉಡುಪುಗಳ ಬಳಕೆ ಇವರಲ್ಲಿ ಬಳಕೆಯಾಗುತ್ತಿದೆ. ಇದಕ್ಕೆ ಅವರು ನೀಡುವ ಕಾರಣಗಳೇ ಬೇರೆ.

ಸಾಮಾಜಿಕ ಕಟ್ಟಳೆ

ಇನ್ನು ಇತರ ಸಾಮಾಜಿಕ ಕಟ್ಟಳೆಗೆ ಬಂದರೇ, ಇಂದಿಗೂ ಸಹ ಹಕ್ಕಿಪಿಕ್ಕಿ ಜನಾಂಗದವರು ಅನಾದಿ ಕಾಲದಿಂದಲೂ ತಮ್ಮ ಹಳೆಯ ಪದ್ಧತಿಗಳನ್ನೇ ಮರೆಮಾಚದಂತೆ ಚಾಚೂ ತಪ್ಪದೇ ಅನುಸರಿಸಿಕೊಂಡು ಬಂದಿದ್ದಾರೆ. ಅದರಲ್ಲೂ ಮುಖ್ಯವಾಗಿ ವಿವಾಹಗಳ ನಿರ್ಧಾರ, ನಾಮಕರಣ ಇತ್ಯಾದಿ ಧಾರ್ಮಿಕ ಚಟುವಟಿಕೆಗಳ ನಿರ್ಧಾರ, ಆಚರಣೆ; ತಮ್ಮತಮ್ಮಲ್ಲಿನ ಜಗಳಗಳು, ಜೀವನಶೈಲಿಯ ರೀತಿನೀತಿಗಳನ್ನ ತಮ್ಮಷ್ಟಕ್ಕೆ ತಾವೇಎಲ್ಲರೂ ಸೇರಿ ಹಿರಿಯರ ಸಮ್ಮುಖದಲ್ಲಿ ನಿರ್ಧರಿಸಿ ತಮ್ಮ ಸಮಸ್ಯೆಗಳನ್ನ ತಾವೇ ವಿವರಿಸಿ ಅದಕ್ಕೆ ತಕ್ಕ ಪರಿಹಾರವನ್ನ ಕಂಡುಕೊಳ್ಳುತ್ತಿದ್ದಾರೆ. ಹಿರಿಯರು ನಿರ್ಧರಿಸಿ ಹೇಳುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದನ್ನ ನಾವು ಇಂದಿಗೂ ಕಾಣಬಹುದಾಗಿದೆ. ತೀರ್ಮಾನದ ಸಮಯದಲ್ಲಿ ತಮ್ಮ ಮನಸ್ಸಿನ ಭಾವನೆಗಳನ್ನ ಮನಬಿಚ್ಚಿ ಮಾತನಾಡುವುದು ಈ ಜನಾಂಗದ ವೈಶಿಷ್ಟ್ಯ ಎನ್ನಬಹುದಾಗಿದೆ. ಚರ್ಚೆಗಳು ನಡೆದ ನಂತರ ಜನಾಂಗದ ಹಿರಿಯರು, ಮುಖ್ಯಸ್ಥರು, ಹಣದ ರೂಪದಲ್ಲಿ ತಪ್ಪಿತಸ್ಥರಿಗೆ ದಂಡ ಹಾಕುತ್ತಾರೆ. ಆತ ಆ ದಂಡವನ್ನ ತೆರಬೇಕಾಗುತ್ತದೆ. ಆ ಹಣವನ್ನ ಮೂಲತಃ ಧಾರ್ಮಿಕ ಚಟುವಟಿಕೆಗಳಿಗೆ ಅಥವಾ ತಾಂಡದ ಅಭಿವೃದ್ಧಿಯ ಕೆಲಸಕ್ಕೆ ಬಳಸಲಾಗುತ್ತದೆ ಎನ್ನಲಾಗಿದೆ. ಹೀಗಾಗಿ ಇಂದಿಗೂ ಸಹ ಹಕ್ಕಿಪಿಕ್ಕಿ ಜನಾಂಗದವರು ತಮ್ಮ ಹಿರಿಯರಿಗೆ ಗೌರವ ನೀಡಿ ಅವರ ಹೇಳಿಕೆಗಳನ್ನ ಮನ್ನಿಸಿ ಗೌರವಿಸುತ್ತಾರೆ ಎನ್ನಬಹುದಾಗಿದೆ. ನಮ್ಮಿಂದ ಸಮಾಜ, ನಮಗಾಗಿ ನಮ್ಮ ಒಳಿತಿಗಾಗಿ ಸಮಾಜ, ಹಿರಿಯರೇ ಸಮಾಜದ ಆಧಾರಸ್ತಂಭಗಳು ಎಂಬ ನಾಣ್ಣುಡಿಗೆ ಇಂದಿಗೂ ಬದ್ಧವಾಗಿರುವುದನ್ನ ನಾವು ಎಲ್ಲಾ ಹಕ್ಕಿಪಿಕ್ಕಿ ತಾಂಡಗಳಲ್ಲೂ ಕಾಣಬಹುದಾಗಿದೆ.

ಭಾಷೆ-ಲಿಪಿ

ಹೇಳಿ ಕೇಳಿ ಹಕ್ಕಿಪಿಕ್ಕಿ ಜನಾಂಗದವರು ವಲಸೆ ಬಂದವರು. ಈ ನಾಡಿನವರಲ್ಲ. ಹೀಗಾಗಿ ಅವರ ಭಾಷೆಯು ಸಹ ಈ ನಾಡಿನದಲ್ಲ. ಈ ಜನಾಂಗದವರು ಮನೆಗಳಲ್ಲಿ ತಮ್ಮತಮ್ಮಲ್ಲಿ ತಮ್ಮವರೊಂದಿಗೆ ಮಾತನಾಡಲು ಬಳಸುವ ಭಾಷೆ ವ್ಯಾಘ್ರ ಭಾಷೆ. ಈ ಭಾಷೆಯು ಅವರಿಗೆ ಹೇಗೆ ಬಂತು, ಯಾರಿಂದ ಬಂತು, ಅದಕ್ಕೆ ಅವರು ಕರೆಯುತ್ತಿರುವ ಈ ಹೆಸರು ಸಮಂಜವಾಗಿದೆಯೇ ಎಂಬುದು ಸಹ ಅವರಿಗೆ ತಿಳಿದಿಲ್ಲ. ಇದಕ್ಕಿಂತಲೂ ಮುಖ್ಯ ಈ ಭಾಷೆಗೆ ಲಿಪಿಯಿಲ್ಲ.

ಮನೆಯಲ್ಲಿ ಮಾತನಾಡುತ್ತಿದ್ದ ಭಾಷೆಯನ್ನ ಅವರ ಹಿರಿಯರಿಂದ ಕಲಿತು ಹಾಗೆಯೇ ಮುಂದುವರಿಸಿ ಕೊಂಡು ಬಂದಿದ್ದಾರೆಯೇ ಹೊರತು, ಈ ಭಾಷೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಮಾಹಿತಿಯಾಗಲೀ, ದಾಖಲಾತಿಗಳಾಗಲೀ ಇಲ್ಲ. ಇಂದಿಗೂ ಸಹ ಧಾರ್ಮಿಕ ಚಟುವಟಿಕೆಗಳಲ್ಲಿ, ನ್ಯಾಯ ಪಂಚಾಯ್ತಿಗಳಲ್ಲಿ ಕಷ್ಟಸುಖಗಳಲ್ಲಿ ಬಹುತೇಕ ಬಳಸುವುದು ಈ ಭಾಷೆಯನ್ನೆ. ಈ ಭಾಷೆಯು ಇವರಿಗೆ ಮಾತನಾಡಲು ಸ್ಫೂರ್ತಿಯನ್ನು ತರುತ್ತದೆಯಂತೆ. ಇದರ ಹೊರತಾಗಿ ಬೇರೆ ಭಾಷೆಯಲ್ಲಿ ಮಾತನಾಡತೊಡಗಿದರೆ ಮಾತನಾಡುವುದೇ ಕಷ್ಟಕರವಾಗುತ್ತದೆ ಎನ್ನುತ್ತಾರೆ. ಹೀಗಾಗಿ ಕನ್ನಡ, ತೆಲುಗು, ಹಿಂದಿ ಭಾಷೆಯನ್ನು ಕಲಿತಿದ್ದರು, ತಮ್ಮತಮ್ಮಲ್ಲಿ ಮಾತ್ರ ತಮ್ಮದೆಯಾದ ಮಾತೃಭಾಷೆ ವ್ಯಾಘ್ರವನ್ನ ಬಹುತೇಕ ಎಲ್ಲಾ ಹಕ್ಕಿಪಿಕ್ಕಿ ಜನಾಂಗದವರು ಬಳಸುತ್ತಾರೆ, ಬಳಸುತ್ತಿದ್ದಾರೆ ಎನ್ನಬಹುದು.

ಶಿಕ್ಷಣ

ಶಿಕ್ಷಣಕ್ಕೆ ಬಂದರೆ ಪ್ರಾರಂಭದಲ್ಲಿ ಇವರು ಮಕ್ಕಳನ್ನು ಶಾಲೆಗೆ ಸೇರಿಸಿದರೂ ಸಹ ಬಹಳ ಕಾಲದವರೆಗೆ ಮಕ್ಕಳು ಶಾಲೆಯಲ್ಲಿ ಉಳಿಯುತ್ತಿರಲಿಲ್ಲ. ಶಾಲೆ ಬಿಟ್ಟು ತಾಂಡಗಳಲ್ಲಿ ವ್ಯರ್ಥ ಕಾಲಕಳೆಯುತ್ತಿದ್ದರಂತೆ. ಮುಂದೆ ಸರ್ಕಾರವು ಆಶ್ರಮ. ಶಾಲೆಗಳನ್ನ, ವಿದ್ಯಾರ್ಥಿ ವೇತನಗಳನ್ನ ಉಚಿತ ಪುಸ್ತಕ ಮತ್ತು ಸಮವಸ್ತ್ರಗಳನ್ನ ಹಂಚಲು ಪ್ರಾರಂಭಿಸಿದ್ದರಿಂದ ಇವರು ಸಹ ತಮ್ಮ ಮಕ್ಕಳನ್ನ ನಿಯಮಿತವಾಗಿ ಶಾಲೆಗೆ ಕಳುಹಿಸಲು ಪ್ರಾರಂಭಿಸಿದರು. ತದನಂತರ ಆಧುನಿಕ ನಾಗರೀಕತೆಯ ಪ್ರಭಾವ ಮತ್ತು ಶಿಕ್ಷಣದ ಮಹತ್ವವನ್ನ ಅರಿತ ಈ ಜನರು ತಮ್ಮ ಮಕ್ಕಳನ್ನ ಇಂದು ಪ್ರೌಢಶಾಲೆ, ವಿಶ್ವವಿದ್ಯಾನಿಲಯಗಳ ಮಟ್ಟಕ್ಕೂ ಕಳುಹಿಸುತ್ತಿರುವುದು ಎಲ್ಲಾ ಹಕ್ಕಿಪಿಕ್ಕಿ ತಾಂಡಗಳಲ್ಲೂ ಕಂಡುಬರುತ್ತಿದೆ. ಅಷ್ಟೆ ಏಕೆ ಇಂದು ಈ ಜನರ ಮಕ್ಕಳು ಪದವೀಧರರಾಗಿ ನೌಕರಿಯತ್ತ ಸಾಗಿರುವುದನ್ನ ನಾವು ಗುರುತಿಸಬಹುದಾಗಿದೆ.

ಧಾರ್ಮಿಕ ಚಟುವಟಿಕೆಗಳು

ವಿವಾಹವು ಹಕ್ಕಿಪಿಕ್ಕಿ ಜನಾಂಗದವರಲ್ಲಿ ಕಂಡುಬರುವ ಪ್ರಮುಖ ಸಂಸ್ಕಾರವಾಗಿದೆ. ಹಕ್ಕಿಪಿಕ್ಕಿ ಜನಾಂಗದವರ ವಿವಾಹಗಳಲ್ಲಿ ಗಂಡಿನ ಮನೆಯವರಿಗೆ ಹೆಚ್ಚು ಖರ್ಚು. ವಿವಾಹಗಳು ಪೂರ್ವದಲ್ಲಿ ೩-೪ ದಿನಗಳು ನಡೆಯುತ್ತಿದ್ದು ಪ್ರಸ್ತುತ ೨ ದಿನಕ್ಕೆ ಸೀಮಿತವಾಗಿದೆಯಂತೆ. ವಧುದಕ್ಷಿಣೆ ಅಂದರೆ ತೆರೆ ಕೊಡುವ ಪದ್ಧತಿಯು ಇವರಲ್ಲಿ ಬಳಕೆಯಲ್ಲಿದ್ದು ಇಂದಿಗೂ ಸಹ ಅನುಸರಿಸಿಕೊಂಡು ಬಂದಿದ್ದಾರೆ. ಇವರಲ್ಲಿ ಹೆಣ್ಣು ಮಕ್ಕಳು ಹುಟ್ಟಿದರೆ ಬಹು ಸಂತೋಷ ಪಡುತ್ತಾರೆ. ಏಕೆಂದರೆ ವಧುದಕ್ಷಿಣೆ ದೊರೆಯುವುದು ಅಲ್ಲದೇ ಮದುವೆಯ ಬಹುತೇಕ ಖರ್ಚನ್ನ ಗಂಡಿನ ಕಡೆಯವರೇ ವಹಿಸಬೇಕಾಗುತ್ತದೆ. ಇದಲ್ಲದೇ ಪ್ರತಿವರ್ಷ ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ಒಂದು ದಿನದ ಮಾಂಸ ಆಹಾರಕ್ಕೆ ಬೇಕಾದ ಎಲ್ಲಾ ರೀತಿಯ ಸರಂಜಾಮಗಳನ್ನ ನೀಡಲೇಬೇಕೆಂಬ ಸಂಪ್ರದಾಯವಿದ್ದು ಇಂದಿಗೂ ಸಹ ಈ ಪದ್ಧತಿಯನ್ನ ರೂಢಿಸಿಕೊಂಡೇ ಬಂದಿದ್ದಾರೆ.

ಮದುವೆಯ ಮೊದಲನೆಯ ದಿನ ವರನ ಮನೆಯ ಮುಂದೆ ಚಪ್ಪರ ಹಾಕಿ ಹೆಣ್ಣು ಮತ್ತು ಗಂಡನ್ನ ಸಿಂಗರಿಸಿ ಸಾಂಪ್ರದಾಯಿಕ ಹಾಡುಗಳೊಂದಿಗೆ ಸತ್ಕರಿಸುತ್ತಾರೆ. ಈ ಹಾಡಿನಲ್ಲಿ ಪ್ರಕೃತಿಯನ್ನ ವರ್ಣಿಸುವುದು, ದೇವರು ನಮಗೆ ಮತ್ತು ನಮ್ಮ ಜನರಿಗೆ ಯಾವ ರೀತಿ ಸುಖಸಂತೋಷಗಳನ್ನ ನೀಡಿದ್ದಾನೋ ಅದೇ ರೀತಿಯಾಗಿ ಈ ನವ ವಧು ವರರಿಗೂ ಸಹ ಎಲ್ಲಾ ರೀತಿಯ ಸೌಲಭ್ಯಗಳನ್ನ ನೀಡುವದರೊಂದಿಗೆ ಅವರನ್ನ ಸುಖಕರವಾಗಿಡಲೀ ಎಂದು ಹಾರೈಸು ಎನ್ನುವ ಬೇಡಿಕೆಯನ್ನ ಈ ಹಾಡಿನಲ್ಲಿ ಇಟ್ಟಿರುತ್ತಾರೆ. ಹಾಡುತ್ತಾ ಹಾರ ಬದಲಾಯಿಸುವುದರೊಂದಿಗೆ ವಧುವರರ ಮೇಲೆ ಶುಭ ಅಕ್ಷತೆಕಾಳುಗಳನ್ನ ಹಾಕುವುದರೊಂದಿಗೆ ವರನ ಮನೆಯ ಕಾರ್ಯಕ್ರಮಗಳನ್ನು ಮುಗಿಸಿ ಸಂತೋಷದಿಂದ ಹಾಡುತ್ತಾ ವರನನ್ನ ಮತ್ತು ವಧುವನ್ನ ವಧುವಿನ ಮನೆಯ ಕಡೆಗೆ ಕರೆದುಕೊಂಡು ಬರುತ್ತಾರೆ.

ಸಾಮಾನ್ಯವಾಗಿ ಇಂದಿಗೂ ಸಹ ತಮ್ಮ ಒಳಪಂಗಡಗಳೊಂದಿಗೆ ವೈವಾಹಿಕ ಸಂಬಂಧಗಳನ್ನ ಏರ್ಪಡಿಸಿಕೊಳ್ಳುತ್ತಾರೆ. ಅವರು ಬಹುತೇಕ ಒಂದೇ ಸ್ಥಳದಲ್ಲಿ ವಾಸಿಸುವುದರಿಂದ ವಧುವಿನ ಮತ್ತು ವರನ ಮನೆಗಳು ಒಂದೇ ಕಡೆಯೇ ಇರುತ್ತವೆ. ಹೀಗಾಗಿ ಸಂಭ್ರಮದೊಡನೆ ವಧು ಮತ್ತು ವರನನ್ನ ವಧುವಿನ ಮನೆಗೆ ಕರೆತರಲಾಗುತ್ತದೆ.

ಈ ವೇಳೆಗಾಗಲೇ ವಧುವಿನ ಮುಂದೆ ಚಪ್ಪರ ಮತ್ತು ಪೂಜಾ ಸಾಮಗ್ರಿಗಳೊಡನೇ ಕಾಯಕ್ರಮ ಪ್ರಾರಂಭವಾಗಿರುತ್ತದೆ. ವಧುವಿನ ತಂದೆ ವರನ ತಂದೆಯೇ ಮದುವೆಯ ಮುಖ್ಯಸ್ಥರು. ಇಲ್ಲಿ ಯಾವುದೇ ಯಾರದೇ ಪೌರೋಹಿತ್ಯ ಇಲ್ಲ. ಮಂತ್ರಘೋಷಗಳಿರುವುದಿಲ್ಲ, ವಾದ್ಯಸಲಕರಣೆಗಳು ಇರುವುದಿಲ್ಲ. ಒಂದು ಮನೆಯ ಕಾರ್ಯಕ್ರಮದಂತೆ ತಮ್ಮ ತಮ್ಮಲ್ಲಿಯೇ ವಿವಾಹದ ಕಾರ್ಯಕ್ರಮವನ್ನ ಮಾಡಿಕೊಳ್ಳುತ್ತಾರೆ. ನೆರೆದಿರುವ ತಮ್ಮ ಕೌಟುಂಬಿಕ ಹಿರಿಯರ ಮುಂದೆ ದೇವರ ಎಡೆಯೆಂದು ಮಾಡಿದ ಸಿಹಿ ಅನ್ನವನ್ನ ತಮ್ಮ ಎಲ್ಲಾ ದೇವತೆಗಳ ಹೆಸರಲ್ಲಿ ಒಂದೊಂದು ಹಿಡಿಯಷ್ಟು ಒಂದು ಬಟ್ಟಲಿಗೆ ಹಾಕಿ ಶೇಖರಿಸುತ್ತಾರೆ. ಅದು ಸಾಮಾನ್ಯವಾಗಿ ೯ ಹಿಡಿಗಳಷ್ಟೆ ಇರಬೇಕು ಮತ್ತು ಆ ಅನ್ನಕ್ಕೆ ಬೆಲ್ಲ, ಕೊಬ್ಬರಿ, ಹೆಸರುಬೇಳೆಯನ್ನು ಮಾತ್ರ ಬೆರಸಬೇಕೆ ಹೊರತು ಮತ್ತೆ ಯಾವುದೇ ಪದಾರ್ಥಗಳನ್ನ ಬಳಸುವಂತಿಲ್ಲ. ಇದಕ್ಕೂ ಮುಖ್ಯವಾಗಿ ಇವರು ತಮ್ಮ ಯಾವ ಧಾರ್ಮಿಕ ಚಟುವಟಿಕೆಗಳಲ್ಲೂ ತೆಂಗಿನಕಾಯಿ, ಬಾಳೆಹಣ್ಣುಗಳನ್ನ ಬಳಸುವುದೇ ಇಲ್ಲವಂತೆ.

ಊಟೋಪಚಾರಕ್ಕೆ ಬಳಸುವುದೇ ಹೊರತು ಪೂಜೆಗೆ ಅಲ್ಲ. ಪೂಜೆಗೆ ಬೇಕಾಗಿರುವುದು ಎಲೆ ಅಡಿಕೆ, ಕಡ್ಡಿ ಕರ್ಪೂರ, ಅರಿಶಿನ ಕುಂಕುಮ ಮತ್ತು ವಿವಾಹವಾದರೇ ಹಾರಗಳು, ಧಾರ್ಮಿಕ ಚಟುವಟಿಕೆಯಾದರೆ ಬಿಡಿ ಹೂಗಳು.

ವಧುವರರು ಬಂದು ಕುಳಿತ ನಂತರ ವಧುವಿನ ಅಪ್ಪ ಪೂಜಾ ಕಾರ್ಯಕ್ರಮವನ್ನ ಪ್ರಾರಂಭಿಸುತ್ತಾರೆ. ತಮ್ಮ ಆರಾಧ್ಯದೈವಗಳಿರುವ ಪೆಟ್ಟಿಗೆಯನ್ನ ಮೊದಲು ಪೂಜಿಸುತ್ತಾನೆ. ದೇವತೆಗಳನ್ನು ಆಹ್ವಾನಿಸುತ್ತಾನೆ. ಕಾರ್ಯಕ್ರಮ ಸುಗಮವಾಗಿ ನಡೆಯಲಿ ಎಂದು ತಮ್ಮ ಭಾಷೆಯಲ್ಲಿಯೇ ದೇವತೆಗಳಲ್ಲಿ ಬೇಡಿಕೊಳ್ಳುತ್ತಾನೆ. ಅನಂತರ ಕಲಸಿದ ಅರಿಸಿನ ಕುಂಕುಮಗಳನ್ನ ತನ್ನ ಎರಡು ಕೈಗಳ ಹೆಬ್ಬೆರಳಿಗೆ ಅಂಟಿಸಿಕೊಂಡು ದೇವತಾಮೂರ್ತಿಗಳಿರುವ ಪೆಟ್ಟಿಗೆಗೆ ಹಚ್ಚುತ್ತಾನೆ. ನಂತರ ಅದೇ ಅರಿಶಿನ ಕುಂಕುಮಗಳನ್ನ ತೆಗೆದುಕೊಂಡು ತದ್ವಿರುದ್ಧವಾಗಿ ಎರಡು ಹೆಬ್ಬೆರಳುಗಳನ್ನ ಗಂಡು ಮತ್ತು ಹೆಣ್ಣಿನ ಹಣೆಗಳಿಗೆ ಇಡುತ್ತಾನೆ. ಇದಾದನಂತರ ದೇವರನ್ನು ಆರಾಧಿಸಲು ನೈವೇದ್ಯದಂತೆ ಇಟ್ಟಿರುವ ಸಿಹಿ ಅನ್ನವನ್ನ ಒಂದೊಂದು ಮುದ್ದೆಯಂತೆ ತೆಗೆದುಕೊಂಡು ಅದಕ್ಕೆ ಮದ್ಯಪಾನದ ಪ್ಯಾಕೆಟನ್ನು ಸೇರಿಸಿ ಜನಾಂಗದ ಹಿರಿಯರಿಗೆ ಕೊಡುತ್ತಾ ಬರುತ್ತಾರೆ. ಅವರು ಅದನ್ನು ತೆಗೆದುಕೊಂಡು ಮತ್ತೆ ದೇವರಿಗೆ ಹಿರಿಯರಿಗೆ ನೈವೇದ್ಯದಂತೆ ಅರ್ಪಿಸಿ ಅದನ್ನ ಬಳಸತೊಡಗುತ್ತಾರೆ. ಈ ಮಧ್ಯೆ ಗಂಡುಹೆಣ್ಣಿಗೆ ತಾಳಿಕಟ್ಟುವುದರೊಂದಿಗೆ ವಿವಾಹ ಕಾರ್ಯ ಮುಗಿಯುತ್ತದೆ. ಈ ಊಟದ ಹಂಚಿಕೆ, ಮದ್ಯಪಾನ ಹಂಚಿಕೆ ಬಹಳ ಭರಾಟೆಯಿಂದ ನಡೆಯುತ್ತದೆ. ಈ ನೈವೇದ್ಯದ ಒಂದು ಅಗಳು ಅನ್ನಕ್ಕಾಗಿ ಒಂದು ಗುಟುಕು ಮದ್ಯಪಾನಕ್ಕಾಗಿ ಜಗಳಗಳೇ ನಡೆದುಹೋಗುತ್ತವೆಯಂತೆ. ಹೀಗೆ ವಿವಾಹವು ಇವರ ಧಾರ್ಮಿಕ ಸಂಸ್ಕಾರಗಳ ಒಂದು ಮಹತ್ವದ ಸ್ಥಾನವನ್ನು ಇಂದಿಗೂ ಪಡೆದಿರುವುದನ್ನು ನಾವು ಎಲ್ಲಾ ಹಕ್ಕಿಪಿಕ್ಕಿಗಳಲ್ಲಿ ನಾವು ಕಾಣಬಹುದಾಗಿದೆ.

ಇನ್ನು ಎರಡನೆಯ ಸಂಸ್ಕಾರ : ನಾಮಕರಣ

ಹಕ್ಕಿಪಿಕ್ಕಿ ಜನಾಂಗದವರು ಚಾಚೂ ತಪ್ಪದಂತೆ ಸಂಪ್ರದಾಯಬದ್ಧವಾಗಿ ನಡೆಸಿಕೊಂಡು ಬರುತ್ತಿರುವ ಮತ್ತೊಂದು ಸಂಸ್ಕಾರ ಅಂದರೆ ನಾಮಕರಣ. ಅಂದರೆ ತಮ್ಮ ಮಕ್ಕಳಿಗೆ ಹೆಸರಿಡುವ ಕಾರ್ಯಕ್ರಮ. ಹೆರಿಗೆಯಾದ ನಾಲ್ಕು ದಿನಗಳಿಗೆ ಸೂತಕವನ್ನ ಕಳೆದುಕೊಳ್ಳುತ್ತಾರೆ. ಇವರ ಹೆರಿಗೆಯು ಸಹ ಇವರ ತಾಂಡದಿಂದ ಹೊರಗೆ ಆಗುತ್ತದೆ. ನಾಮಕರಣವಾಗುವವರೆಗೂ ಮಗು ಮತ್ತು ತಾಯಿ ಮನೆಯ ಹೊರಗೆ ಇರಬೇಕಾಗಿರುತ್ತದೆ. ನಾಮಕರಣದ ದಿವಸ ಸ್ನಾನ ಮಾಡಿಸಿ ಹೊಸಬಟ್ಟೆಗಳನ್ನು ತೊಡಿಸಿ ಜನಾಂಗದ ಹಿರಿಯ ಸ್ತ್ರೀಯರೆಲ್ಲರನ್ನೂ ಸೇರಿಸಿ ಈ ಕಾರ್ಯಕ್ರಮವನ್ನ ನಡೆಸಲಾಗುತ್ತದೆ. ಕಾರ್ಯಕ್ರಮದ ಮೊದಲ ಚಟುವಟಿಕೆ ಎಂದರೆ ಸಿಹಿ ಅನ್ನದ ತಯಾರಿಕೆ. ಕೊಬ್ಬರಿ ಹಾಕಿ ಬೇಯಿಸಿದ ಅನ್ನಕ್ಕೆ ಬೆಲ್ಲವನ್ನ ಪುಡಿಮಾಡಿ ಸೇರಿಸಲಾಗುತ್ತದೆ. ಇದು ಅವರ ಕಾರ್ಯಕ್ರಮಗಳ ಶುಭಸೂಚಕ. ಯಾವುದೇ ಕಾರ್ಯಕ್ರಮವಾಗಲೀ ಸಿಹಿ ಅನ್ನ ಇರಲೇಬೇಕು. ಅದು ನೈವೇದ್ಯವಾದನಂತರವೇ ಉಳಿದಿದ್ದು. ನಂತರ ನೆರೆದ ಮಹಿಳೆಯರೆಲ್ಲರೂ ಅಕ್ಕಿಕಾಳುಗಳನ್ನು ತೆಗೆದುಕೊಳ್ಳುತ್ತಾರೆ. ಎಲ್ಲರೂ ಒಟ್ಟಾಗಿ ಆ ಅಕ್ಷತೆಯನ್ನು ಒಟ್ಟಿಗೆ ಸೇರಿ ಕಳಸದ ಮೇಲೆ ಎರೆಯುತ್ತಾರೆ. ಇದಾದ ನಂತರ ಬಾಣಂತಿಯ ಪುರುಷನು ಶಾಸ್ತ್ರೋಕ್ತವಾಗಿ ಬಂದು ಆಕೆಯ ತಲೆಯ ಕೆಲವೊಂದು ಕೂದಲುಗಳನ್ನು ಹಿಡಿದು ನೀರಿನಿಂದ ತೊಳೆಯುತ್ತಾನೆ. ಇದು ಆಕೆ ಹೆರಿಗೆಯ ಸೂತಕದಿಂದ ಮುಕ್ತಳಾದಳು ಎಂಬ ಅರ್ಥವನ್ನ ನೀಡುತ್ತದೆ ಎಂಬುದು ಇವರ ವಾಡಿಕೆ.

ಈ ಎಲ್ಲಾ ಕಾರ್ಯಕ್ರಮಗಳು ಆದನಂತರ ನೆರೆದಿರುವರಿಗೆಲ್ಲಾ ಸಿಹಿ, ಮದ್ಯಪಾನವನ್ನ ಹಂಚಲಾಗುತ್ತದೆ. ಇದೇ ಪದ್ಧತಿಯು ಅನಾದಿಕಾಲದಿಂದಲೂ ನಡೆದುಬಂದಿದ್ದು ಈಗಲೂ ಸಹ ಇದೇ ರೀತಿಯಾಗಿ ಮುಂದುವರಿಸಿಕೊಂಡೆ ಹೋಗಲಾಗುತ್ತಿದೆ ಎಂಬುದು ಇವರ ಸಮರ್ಥನೆಯಾಗಿದೆ.

ಈ ಹಕ್ಕಿಪಿಕ್ಕಿ ಜನಾಂಗದವರು ಸರ್ಕಾರದ ಸೌಲಭ್ಯವನ್ನು ಪಡೆಯುವುದರಲ್ಲೂ ಮುಂಚೂಣಿಯಲ್ಲಿದ್ದು ಇತ್ತೀಚಿನ ದಿನಗಳಲ್ಲಿ ಸಾಮಾಜಿಕವಾಗಿ ಸಾಂಘಿಕವಾಗಿ ಇವರು ಸಂಘಟಿತರಾಗುತ್ತಿದ್ದಾರೆ. ಎಂಬುದಕ್ಕೆ ಇವರು ಸ್ಥಾಪಿಸಿಕೊಂಡಿರುವ ಸಾರ್ವಜನಿಕ ಸಂಘಸಂಸ್ಥೆಗಳೇ ಸಾಕ್ಷಿಗಳಾಗುತ್ತವೆ. ಇವರು ತಮ್ಮ ಜನಾಂಗದ ಹಿರಿಯರನ್ನ, ಕಿರಿಯರನ್ನ ಸ್ತ್ರೀಯರನ್ನ ಸೇರಿಸಿಕೊಂಡು ತಮ್ಮದೆ ಆದ ಸಂಘಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಜನಾಂಗದ ಹಿರಿಯರು ಸೇರಿ ತಮ್ಮ ಸಮಸ್ಯೆಗಳನ್ನ ನಾಸ್ತಿಕ ತೊಂದರೆಗಳನ್ನ ತಮ್ಮಲ್ಲಿ ಚರ್ಚಿಸಿಕೊಂಡು ಸತತವಾಗಿ ಸರ್ಕಾರದೊಂದಿಗೆ ಸಂಪರ್ಕವನ್ನ ಇಟ್ಟುಕೊಂಡು ತಮ್ಮ ಸಂಘಸಂಸ್ಥೆಗಳ

ಮೂಲಕ ಹಲವು ಹತ್ತು ರೀತಿಯ ಸೌಲಭ್ಯಗಳನ್ನ ಈ ದಿನಗಳಲ್ಲಿ ಪಡೆಯುತ್ತಿರುವುದನ್ನ ಸಹ ನಾವು ಕಾಣಬಹುದಾಗಿದೆ.

ಇದು ಅಲ್ಲದೇ ಇಲಾಖೆಯು ಈ ಜನಾಂಗದವರಿಗೆ ವ್ಯವಸಾಯವನ್ನು ಕೈಗೊಳ್ಳಲು ಸರ್ಕಾರದ ಜಮೀನನ್ನು ಸಹ ಇತ್ತೀಚಿನ ದಿನಗಳಲ್ಲಿ ಹಂಚಿದೆ. ಈ ನಿಟ್ಟಿನಲ್ಲಿ ಈ ಜಮೀನುಗಳು ಬೇಸಾಯ ಕಾರ್ಯಕ್ರಮಗಳು ಪ್ರಾರಂಭವಾಗಿರುವುದನ್ನ ನಾವಿಲ್ಲಿ ನೋಡಬಹುದು.

ಸರ್ಕಾರದ ಸೌಲಭ್ಯಗಳನ್ನ ಮತ್ತು ಈ ಜನಾಂಗದವರ ಕೃಷಿ ಮತ್ತು ತೋಟಗಾರಿಕೆಯನ್ನ ಕಾಡುಪ್ರಾಣಿಗಳಿಂದ ಕಳ್ಳಕಾಕರಿಂದ ರಕ್ಷಿಸಲು ಇಲಾಖೆಯು ಸೋಲಾರ್ ಎಲೆಕ್ಟ್ರಿಕಲ್ ಫೆನ್ಸಿಂಗ್‌ಅನ್ನ ಒದಗಿಸಿಕೊಟ್ಟಿದೆ. ಇದರಿಂದಾಗಿ ಇವರ ಬೆಳೆಗಳು ಸಂಪೂರ್ಣವಾಗಿ ಇವರ ಕೈಗೆ ಸೇರಲು ಅನುಕೂಲಕರವಾಗಿರುವುದನ್ನ ನಾವು ಇವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕಾಣಬಹುದಾಗಿದೆ.

ಈ ರೀತಿಯ ವಿಶಿಷ್ಟವಾದ ಜೀವನ ಶೈಲಿಯನ್ನ ಅಳವಡಿಸಿಕೊಂಡಿರುವ ಈ ಜನಾಂಗದವರಿಗೆ ಇನ್ನೂ ಹಲವು ರೀತಿಯ ಸೌಲಭ್ಯಗಳನ್ನ ನೀಡಬೇಕು, ಅವುಗಳನ್ನ ಅವರು ಬಳಸಿಕೊಂಡು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಬೇಕು ಎಂದು ಸರ್ಕಾರದ ಪರಿಶಿಷ್ಟ ಕಲ್ಯಾಣ ನಿರ್ದೇಶನಾಲಯದ ಅಧಿಕಾರಿಗಳು ಸತತವಾಗಿ ಈ ಜನಾಂಗದವರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡು ತಾವೇ ಖುದ್ದು ಸ್ಥಳಗಳಿಗೆ ಭೇಟಿಕೊಟ್ಟು ಈ ಜನಾಂಗದವರು ಬಹುಬೇಗ ಮುಖ್ಯವಾಹಿನಿಗೆ ಸೇರಲು ಸಹಕಾರಿಯಾಗಿದ್ದಾರೆ. ಹೀಗಾಗಿ ನಾವು ಹಕ್ಕಿಪಿಕ್ಕಿ ಜನಾಂಗದವರು ಕಾಡಿನಿಂದ ನಾಡಿಗೆ, ತಾಂಡದಿಂದ ಬಡಾವಣೆಗೆ ಸೇರಲಿದ್ದಾರೆ ಎಂದು ಈ ಎಲ್ಲ ಸಾಕ್ಷಿ ಸಮೇತ ಕಾಣಬಹುದಾಗಿದೆ.

ಮಾನಸ, ೭ನೇ ಅಡ್ಡರಸ್ತೆ, ೩ ಬಿ ಮುಖ್ಯರಸ್ತೆ, ಸೋಮೇಶ್ವರನಗರ, ಬೆಂಗಳೂರು ೫೬೦ ೦೬೫

□

೧೦

ಜನಪದ ಚಿತ್ರಕಲೆ ಮತ್ತು ಜನಜೀವನ

ರಂಗಾರೆಡ್ಡಿ ಕೋಡಿರಾಂಪುರ

ಮನುಷ್ಯನ ಸೃಜನಾತ್ಮಕ ಕಲೆಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ ಚಿತ್ರಕಲೆ ಎಂಬುದರಲ್ಲಿ ಎರಡು ಮಾತಿಲ್ಲ. ಅಲೆಮಾರಿಯಾಗಿದ್ದ ಆದಿಮಾನವ ಆಹಾರ ಸಂಪಾದನೆಗಾಗಿ ಬೇಟೆಯಾಡುವ ಹಂತದಲ್ಲಿದ್ದಾಗ ಸಂತೋಷಕ್ಕೋ ಅಥವಾ ಗುರುತಿಗೋ ತಾನು ಕೊಂದ ಪ್ರಾಣಿಯ ಚಿತ್ರವನ್ನು ಬಂಡೆಗಳ ಮೇಲೆ ಬಿಡಿಸಿರುವುದನ್ನು ಸೃಜನಶೀಲತೆಯ ಪ್ರಥಮ ಕಲೆ ಎಂದು ಹೆಚ್ಚು ಕಡಿಮೆ ಎಲ್ಲಾ ವಿದ್ವಾಂಸರೂ ಒಪ್ಪಿದ್ದಾರೆ. ತಾನು ಕೊಂದ ಪ್ರಾಣಿಯ ಊಟದಿಂದ ಸಂತೃಪ್ತನಾದ ಆದಿಮಾನವ ಇಂಥ ಚಿತ್ರ ಬಿಡಿಸಿದಾಗಲೇ ಕುಣಿದಾಡಿರಬೇಕು. ಇದು ಮುಂದೆ ನೃತ್ಯವಾಗಿ ವಿಕಾಸವಾಗಿದೆ. ಬಾಯಿಂದ ಹೊರಬಿದ್ದ ಕೂಗು, ಕೇಕೆಗಳು ಮುಂದೆ ಮಾತು-ಸಂಗೀತವಾಗಿ ಬೆಳವಣಿಗೆಯಾಗಿದೆ. ಹೀಗಾಗಿ ಜನಪದ ನೃತ್ಯ, ಸಂಗೀತ ಹಾಗೂ ಚಿತ್ರಕಲೆ ಒಂದೇ ಸಮಯದಲ್ಲಿ ಅರಳಿ ಮುಂದೆ ಪ್ರತ್ಯೇಕ ಪ್ರಕಾರಗಳಾಗಿ ವಿಕಾಸಗೊಂಡಿವೆ ಎನ್ನಬಹುದು.

ಈ ಜನಪದ ಚಿತ್ರ, ನೃತ್ಯ, ಸಂಗೀತ ಕಲೆಗಳು ಪ್ರಾಣಿ-ಮಾನವರ ಒಡನಾಟದಲ್ಲಿ ಅನುಕರಣೆಗೆ ಇಂಬುಕೊಟ್ಟಿವೆ. ಆದಿಮಾನವ ಪ್ರಾಕೃತಿಕ ವಿಕೋಪಗಳಿಂದ ತಾತ್ಕಾಲಿಕವಾಗಿ ರಕ್ಷಣೆ ಪಡೆಯಲು ಬಳಸುತ್ತಿದ್ದ ಗುಹೆಗಳಲ್ಲಿ ಆ ಪ್ರಾಣಿಗಳ ರೂಪವನ್ನು ಅನುಕರಣೆ ಮಾಡಿ ಚಿತ್ರಬಿಡಿಸಿದ. ಹೊರಗಡೆ ಬಯಲಿನಲ್ಲಿ ಆ ಪ್ರಾಣಿಯ ನಡಿಗೆ ಓಟಗಳನ್ನು ಅನುಸರಿಸಿ ನೃತ್ಯ ಕಲಿತುಕೊಂಡ. ಅವುಗಳ ಕೂಗು, ಶಬ್ದಗಳನ್ನು ಅನುಸರಿಸಿ ಮಾತು-ಸಂಗೀತವನ್ನು ರೂಢಿಸಿಕೊಂಡ. ಪ್ರಕೃತಿ-ಪ್ರಾಣಿ-ಮನುಷ್ಯನ ಸಂಬಂಧ ಒಂದರಿಂದ ಇನ್ನೊಂದನ್ನು

ಪ್ರತ್ಯೇಕಿಸಲಾಗದ ಕಾಲಘಟ್ಟದಲ್ಲಿ ಈ ಮೂರು ಕಲೆಗಳೂ ಒಂದರೊಳಗೊಂದು ಅಂತರ್ಗತವಾದಂತಿದ್ದರೂ ಚಿತ್ರಮಾತ್ರ ಮೊದಲು ದಾಖಲಾದ ಕಲೆ ಎನ್ನಬಹುದು.

ಗುಹೆಗಳಲ್ಲಿ, ಬಂಡೆಗಳ ಮೇಲೆ ಇದ್ದಲಿನಿಂದಲೋ ಅಥವಾ ಗುರುತು ಮಾಡುವ ಯಾವುದಾದರೂ ವಸ್ತುವಿನ ಮೂಲಕ ರಚಿಸಿದ ಪ್ರಾಗೈತಿಹಾಸಿಕ ಕಾಲದ ಚಿತ್ರಗಳನ್ನು ಚಿತ್ರಕಲೆಯ ಅತ್ಯಂತ ಪ್ರಾಚೀನ ರೂಪ ಎಂದು ಗುರುತಿಸಬಹುದಾಗಿದೆ. ತನ್ನ ಆಹಾರ ಸಂಪಾದನೆ ಮತ್ತು ಆ ಪ್ರಾಣಿಯ ಬಗೆಗಿನ ಕುತೂಹಲದ ಭಾವನೆಯಿಂದ ಬಿಡಿಸಿದ ಆ ಚಿತ್ರಗಳು ಮುಂದೆ ಅತ್ಯಂತ ಸಂಕೀರ್ಣವಾದ ಚಿತ್ರಕಲಾ ಪ್ರಕಾರವೊಂದಕ್ಕೆ ನಾಂದಿಯಾಗುತ್ತವೆ ಎಂದು ಅವರೇನು ಭಾವಿಸಿರಲಿಲ್ಲ. ಅತ್ಯಂತ ಒರಟಾದ ಕಲ್ಲುಗಳ ಮೇಲೆ ತಮ್ಮ ಮನಸೋ ಇಚ್ಛೆ ಸೊಟ್ಟಸೊಟ್ಟಗೆ ಬಿಡಿಸಿದ ಚಿತ್ರಗಳಿಂದ ಆ ಪ್ರಾಣಿಗಳನ್ನು ಗುರುತಿಸುವ ಉದ್ದೇಶ ಮಾತ್ರ ಇತ್ತು. ಬುದ್ಧಿವಿಕಾಸವಾದ ಮೇಲೆ ಅದನ್ನು ಕಲೆಯನ್ನಾಗಿ ಮಾಡಿಕೊಂಡ ಮಾನವ ಅದನ್ನು ಸೌಂದರ್ಯೋಪಾಸನೆಯ ಸಾಧನವನ್ನಾಗಿ ಮಾಡಿಕೊಂಡ.

ಪ್ರಕೃತಿಯ ಬಗ್ಗೆ ಭಯ, ವಿಸ್ಮಯಗಳನ್ನು ಹೊಂದಿದ ಮಾನವ ಭದ್ರತೆಯ ದೃಷ್ಟಿಯಿಂದ ಅದನ್ನು ಆರಾಧಿಸಲು ಆರಂಭಿಸಿದ. ಈ ಆರಾಧನಾ ಮನೋಭಾವ ನಾನಾರೂಪಗಳಲ್ಲಿ ಹೊರಹೊಮ್ಮುವ ಸಂದರ್ಭದಲ್ಲಿ ನಿರ್ದಿಷ್ಟ ಆಕೃತಿಗಳು ರೂಪು ತಳೆಯುತ್ತ ಬಂದಿವೆ. ಬುದ್ಧಿ ವಿಕಾಸವಾಗಿ ಮಾತು ಮನುಷ್ಯನಿಗೆ ದೊರಕುವ ಕಾಲಕ್ಕೆ ಈ ಆಕೃತಿಗಳಲ್ಲಿ ಸುಧಾರಣೆ ಕಂಡುಬಂದು ಪೂಜಾಪ್ರತಿಮೆಗಳಾಗಿ ಅಂತಿಮರೂಪ ಧರಿಸಿವೆ. ಇಂಥ ಅಂತಿಮರೂಪದ ಪ್ರತಿಮೆಗಳು ಪ್ರದೇಶದಿಂದ ಪ್ರದೇಶಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ ಕಾಲಕಾಲಕ್ಕೆ ಬೇರೆಯಾಗಿ ವಿಕಾಸವಾಗಿ ಆಯಾ ಸಂಸ್ಕೃತಿ ದೇಶಗಳ ಜನಪದ ಚಿತ್ರಗಳಾಗಿ ಉಳಿದುಕೊಂಡು ಬಂದಿವೆ.

ಜನಪದ ಚಿತ್ರಕಲೆಗೂ, ಶಿಷ್ಟಚಿತ್ರಕಲೆಗೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಸ್ವಲ್ಪ ಕಷ್ಟ. ಪ್ರಪಂಚದ ಜನಪದ ಕಲೆಗಳಂತೆ ಕರ್ನಾಟಕದ ಈ ಜನಪದ ಚಿತ್ರಕಲೆಗೂ ಯಾವ ಲಿಖಿತ ಗ್ರಂಥಗಳ ಆಧಾರ ಅಥವಾ ತಾತ್ವಿಕ ವಿವೇಚನೆಯ ಹಿನ್ನೆಲೆ ಇಲ್ಲವಾಗಿದೆ. ಜನಪದ ಚಿತ್ರಕಲೆ ನಿಸರ್ಗಕ್ಕೆ ತುಂಬಾ ಹತ್ತಿರವಾಗಿದೆ. ಅನುಕರಣೆ ಮತ್ತು ಆಚರಣೆಗಳಿಂದ ಉಳಿದುಕೊಂಡುಬಂದಿದೆ. ಅಲೌಕಿಕ ಜೀವಿಗಳ ಆರಾಧನೆ ಮತ್ತು ಅನೇಕ ಧಾರ್ಮಿಕ ನಂಬಿಕೆಗಳಿಂದ ಕೂಡಿದೆ. ಈ ಕಲೆಯಲ್ಲಿ ಕಂಡುಬರುವ ಆಚಾರ-ವಿಚಾರಗಳು, ನಂಬಿಕೆ ಸಂಪ್ರದಾಯಗಳು ಜನರ ಜೀವನವಿಧಾನ ಮತ್ತು ಮನೋದೃಷ್ಟಿಯನ್ನು ಪ್ರತಿನಿಧಿಸುತ್ತವೆ. ಜನಪದ ಚಿತ್ರಕಲೆಯನ್ನು 'ಕಲೆ' ಎಂದು ಭಾವಿಸದೆ ಆಚರಣೆಯ ಒಂದು ಅಂಗ ಎಂದು ಭಾವಿಸುವುದೇ ಇಲ್ಲಿನ ವಿಶೇಷವಾಗಿದೆ.

ಚಿತ್ರಕಲೆಯಲ್ಲಿ ಜನಪದ ಶಿಷ್ಟ ಎಂದು ವಿಭಾಗೀಕರಿಸುವುದೂ ಕೂಡ ಕಷ್ಟವಾಗುತ್ತಿದೆ. ಯಾಕೆಂದರೆ ಶಿಷ್ಟಕಲೆ ಎನ್ನುವುದು ಜನಪದ ಚಿತ್ರಕಲೆಯಿಂದ ಮುಂದುವರಿದ ರೂಪ ಅಷ್ಟೆ. ಆಧುನಿಕ ಚಿತ್ರಕಲೆಯಲ್ಲಿ ನಾನಾ ರೀತಿಯ ಇಸಂಗಳು, ವಾದಗಳು ಇದ್ದು ಪ್ರತಿಯೊಬ್ಬ ಚಿತ್ರಕಲಾವಿದನೂ ತನ್ನದೇ ಆದ ಒಂದು ಶೈಲಿಯನ್ನು ರೂಢಿಸಿಕೊಂಡು ವ್ಯಕ್ತಿ ವೈಶಿಷ್ಟ್ಯವನ್ನು ಮೆರೆಯುತ್ತಾನೆ. ಸರಳ ರೇಖಾಚಿತ್ರಗಳಿಂದ ಹಿಡಿದು ಅತಿ ಸಂಕೀರ್ಣವಾದ ಚಿತ್ರಗಳನ್ನು ಬಿಡಿಸುತ್ತಾನೆ. ಈ ದೃಷ್ಟಿಯಿಂದ ಮಾತ್ರ ಶಿಷ್ಟ ಚಿತ್ರಕಲೆ ಎಂದು ಇದನ್ನು ಕರೆಯಬಹುದು. ಇದಕ್ಕೆ ವಿರುದ್ಧ ನೆಲೆಯಲ್ಲಿ ಜನಪದ ಚಿತ್ರಕಲೆ ಎಂಬುದು ಜನಪದ ಸಾಹಿತ್ಯ, ನೃತ್ಯ, ಸಂಗೀತಗಳಂತೆ ಆಧುನಿಕ ಪರಿಸರದಲ್ಲಿ ಪ್ರತ್ಯೇಕವಾಗಿ ರೂಪು ತಳೆಯುತ್ತಿರುವುದು ಕಡಿಮೆಯಾಗಿದೆ.

ಶಿಷ್ಟ ಚಿತ್ರಕಲೆಯನ್ನು ಕುರಿತು ಮಾತನಾಡುವಾಗ ನಮ್ಮ ಜೀವನದ ಯಾವುದೋ ಆಂತರಿಕ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಸೃಷ್ಟಿಯಾಗುತ್ತಿದೆ ಎಂದು ಭಾವಿಸುತ್ತಾರೆ. 'ಕಲೆಗಾಗಿ ಕಲೆ' ಎನ್ನುವ ವಾದವೇ ಬೆಳೆದು ಬಂದಿದೆ. 'ಆನಂದಕ್ಕಾಗಿ ಕಲೆ' ಎನ್ನುವ ವಾದವೂ ಇದೆ. ಕಲೆಯ ಸೃಷ್ಟಿಕ್ರಿಯೆಯ ಬಗ್ಗೆ ಹೇಗೆ ಭಿನ್ನಾಭಿಪ್ರಾಯಗಳಿವೆಯೋ ಹಾಗೆ ನಿರ್ಮಾಣದ ವಿಧಾನಗಳ ಬಗ್ಗೆಯೂ ವಾದವಿವಾದಗಳಿವೆ. ಅವನ್ನು ವಾಸ್ತವಿಕ-ಅವಾಸ್ತವಿಕ ನೆಲೆಗಳಲ್ಲಿ ನೋಡಬೇಕೆಂಬ ಮನೋಭಾವಗಳು ಬೆಳೆದು ಬಂದಿವೆ.

"ಅನುಭವಗಳ ಜಂಜಲದಿಂದ, ಅಸಂತೃಪ್ತಿಯ ನಿವಾರಣೆಗಾಗಿ ಒಬ್ಬ ವ್ಯಕ್ತಿಯು ತನ್ನ ಆತ್ಮಸಂತೃಪ್ತಿಗಾಗಿ ಮಾಡುವ ಕೆಲಸವೇ ಕಲೆಯೆಂದೂ ಅದರ ಚೆಲುವು ಮತ್ತು ಸಾರ್ಥಕತೆಗಳೆಲ್ಲ ಈ ಉದ್ದೇಶವನ್ನು ಪೂರೈಸುವುದರಲ್ಲಿದೆಯೇ ಹೊರತು ಸ್ವತಂತ್ರವಾಗಿರುವುದಿಲ್ಲ" ಎಂದು ಡಾ. ಶಿವರಾಮ ಕಾರಂತರು (ಗ್ರಂಥ:

ಮುನ್ನುಡಿ) ಅಭಿಪ್ರಾಯ ಪಡುತ್ತಾರೆ. ಕಲೆ ಸಮಷ್ಟಿ ದರ್ಶನದ ಕಲ್ಪನೆಯನ್ನು ಒಳಗೊಂಡಿರಬೇಕು ಎಂಬ ಆಲೋಚನೆಯೂ ಕಾರಂತರಿಗಿದೆ.

ಈ ಸಮಷ್ಟಿದರ್ಶನದ ಹಿನ್ನೆಲೆಯಲ್ಲಿಯೇ 'ಜೀವನಕ್ಕಾಗಿ ಕಲೆ' ಎಂಬ ವಾದ ಹುಟ್ಟಿಕೊಂಡಿರುವುದು. ಕಲೆಯಲ್ಲಿ ಅಭಿಜಾತವಾದ (classicism) ರೊಮ್ಯಾಂಟಿಕ್‌ವಾದ (Romanticism) ಮತ್ತು ಆದರ್ಶವಾದ (Idealism) ಎಂಬ ವಾದಗಳಿವೆ. ಈ ಮೂರು ಕಲಾಸಿದ್ಧಾಂತಗಳಿಗೆ ವಿರುದ್ಧವಾಗಿ ವಾಸ್ತವತಾ ವಾದ (Realism) ಹುಟ್ಟಿಕೊಂಡಿತು. "ಸಂಗತಿಗಳನ್ನು ವ್ಯಕ್ತಿಗಳನ್ನು ಅವಿದ್ದ ಹಾಗೆಯೇ. ನಮ್ಮ ಇಂದ್ರಿಯಗಳಿಗೆ ಕಾಣಿಸುವ ರೀತಿಯಲ್ಲಿಯೇ ಯಾವುದಕ್ಕೂ ಒತ್ತುಕೊಡದೆ ಯಾವುದನ್ನೂ ಕೈಬಿಡದೆ ಯಾವುದನ್ನೂ ಸುಂದರಗೊಳಿಸದೆ ಚಿತ್ರಿಸಬೇಕೆಂಬುದು ವಾಸ್ತವತಾವಾದದ ಉದ್ದೇಶ" (ಗಿರಡ್ಡಿ ಗೋವಿಂದರಾಜ, ೧೯೯೮: ೧೫೫). ಇಂಥ ಚಿತ್ರಗಳನ್ನು ವಸ್ತುನಿಷ್ಠವಾಗಿ ನೀಡಬೇಕೆಂಬುದು, ಕಲಾವಿದನ ವೈಯಕ್ತಿಕ ಭಾವನೆಗಳು ಅವನ ಕಲಾಕೃತಿಯಲ್ಲಿ ಸೇರಿರಬಾರದು ಎಂಬುದನ್ನು ವಾಸ್ತವತಾವಾದ ಪ್ರತಿನಿಧಿಸುತ್ತದೆ. ಈ ವಾದದ ತಿರುಳನ್ನಾಗಲೀ. ಪರಿಕಲ್ಪನೆಯನ್ನಾಗಲೀ ತಿಳಿಯದ ಜನಪದರು ಈ ಅಂಶದ ಮೇಲೆ ಒತ್ತುಕೊಟ್ಟು ಜನಪದ ಚಿತ್ರಕಲೆಯನ್ನು ಬೆಳೆಸಿದ್ದಾರೆ. ನಿಸರ್ಗ ವಾದವೂ ಈ ಚಿತ್ರಕಲೆಯ ಮೇಲೆ ಗಾಢವಾದ ಪ್ರಭಾವ ಬೀರಿದೆ.

ಇಂಥ ವಸ್ತುಸ್ಥಿತಿಯ ಹಿನ್ನೆಲೆಯ ಸಮಷ್ಟಿದರ್ಶನ ಈಗ ನಮಗೆ ದೊರೆತಿರುವ ಅತಿ ಪ್ರಾಚೀನವಾದ ಗುಹಾಚಿತ್ರಗಳಲ್ಲೇ ಒಡಮೂಡಿದೆ. ಕರ್ನಾಟಕದ ಉತ್ತರ ಭಾಗದ ಕಡೆ ದೊರೆತಿರುವ ಗುಹಾಚಿತ್ರಗಳು ನೂತನ ಶಿಲಾಯುಗಕ್ಕೆ (ಕ್ರಿ.ಪೂ. ೨೫೦೦-೧೦೦೦) ಸೇರಿದವುಗಳೆಂದು ತೀರ್ಮಾನಿಸಲಾಗಿದೆ. ಅಲೆಮಾರಿಗಳಾಗಿದ್ದ ಹಳೆಯ ಶಿಲಾಯುಗದ ಜನ ನೂತನ ಶಿಲಾಯುಗಕ್ಕೆ ಬರುವ ವೇಳೆಗೆ ಗುಹೆಗಳಲ್ಲಿ. ಚಾಚುಬಂಡೆಗಳ ಕೆಳಗೆ ಮರಗಳ ಪೊಟರೆಗಳಲ್ಲಿ ವಾಸಿಸುವ ನಿರ್ಧಾರಕ್ಕೆ ಬಂದಾಗ ವಸತಿ ನೆಲೆಗಳ ಆವಿಷ್ಕಾರವಾಗಿದೆ. ಹೀಗೆ ನೆಲೆನಿಂತ ಮೇಲೆ ಬದುಕನ್ನು ಸುಂದರಗೊಳಿಸುವ ಕಡೆ ಮನಸ್ಸು ಮಾಡಿ ಬಂಡೆಗಲ್ಲುಗಳ ಮೇಲೆ, ಚಾಚು ಬಂಡೆಗಳ ಕೆಳಗೆ ಕೆಮ್ಮಣ್ಣಿನಲ್ಲಿ ಚಿತ್ರಬಿಡಿಸುವ ಕಲೆ ಅಂದರೆ ಬಣ್ಣ ಬಳಸುವ ಕಲೆ ಆರಂಭವಾಗಿದೆ. ಇಂಥ ಚಿತ್ರಗಳು ರಾಯಚೂರು, ಗುಲಬರ್ಗಾ, ಬಳ್ಳಾರಿ, ಬಿಜಾಪುರ ಜಿಲ್ಲೆಗಳ ಬಹಳಷ್ಟು ಕಡೆ ದೊರಕಿವೆ. ಇಂಥ ಕಾಲದಲ್ಲಿ ಕೆಮ್ಮಣ್ಣಿನ ಕೆಂಪು ಮತ್ತು ಬಿಳಿ ಬಣ್ಣಗಳಲ್ಲಿ ಹೆಚ್ಚಾಗಿ ಚಿತ್ರಗಳು ರಚನೆಯಾಗಿವೆ. ಗೂಳಿ, ಜಿಂಕೆ ಮಾನವರ ಚಿತ್ರಗಳು ಇಲ್ಲಿ ವಸ್ತುಗಳಾಗಿವೆ. ಸಾಂಕೇತಿಕವಾಗಿ ಬಣ್ಣದ ಗೀರಿನಲ್ಲಿ ಪ್ರಾಣಿ ಅಥವಾ ಮಾನವರ ಆಕಾರಗಳನ್ನು ಬಿಡಿಸಿ ಕಣ್ಣು ಮೂಗು ಮುಂತಾದ ಅವಯವಗಳನ್ನು ತೋರಿಸದೆ ಒಳಗೆಲ್ಲ ಚಪ್ಪಟೆಯಾಗಿ ಬಣ್ಣ ತುಂಬಿಸುವುದೇ ಇಲ್ಲಿನ ಪದ್ಧತಿಯಾಗಿದೆ. ತೆಕ್ಕಲುಕೋಟೆ. ಸಂಗನಕಲ್ಲು, ಗೊಂಬಿಗುಡ್ಡ, ತಾವರಗೇರಿ, ವಾಲಿದಿಬ್ಬ, ಸಿಡಿಲುಗುಂಡಿ, ಮುಂತಾದ ಕಡೆಗಳಲ್ಲಿ ಕೇವಲ ಗೆರೆಗಳಿಂದಲೇ ಮಾನವರ, ಪ್ರಾಣಿಗಳ ಸಹಜವಾದ ಆಕೃತಿ ಮೂಡುವಂತೆ ರೂಪಿಸಿರುವುದು ಅವರು ಕಲೆಯ ಬಗ್ಗೆ ಪ್ರಜ್ಞಾಪೂರ್ಣರಾಗುತ್ತಿರುವುದನ್ನು ಸೂಚಿಸುತ್ತದೆ. ಇಲ್ಲಿನ ಚಿತ್ರಗಳಲ್ಲಿ ಹೆಚ್ಚಾಗಿ ಕೈಕೈ ಹಿಡಿದು ಸಾಲುಸಾಲಾಗಿ ನಿಂತ ಮಾನವಾಕೃತಿಗಳು ನೃತ್ಯ ಅಥವಾ ಬೇಟೆಯ ಸಂದರ್ಭವನ್ನು ಸೂಚಿಸುತ್ತವೆ. ಗೂಳಿ ಹಸು ಜಿಂಕೆ ಮೊದಲಾದ ಪ್ರಾಣಿಗಳನ್ನೂ ಜೊತೆಯಲ್ಲಿಯೇ ಬಿಡಿಸಿರುವುದರಿಂದ ವಸತಿ ನೆಲೆಯ ಜನಜೀವನ ಪ್ರಾರಂಭವಾಗಿರುವುದರ ಸೂಚನೆ ದೊರಕುತ್ತದೆ. ಇವುಗಳಲ್ಲಿ ಕ್ರಮಬದ್ಧತೆ ಏನೂ ಇಲ್ಲ. ತೋಚಿದಂತೆ ಚಿತ್ರಿಸಲಾಗಿದೆ.

ನೂತನ ಶಿಲಾಯುಗದಿಂದ ಮುಂದುವರಿದ ಈ ಸರಳವಾದ ಜನಪದ ಚಿತ್ರಕಲೆ ಬೃಹತ್ ಶಿಲಾಯುಗದ ಕಾಲದಲ್ಲಿ ಇನ್ನೂ ಸುಧಾರಣೆಗೊಂಡು ಜನಜೀವನದ ಪ್ರಮುಖ ಚಟುವಟಿಕೆಯಾದ ಆಹಾರ ಸಂಪಾದನೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಿದೆ. ಬೃಹತ್ ಶಿಲಾಸಮಾಧಿಗಳ ಸಮೀಪದಲ್ಲಿರುವ ಚಾಚು ಬಂಡೆಗಳ ಮೇಲಿರುವ ಚಿತ್ರಗಳಲ್ಲಿ ಕುದುರೆ ಸವಾರಿ ಮಾಡುತ್ತಿರುವ ಬೇಟೆಗಾರರು ಈಟಿ. ಕತ್ತಿ, ಬಿಲ್ಲುಬಾಣಗಳನ್ನು ಹಿಡಿದು ಬೇಟೆಗಳನ್ನಡ್ಡಗಟ್ಟುವುದು. ಕುದುರೆ ಮೇಲೆ ಕುಳಿತೇ ಹುಲಿ ಬೇಟೆಯಾಡುವುದು ಮುಂತಾದ ಸಂಗತಿಗಳಿವೆ. ಹಿರೇಬೆನಕಲ್ಲಿನ ಚಾಚು ಬಂಡೆಗಳಲ್ಲಿ ಅಭಿವ್ಯಕ್ತಗೊಂಡಿರುವ ಈ ಚಿತ್ರಗಳಲ್ಲಿ ವೇಗದ ಪ್ರಾಣಿಯಾದ ಕುದುರೆ ಸ್ಥಾನ ಪಡೆದಿದೆ. ಬಲಿಚಕ್ರ ಎಂಬಲ್ಲಿಯೂ ಕುದುರೆ ಸವಾರನ ಚಿತ್ರವಿದೆ. ವೇಗವಾಗಿ ಓಡುವ ಹುಲಿಜಿಂಕೆಗಳನ್ನು ಅಷ್ಟೇ ವೇಗವಾಗಿ ಓಡಿ ಬೇಟೆಯಾಡಲಾರದ ಮಾನವ ಕುದುರೆ ಬಳಕೆ ಮಾಡಿಕೊಂಡಿರುವುದು ಜೀವನಕ್ರಮದಲ್ಲಾಗಿರುವ ಬದಲಾವಣೆಯ ಜೊತೆಗೆ ಬೇಟೆಯಲ್ಲಾಗಿರುವ ತಾಂತ್ರಿಕ ಕುಶಲತೆಯನ್ನು

ಸೂಚಿಸುವಂತಹುದ್ದಾಗಿದೆ. ಈ ಚಿತ್ರಗಳು ಸತ್ವಯುತವಾಗಿರುವುದರ ಜೊತೆಗೆ ರೇಖೆಗಳ ಸವಿರಿನಿಂದ ಸ್ಪಷ್ಟ ಅಭಿವ್ಯಕ್ತಿ ಪಡೆದಿವೆ.

ಆಹಾರ ಸಂಪಾದನೆಯ ಅವಶ್ಯಕತೆ ಮುಗಿದ ಕೂಡಲೆ ಮನುಷ್ಯನ ಮನಸ್ಸು ಸೌಂದರ್ಯೋಪಾಸನೆ ಕಡೆ ತಿರುಗುತ್ತದೆ ಎನ್ನುವುದನ್ನು ಚೀನಾದ ಒಂದು ಗಾದೆ ಹೀಗೆ ವ್ಯಕ್ತಪಡಿಸಿದೆ : "ನಿನ್ನ ಬಳಿ ಎರಡಾಣೆ ಇದ್ದರೆ ಮೊದಲ ಆಣೆಗೆ ರೊಟ್ಟಿ ತಗೊ ಇನ್ನೊಂದಾಣೆಗೆ ಮಲ್ಲಿಗೆ ತಗೋ'. ಇದರ ಪ್ರಕಾರ ಹಾಗೂ ಕರ್ನಾಟಕದಲ್ಲಿ ಬೆಳವಣಿಗೆಯಾಗಿ ಬಂದಿರುವ ಜನಪದ ಚಿತ್ರಕಲೆಯ ಪ್ರಕಾರ ಮೊದಲು ಆಹಾರ ಅನಂತರ ಸೌಂದರ್ಯವಿಚಾರ. (ಈ ಒಂದು ತತ್ವ ಬೃಹತ್ ಶಿಲಾಯುಗದ ನಂತರ ಬೆಳವಣಿಗೆಯಾಗಿರುವ ತಾಮ್ರ ಶಿಲಾಯುಗದ ಮಡಕೆಗಳ ಮೇಲೆ ಕಂಡುಬರುತ್ತಿದೆ.) ಜನಪದ ಚಿತ್ರಕಲೆಯಲ್ಲಿ ಸೌಂದರ್ಯವಿಚಾರ ತಾತ್ವಿಕ ಅಂಶವಾಗಿ ಬಳಕೆಯಾಗುತ್ತಿರುವುದನ್ನು ತಾಮ್ರ ಶಿಲಾಯುಗದ ಕೆಲವು ಮಡಕೆಗಳ ಮೇಲಿನ ಚಿತ್ರಗಳು ಸ್ಪಷ್ಟಪಡಿಸುತ್ತಿವೆ. ಮಾಸಲು ಕೆಂಪುವರ್ಣದ ಮಡಕೆಗಳ ಮೇಲ್ಭಾಗದಲ್ಲಿ ಕಪ್ಪು ಅಥವಾ ನೇರಳೆ ವರ್ಣದ ಚಿತ್ರಗಳಿವೆ. ದಪ್ಪರೇಖೆಗಳು ಹಲವು ವಿನ್ಯಾಸಗಳಲ್ಲಿ ಬಳಕೆಯಾಗಿವೆ. ಈ ಹಂತದಲ್ಲಿ ಬಣ್ಣ ಮತ್ತು ರೇಖೆಗಳ ವಿನ್ಯಾಸ ಹೆಚ್ಚು ದಟ್ಟವಾಗಿರುವುದನ್ನು ಕಾಣಬಹುದು.

ಚರಿತ್ರೆಯ ಆರಂಭ ಕಾಲದಲ್ಲಿ ಇಂಥ ಹೊಳಪಿನ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ರೇಖಾಕೃತಿಗಳನ್ನು ಮೂಡಿಸಿರುವುದನ್ನು ಕಾಣುತ್ತೇವೆ. ರೇಖಾಕೃತಿಗಳು ಅಲೆಅಲೆಯಾಗಿ, ದಪ್ಪ ಸಣ್ಣ ಚುಕ್ಕೆಗಳಾಗಿ ಹೂವಿನಂತೆ ಹತ್ತು ಬಲವು ಬಗೆಯಾಗಿ ಅಭಿವ್ಯಕ್ತಗೊಂಡು ಕೆಂಪುಬಣ್ಣದ ಲೇಪನ ಪಡೆದಿರುವುದು ಗಮನಾರ್ಹವಾಗಿದೆ. ಇಂಥ ಚಿತ್ರಿತ ಮಡಕೆಗಳು ಬ್ರಹ್ಮಗಿರಿ, ಚಂದ್ರವಳ್ಳಿ, ಹೆಮ್ಮಿಗೆ, ಹೆರಕಲ್ಲು, ವಡಗಾಂವ, ಮಾಧವಪುರ, ಮಸ್ಕಿ, ಬೆಂಗಳೂರು ಮುಂತಾದ ಸ್ಥಳಗಳ ನಿವೇಶನಗಳಲ್ಲಿ ದೊರೆತಿವೆ. ಇವುಗಳಲ್ಲಿ ಕಂಡುಬರುವ ಸಮಾನಾಂತರ ರೇಖೆಗಳು, ಗುಹಾಚಿತ್ರಗಳಲ್ಲಿರುವ ಕೆಮ್ಮಣ್ಣಿನ ರೇಖೆಗಳು ಇಂದಿಗೂ ಜನಪದರ ಸಾರಣಿ ಕಾರಣಿಗಳಲ್ಲಿ ಕಂಡುಬರುತ್ತಿವೆ.

ಇದರ ನಂತರದ ಬೆಳವಣಿಗೆ ಎಂದರೆ ಗುಹಾಂತರ ದೇವಾಲಯಗಳ ಚಿತ್ರಗಳು. ಈ ಚಿತ್ರಗಳನ್ನು ಜನಪದ ಮತ್ತು ಶಿಷ್ಟ ಎಂಬ ಎರಡು ಗುಂಪಿಗೂ ಸೇರಿಸಬಹುದು. ದೇವಾನುದೇವತೆಗಳು, ರಾಜಪರಿವಾರಗಳು, ಕುಲಕಸುಬುಗಳವರು, ಸೇವಕವರ್ಗದವರು ಇಲ್ಲಿ ಅಭಿವ್ಯಕ್ತಿ ಪಡೆದುಕೊಂಡಿದ್ದಾರೆ. ಅಜಂತ ಗುಹೆಗಳಲ್ಲಿ, ಬಾದಾಮಿ ಗುಹೆಗಳಲ್ಲಿರುವ ಚಿತ್ರಗಳು ಭಾರತೀಯ ಚಿತ್ರಕಲೆಯ ಮಹೋನ್ನತ ಸಾಧನೆಗಳು ಅನ್ನಿಸಿಕೊಂಡಿವೆ. ಈ ಕಾಲಕ್ಕೆ ಚಿತ್ರಕಲೆ ಎಂಬುದು ಸ್ವತಂತ್ರ ಪರಿಪೂರ್ಣ ಕಲಾಪ್ರಕಾರವಾಗಿ ಅರಳಿರುವುದನ್ನು ಕಾಣಬಹುದು. ಈ ಚಿತ್ರಕಲೆಯ ಕ್ರಮಾಗತ ಬೆಳವಣಿಗೆಯಲ್ಲಿಯೇ ಮನುಕುಲದ ಕ್ರಮಾಗತ ಬೆಳವಣಿಗೆಯೂ ಅಡಗಿದೆ. ಬೇಟೆಯ ಹಂತದ ಗುಹೆಗಳ ಚಿತ್ರಗಳು ಮನುಷ್ಯನ ಅಲೆಮಾರಿತನವನ್ನು ಪ್ರತಿನಿಧಿಸಿದರೆ, ವ್ಯವಸಾಯ ಹಂತದ ಹುಗೆಗಳು ಚಿತ್ರಗಳು ಮನುಷ್ಯನ ರಾಜ್ಯಾಕಾಂಕ್ಷೆಯನ್ನು ಪ್ರತಿನಿಧಿಸುವಂತಿವೆ. 'ರೇಖೆಗಳ ವಿನ್ಯಾಸ, ಬಣ್ಣಗಳ ಸಂಯೋಜನೆಯಲ್ಲಿ ಬಾದಾಮಿ, ವಿಜಯನಗರ, ಲೇಪಾಕ್ಷಿ, ಸೀಬಿ ದೇವಾಲಯದ ಗೋಡೆ ಹಾಗೂ ಚಾವಣಿ ಚಿತ್ರಗಳು ಪರಿಪೂರ್ಣತೆಯನ್ನು ಸಾಧಿಸಿಕೊಂಡಿವೆ. ಚಿತ್ರರಚನಾ ನೈಪುಣ್ಯದಲ್ಲಿ ಜನಪದ ಹಂತ ದಾಟಿರುವ ಈ ದೇವಾಲಯ ಚಿತ್ರಗಳು ವಸ್ತುವಿನ ದೃಷ್ಟಿಯಿಂದ ಜನಪದ ಆಶಯಗಳಿಗೆ ಹತ್ತಿರವಾಗಿವೆ. ಲೇಪಾಕ್ಷಿ ದೇವಾಲಯದಲ್ಲಿರುವ ರಾಜಕುಮಾರನ ದುರಹಂಕಾರದಿಂದ ತನ್ನ ಪ್ರಾಣಕಳಕೊಂಡ ಕರುವನ್ನು ಹೊತ್ತುಕೊಂಡು ಬಂದು ನ್ಯಾಯ ಕೇಳಿದ ಹಸುವಿಗೆ ರಾಜ ತನ್ನ ರಾಜಕುಮಾರನ ಪ್ರಾಣವನ್ನೇ ಕೊಟ್ಟು ನ್ಯಾಯ ನೀಡುವ ವಿಧಾನದ ಸರಣಿಚಿತ್ರ ಸಾಮಾಜಿಕ ನ್ಯಾಯದ ಪರವಾದುದಾಗಿದೆ. ಅಗಲವಾದ ಕಣ್ಣುಗಳು ಪಾರ್ಶ್ವ ನೋಟದ ಮುಖ ಗುಂಡುಗುಂಡಾದ ಅವಯವಗಳು, ವೈಶಿಷ್ಟ್ಯಪೂರ್ಣವಾದ ಆಭರಣಗಳು, ವೈವಿಧ್ಯಮಯವಾದ ತುರುಬುಗಳು, ಪೂರ್ಣ ಮೈಮುಚ್ಚುವ ನಿಲುವಂಗಿಗಳು ಲೇಪಾಕ್ಷಿ ಚಿತ್ರಕಲೆಯ ವೈಶಿಷ್ಟ್ಯಗಳಾಗಿವೆ.

ಹೊಯ್ಸಳರ ಕಾಲದಲ್ಲೂ ಒಂದೆರಡು ದೇವಾಲಯಗಳ ಒಳಚಾವಣಿಯಲ್ಲಿ ರೇಖಾಚಿತ್ರಗಳು ಉಳಿದು ಬಂದಿವೆ. ವಿಷ್ಣುವರ್ಧನನ ಕಾಲದಲ್ಲಿ ರಚಿತವಾಗಿರಬಹುದೆಂದು ಊಹಿಸಲಾಗಿರುವ ಶ್ರವಣಬೆಳಗೊಳದ ಶಾಂತಿನಾಥ ಬಸದಿಯ ಗೋಡೆಗಳು ಮತ್ತು ಚಾವಣಿಗಳು ನಿಂತಿರುವ ಜಿನಮೂರ್ತಿಗಳಿಂದ, ಯಕ್ಷಯಕ್ಷಿಯರಿಂದ ಅಲಂಕೃತವಾಗಿವೆ. ಹನ್ನೆರಡನೇ ಶತಮಾನಕ್ಕೆ ಸೇರಿದ ಮೂರು ತಾಳೆಗರಿ ಗ್ರಂಥಗಳು

ಮೂಡುಬಿದರೆಯ ಜೈನಗ್ರಂಥಾಲಯದಲ್ಲಿದ್ದು ಅವುಗಳ ಮೇಲೆ ವರ್ಣಚಿತ್ರಗಳಿರುವುದು ಒಂದು ವಿಶೇಷವಾಗಿದೆ. ಧವಲಾ, ಜಯಧವಲಾ ಮತ್ತು ಮಹಾಧವಲಾ ಎಂಬ ಹೆಸರಿನ ಈ ಮೂರು ಗ್ರಂಥಗಳು ಮಸಿಯಲ್ಲಿ ಬರೆದವಾಗಿದ್ದು ಪ್ರತಿಪುಟದ ಎರಡು ಕಡೆಯೂ ಚಿತ್ತಾರದ ಅಂಚುಗಳ ನಡುವೆ ಕಿರುಚಿತ್ರಗಳಿವೆ (ಮಿನಿಯೇಚರ್). ಯಕ್ಷಯಕ್ಷಿರು, ಮುನಿಗಳು, ಇತರ ಮೂರ್ತಿಗಳನ್ನು ರೇಖೆಗಳಿಂದ ಚಿತ್ರಿಸಿ ಬಣ್ಣ ತುಂಬಿದ್ದಾರೆ. ಅಲ್ಲಲ್ಲಿ ವರ್ತುಲದ ನಡುವೆ ಹೂಗಳನ್ನು ಬಿಡಿಸಿ ಬಣ್ಣ ತುಂಬಿದ್ದಾರೆ. ಗಿಡಮರಗಳು, ನವಿಲು, ಹಂಸಗಳು ಅವುಗಳ ಸುರುಳಿ ಸುರುಳಿಯಾದ ಬಾಲಗಳು ಹನ್ನೆರಡನೇ ಶತಮಾನದ ವರ್ಣಚಿತ್ರಕಲೆಗೆ ಮಾದರಿಯಾಗಿವೆ. ನೇಮಿನಾಥ ಪುರಾಣದ ಹಸ್ತಪ್ರತಿಯೊಂದರಲ್ಲಿ ಇಂಥ ಚಿತ್ರಗಳಿರುವುದನ್ನು ವಿದ್ವಾಂಸರು ಪತ್ತೆಹಚ್ಚಿದ್ದಾರೆ.

ಹೀಗೆ ದೇವಾಲಯದ ಗೋಡೆಗಳು, ಚಾವಣಿಗಳನ್ನು ಬಿಟ್ಟರೆ ಜನಪದ ಚಿತ್ರಕಲೆ ಜನಜೀವನದ ಭಾಗವಾದ ಸಂಪ್ರದಾಯ ಆಚರಣೆಗಳಲ್ಲಿ ಮಡುಗಟ್ಟಿದೆ. ಉತ್ಪಾದನಾ ಚಟುವಟಿಕೆಗಳು, ಸೃಜನಶೀಲ ಚಟುವಟಿಕೆಗಳು ಒಂದಕ್ಕೊಂದು ಬೆಸೆದಿರುವಂಥ ಅಪರೂಪದ ಕಲಾ ಪ್ರಕಾರ ಜನಪದ ಚಿತ್ರಕಲೆಯಾಗಿದೆ. ಶ್ರಮ ಮತ್ತು ಕಲೆಗಳೆರಡೂ ಸೇರಿ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಿರುವುದನ್ನು ಇಲ್ಲಿ ಮಾತ್ರ ಕಾಣಲು ಸಾಧ್ಯ. ವೈಟ್ ಎನ್ನುವ ಸಂಸ್ಕೃತಿ ಚಿಂತಕ "ಮಾನವನ ದೈಹಿಕ ಶ್ರಮ ಎಷ್ಟೆಷ್ಟು ಬಳಕೆಯಾಗುತ್ತದೋ ಅಷ್ಟಷ್ಟೂ ಸಂಸ್ಕೃತಿ ವಿಕಾಸವಾಗುತ್ತದೆ" ಎಂದು ಹೇಳಿದ್ದು ಜನಪದ ಚಿತ್ರಕಲೆಗೆ ಅನ್ವಯಿಸುತ್ತದೆ.

ಜನಪದ ಕಲೆಗಳನ್ನು ಸ್ಥೂಲವಾಗಿ ನಾಲ್ಕು ಭಾಗವನ್ನಾಗಿ ಮಾಡಬಹುದು : ೧. ಉಪಯುಕ್ತ ಕಲೆಗಳು, ೨. ಆರಾಧನಾ ಕಲೆಗಳು, ೩. ಅಲಂಕರಣ ಕಲೆಗಳು, ೪. ಲಲಿತ ಕಲೆಗಳು. ಬುಟ್ಟಿಕುಡಿಕೆ ಮಡಕೆಗಳ ತಯಾರಿಕೆ, ಬೇಸಾಯ ಉಪಕರಣಗಳು, ಬೇಟೆ ಉಪಕರಣಗಳು ಉತ್ಪಾದನಾ ಸಂಬಂಧಿ ವಸ್ತುಗಳು ಉಪಯುಕ್ತ ಕಲೆಗಳ ಪರಿಧಿಯಲ್ಲಿ ಬರುತ್ತವೆ. ದೇವೋಪಾಸನೆಯ ಹಿನ್ನೆಲೆಯಲ್ಲಿ ಉಗಮಗೊಂಡ ಭೂತನೃತ್ಯ, ವೀರಗಾಸೆ, ಮೊದಲಾದುವನ್ನು ಆರಾಧನಾ ಕಲೆಗಳ ಪಟ್ಟಿಯಲ್ಲಿ ಸೇರಿಸಬಹುದು. ಸಾಹಿತ್ಯ ಸಂಗೀತ, ನೃತ್ಯ ಮುಂತಾದವುಗಳನ್ನು ಲಲಿತಕಲೆಗಳೆಂದು ಕರೆಯಬಹುದು. ವಸ್ತ್ರಾಭರಣಗಳು, ದೇಹಾಲಂಕಾರ, ಗೃಹಾಲಂಕಾರ ಜಡೆ ತುರುಬು, ಹಚ್ಚೆ, ರಂಗವಲ್ಲಿ ಮುಂತಾದವನ್ನು ಅಲಂಕರಣಕಲೆಗಳೆಂದು ಕರೆಯಬಹುದು. ಈ ಅಲಂಕರಣ ಕಲೆಗಳನ್ನೇ ನಾವು ಸ್ಥೂಲವಾಗಿ ಜನಪದ ಚಿತ್ರಕಲೆ ಎಂದು ಈಗ ಕರೆಯಬಹುದು.

ದೃಶ್ಯರೂಪದ ಪ್ರದರ್ಶಕ ಕಲೆಗಳನ್ನು ಬಿಟ್ಟರೆ, ಹೆಚ್ಚು ಸೂಕ್ಷ್ಮವೂ ಕುಸುರಿತನದಿಂದ ಕೂಡಿರುವಂಥವೂ ಆದ ಕಲೆಗಳನ್ನು 'ಕುಶಲಕಲೆ'ಗಳೆನ್ನುತ್ತಾರೆ. ಈ ಕುಶಲಕಲೆಗಳಲ್ಲಿರುವ ಬಣ್ಣಗಾರಿಕೆಯ ಸಂಗತಿಗಳು, ಪ್ರದರ್ಶಕ ಕಲೆಗಳಲ್ಲಿರುವ ಬಣ್ಣಗಾರಿಕೆಯ ಅಂಶಗಳು ಜನಪದ ಚಿತ್ರಕಲೆಯ ವಿಭಾಗಕ್ಕೆ ಬರುತ್ತವೆ. ಇವಿಷ್ಟೇ ಅಲ್ಲದೆ ವಸತಿನೆಲೆಯ ಅಂಶಗಳು, ಉತ್ಪಾದನಾ ಸಂಬಂಧಿ ಚಟುವಟಿಕೆಗಳು, ಸಂಪ್ರದಾಯ ಆಚರಣೆಗಳ ಕಲಾತ್ಮಕ ಅಂಶಗಳು ಜನಪದ ಚಿತ್ರಕಲೆಯಲ್ಲಿ ಸೇರಿಹೋಗುತ್ತವೆ. ಇವೆಲ್ಲ ಒಂದರೊಳಗೊಂದು ಅಂತರಸಂಬಂಧ ಪಡೆದಿರುವುದರಿಂದ ಶಿಷ್ಟ ಚಿತ್ರಕಲೆಯಲ್ಲಿರುವ ಇಸಂಗಳಾಗಲಿ ವಾದವಿವಾದಗಳಾಗಲೀ, ವೈಯಕ್ತಿಕತೆಯಾಗಲೀ, ಸಂಕೀರ್ಣತೆಯಾಗಲೀ, ಬಣ್ಣ ರೇಖೆಗಳ ವಿನ್ಯಾಸದ ವೈಶಿಷ್ಟ್ಯವನ್ನಾಗಲೀ ಪ್ರತ್ಯೇಕ ಪ್ರತ್ಯೇಕವಾಗಿ ವಿಶ್ಲೇಷಿಸಲಾಗುವುದಿಲ್ಲ. ಇವೆಲ್ಲ ದುಡಿಮೆಯ ಸಂಬಂಧದಲ್ಲಿ ವ್ಯಕ್ತವಾಗುವುದರಿಂದ ಪ್ರತ್ಯೇಕತೆಯನ್ನು ಗುರುತಿಸಲಾಗುವುದಿಲ್ಲ.

ಉದಾಹರಣೆಗೆ ತಿಂಗಳು ಮಾಮನ ಪೂಜೆಯನ್ನು ತೆಗೆದುಕೊಳ್ಳೋಣ. ಮಳೆಬಾರದೆ ಇದ್ದಾಗ ಮಳೆರಾಯನನ್ನು ಕಳಿಸಿಕೊಡು ಎಂದು ಜನಪದರು ಮಳೆರಾಯನ ಒಡೆಯನಾದ ತಿಂಗಳು ಮಾಮ (ಚಂದ್ರ)ನನ್ನು ಬೇಡಿಕೊಳ್ಳುವ ಮತ್ತು ಮಳೆರಾಯನ ಬರವಿಗಾಗಿ ಕೈಕೊಳ್ಳುವ ಪೂಜೆ ಹಾಗೂ ಆಚರಣೆ. ತುಮಕೂರು ಹಾಸನ ಜಿಲ್ಲೆಗಳಲ್ಲಿ ವ್ಯಾಪಕವಾಗಿ, ಮಂಡ್ಯ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕ್ವಚಿತ್ತಾಗಿ ಕಂಡುಬರುವ ಈ ಆಚರಣೆಯನ್ನು ಸಾಮಾನ್ಯವಾಗಿ ಕಾರ್ತೀಕ ಮಾಸದವರೆಗಿನ ಶುಕ್ಲಪಕ್ಷದ ದಿನಗಳಲ್ಲಿ ಆಚರಿಸಲಾಗುತ್ತದೆ.

ಪೂಜೆಗೆ ಮುನ್ನ ಹಳ್ಳಿಯ ಹೆಂಗಸರು ಅಥವಾ ಮದುವೆಯಾಗದಿರುವ ಹೆಣ್ಣು ಮಕ್ಕಳು ಊರಿನ ದೇವಸ್ಥಾನದ ಮುಂಭಾಗದ ಅಂಗಳವನ್ನಾಗಲೀ ಅಥವಾ ಯಾವ ಕೇರಿಯಲ್ಲೋ ಇರುವ ದೊಡ್ಡ ಮನೆಯ ಅಂಗಳವನ್ನಾಗಲೀ ಗುಡಿಸಿ ಅಂಗಳವನ್ನು ಸಗಣಿಯಿಂದ ಸಾರಿಸಿ ಅನಂತರ ತೇರು, ಹಲುಬೆ, ನೇಗಿಲು, ಸರ್ಪ, ಹನುಮ, ಚಂದ್ರ ಮುಂತಾದ ಚಿತ್ರಗಳನ್ನು ರಂಗೋಲಿಯಿಂದ ಬರೆಯುತ್ತಾರೆ. ರಂಗೋಲಿಯಲ್ಲಿ

ಬರೆದ ಅರ್ಧಚಂದ್ರನ ಮುಂದೆ ಒಂದು ಮಣೆ ಹಾಗೂ ಅದರ ಮೇಲೊಂದು ಕಳಸವನ್ನು ಪೂರ್ವಾಭಿಮುಖಿ ವಾಗಿಟ್ಟು ತಿಂಗಳಮಾಮನ ಎಡೆಗೆ ಮುದ್ದೆ ಅಥವಾ ರೊಟ್ಟಿಯನ್ನಿಟ್ಟು ಕಾಯಿ ಒಡೆದು ಪೂಜಿಸುತ್ತಾರೆ. ಅನಂತರ ಹೆಂಗಸರು ತಿಂಗಳ ಮಾಮನ ಪದಗಳನ್ನು ಹಾಡುತ್ತಾರೆ. ೩, ೫, ೯ ಅಥವಾ ಹನ್ನೆರಡನೇ ದಿನದಲ್ಲಿ ತಿಂಗಳು ಮಾಮನನ್ನು ಬಿಡುವ ಕಾರ್ಯಕ್ರಮವಿರುತ್ತದೆ. ಆ ದಿನ ಇಬ್ಬರು ಹುಡುಗರನ್ನಾಗಲೀ ಅಥವಾ ಇಬ್ಬರು ಹುಡುಗಿಯರನ್ನಾಗಲೀ ಮದುಮಗ-ಮದುವಣಗಿತ್ತಿಯರಂತೆ ಸಿಂಗರಿಸಿ ಸೋಬಾನೆ ಹಾಡುತ್ತ ಮದುವೆ ಮಾಡಿಸುತ್ತಾರೆ. ಇದು ತಿಂಗಳು ಮಾಮನಿಗೆ ಮಾಡುವ ಮದುವೆಯ ಸಂಕೇತ. ಅನಂತರ ಆ ದಿನ ಪ್ರತಿಮನೆಯಿಂದ ಎತ್ತಿದ ಧವಸದಿಂದ ಕೆರೆಯ ಅಂಗಳದಲ್ಲಿ ಊರವರಿಗೆಲ್ಲ ಅಡುಗೆಮಾಡಿ ಪ್ರಸಾದ ನೀಡಿ ತಿಂಗಳು ಮಾಮನನ್ನು ವಿಸರ್ಜಿಸುತ್ತಾರೆ.

ಇಲ್ಲಿ ಅಂಗಳವನ್ನು ಗುಡಿಸಿ ಸಾರಿಸಿ ನಾನಾ ವಿಧವಾದ ವಿನ್ಯಾಸದ ರಂಗೋಲಿಬಿಡುವುದು ಚಿತ್ರಕಲೆಗೆ ಸಂಬಂಧಿಸಿದ್ದಾದರೆ ಹಾಡುಗಳನ್ನು ಹೇಳುವುದು ಜನಪದ ಸಂಗೀತಕ್ಕೆ ಸಂಬಂಧಿಸಿದ್ದಾಗಿದೆ. ತಿಂಗಳು ಮಾಮನಿಗೆ ಮಾಡುವ ಮದುವೆ ಆಗ ನಡೆಯುವ ವಿವಿಧ ವಿನೋದಾವಳಿಗಳು ದೃಶ್ಯಕಲೆಗೆ ಸಂಬಂಧಿಸಿದ ಪ್ರಹಸನವಾಗಿದೆ. ಅಲ್ಲಿ ಬಳಕೆಯಾಗಿರುವ ಕಳಸ, ರೊಟ್ಟಿ, ಮುದ್ದೆ, ಕಜ್ಜಾಯ ಇತ್ಯಾದಿ ವಸ್ತುಗಳು ಜೀವಪೋಷಕತೆಗೆ ಫಲವಂತಿಕೆಗೆ ಸಂಬಂಧಿಸಿದ್ದಾಗಿದೆ. ಒಟ್ಟಾರೆ ಆಚರಣೆ ಬದುಕಿನ ಸಮೃದ್ಧತೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿನ ರಂಗೋಲಿಯ ರೇಖೆಗಳಾಗಲೀ ವಿನ್ಯಾಸವಾಗಲೀ, ಅದರೊಳಗೆ ಬಿಡಿಸಲ್ಪಟ್ಟ ಆಕೃತಿಗಳಾಗಲೀ ಪ್ರತ್ಯೇಕ ವಿಶ್ಲೇಷಣೆಗೆ ಸಿಗದೆ ಒಟ್ಟಾಗಿ ಆಚರಣೆಯ ಸಮೃದ್ಧತೆಗೆ ಪೂರಕವಾಗುವಂತೆ ಸೇರಿಹೋಗುತ್ತದೆ. ರಂಗೋಲಿಯಲ್ಲಿ ಬಿಡಿಸಲಾಗುವ ತೇರು (ಬಂಡಿ), ಹಲಬೆ, ನೇಗಿಲು, ಬೇಸಾಯಕ್ಕೆ ಬೇಕಾಗಿರುವ ಸಲಕರಣೆಗಳು. ಮರಗಿಡ ಬಳ್ಳಿಗಳು ಬೇಸಾಯಕ್ಕೆ ಪೂರಕ ಸಾಮಗ್ರಿಗಳು. ಚಂದ್ರ, ಸರ್ಪ ಫಲವಂತಿಕೆಗೆ, ಹನುಮ, ರಕ್ಷಣೆಗೆ ಸಂಕೇತಗಳಾಗುವುದರಿಂದ ರಂಗೋಲಿ ಕೇವಲ ಅಲಂಕಾರದ ಅಥವಾ ಚಿತ್ರಕಲೆಯ ಮಾಧ್ಯಮವಾಗಿಲ್ಲ. ಅದೊಂದು ಆಚರಣೆಯ ಅವಿಭಾಜ್ಯ ಅಂಗವಾಗಿ, ಈ ಆಚರಣೆ ಜನಜೀವನದ ಭಾಗವಾಗಿ ಬಿಡುತ್ತದೆ.

ಇದೇ ರೀತಿ ಪ್ರತಿಯೊಂದು ಗ್ರಾಮದೇವತೆಯ ಅಥವಾ ಕುಲದೇವತೆಯ ಯಾವುದೇ ಆರಾಧನಾ ಸಂಪ್ರದಾಯವಿರಲಿ ಅಲ್ಲಿ ರಂಗೋಲಿ ಪ್ರಾಥಮಿಕ ಅವಶ್ಯಕತೆಯಾಗಿಬಿಡುತ್ತದೆ. ನಾಗಮಂಡಲ, ಕೊಂತಿಪೂಜೆ, ಕರಂಗೋಲು ಕುಣಿತ, ಸುಗ್ಗಿ ಕುಣಿತ, ನಲಿಕೆ ಕುಣಿತ, ಸಿದ್ಧ ವೇಷ ಮುಂತಾದ ಕಲೆಗಳಿಗೆ ಸಂಬಂಧಿಸಿದ ಕ್ಷಣಗಳಲ್ಲಿ ರಂಗೋಲಿ ಬಳಕೆಯಾಗುತ್ತದೆ. ಜನಪದ ಚಿತ್ರಕಲೆ ವಿಭಾಗದ ಹೆಚ್ಚು ವ್ಯಾಪಕವಾದ ಕಲಾ ಮಾಧ್ಯಮವೆಂದರೆ ರಂಗೋಲಿ. "ರಂಗಾನ ಮನಿ ಮುಂದೆ ರಂಗೋಲಿ ಹೂಡ್ಯಾರ । ರಂಗಾನ ಹಿಂದೆ ರಾಣ್ಯಾರು !" ಎಂದು ರಂಗೋಲಿಯ ಪಾವಿತ್ರ್ಯವನ್ನು ಜನಪದಗೀತೆ ವರ್ಣಿಸುತ್ತದೆ. ರಂಗೋಲಿ ಶುಭದ ಸಂಕೇತ ಎಂದು ಜನಪದ ನಂಬುತ್ತದೆ. ಮನೆಯ ಮುಂದೆ ಮತ್ತು ಮನೆಯ ಒಳಗೆ ರಂಗೋಲಿ ಬಿಡದೆ ಯಾವ ಸಂಪ್ರದಾಯ, ಪೂಜೆಯನ್ನು ಕೈಗೊಳ್ಳುವಂತಿಲ್ಲ. ರಂಗೋಲಿಯನ್ನು ಸಾಮಾನ್ಯವಾಗಿ ಹೆಂಗಸರೇ ಹಾಕುವುದಾದರೂ ಗಂಡಸರೂ ಕೆಲವು ವಿಶೇಷ ಸಂದರ್ಭಗಳಲ್ಲಿ ಹಾಕುತ್ತಾರೆ. ನಾಗಮಂಡಲದಲ್ಲಿ ವೈದ್ಯರೆಂಬ ಪಂಗಡದ ಗಂಡಸರು ಹಾಕುತ್ತಾರೆ. ಗೆರಟಿಗನಬೆಲೆಯಲ್ಲಿ ಗೌಡರ ಮದುವೆ ಸಂದರ್ಭದಲ್ಲಿ ರಂಗೋಲಿ ಬಿಡುವವರು ಗಂಡಸರಾಗಿರುತ್ತಾರೆ.

ಬಿಳಿಯ ರಂಗೋಲಿ ಪುಡಿ, ಸುದ್ದೆಮಣ್ಣು, ಕೆಮ್ಮಣ್ಣು, ಅಕ್ಕಿ ಹಿಟ್ಟಿನಲ್ಲಿ ರಂಗೋಲಿ ಬಿಡುತ್ತಾರೆ. ವಾಸದ ಮನೆಯ ಅಂಗಳದ ನೆಲವನ್ನು ಸಗಣಿಯಿಂದ ಸಾರಿಸಿ, ನೆಲದ ಅಂಚಿಗೆ ಗೋಡೆಗೆ ಹೊಂದಿದಂತೆ ಸುಣ್ಣ ಹಾಗೂ ಕೆಮ್ಮಣ್ಣಿನ ಪಟ್ಟಿಯನ್ನು ಒಂದಾದ ಮೇಲೊಂದರಂತೆ ಪರ್ಯಾಯವಾಗಿ ಎಳೆಯುತ್ತಾರೆ. ನೆಲದಿಂದ ಸ್ವಲ್ಪ ಎತ್ತರಕ್ಕೆ ಹುರಿಮಂಜು (ಕೆಮ್ಮಣ್ಣು)ವಿನಿಂದ ಅಲಂಕರಿಸಿದ ಗೋಡೆ ಸಗಣಿಯಿಂದ ಸಾರಿಸಿದ ಹಸಿರು ನೆಲ, ಅಂಚಿನ ಸುಣ್ಣ ಇತ್ಯಾದಿಗಳಿಂದ ರಂಗುರಂಗಾಗಿ ಕಾಣುತ್ತಿದ್ದರೆ ಹಸಿರು ನೆಲದ ಮೇಲೆ ಸುದ್ದೆ ಮತ್ತು ಕೆಮ್ಮಣ್ಣಿನ ರಂಗೋಲಿ ಕಣ್ಣಿಗೆ ಆಕರ್ಷಣೀಯವಾಗಿ ಇಂದಿಗೂ ಹಳ್ಳಿಗಳಲ್ಲಿ ಕಂಡುಬರುತ್ತದೆ.

ರಂಗೋಲಿಯಲ್ಲಿ ವಿವಿಧ ವಿನ್ಯಾಸಗಳಿರುತ್ತವೆ. ಮರಗಿಡ ಬಳ್ಳಿಗಳು, ಚೌಕಾಕಾರದ ರೇಖೆಗಳು, ತ್ರಿಕೋನ, ಅಷ್ಟಕೋನದ ವಿನ್ಯಾಸಗಳು, ಕೋನದ ತುದಿಗಳಲ್ಲಿ ಮಾವಿನ ಹಣ್ಣಿನಾಕಾರದ ವಿನ್ಯಾಸಗಳು, ಪಶು, ಪಕ್ಷಿಗಳು, ಹುಲಿ, ಸಿಂಹ, ಜಿಂಕೆ, ನವಿಲು, ಹಂಸಗಳು, ಲಕ್ಷ್ಮಿ, ಪಾರ್ವತಿ, ಸರಸ್ವತಿಯರ ಚಿತ್ರಗಳು, ಶಿವ, ವಿಷ್ಣು,

ಗಣೇಶ, ಕೃಷ್ಣ, ಇಂದ್ರ ಸೂರ್ಯ ಮುಂತಾದ ದೇವತೆಗಳು ಮತ್ತು ಹವಳರತ್ನದಂತಹ ಹರಳುಗಳ ವಿನ್ಯಾಸಗಳು, ಬೇಸಾಯದ ಉಪಕರಣಗಳು ವಾಸದ ಮನೆಯ ಆಕಾರ ಗುಡಿಸಲು, ಸಮುದ್ರ ಬೆಟ್ಟಗುಡ್ಡಗಳನ್ನು ಬಿಡಿಸುತ್ತಾರೆ. ಮೂಲತಃ ಧಾರ್ಮಿಕ ಕ್ರಿಯಾಚರಣೆಯ ಪಾವಿತ್ರ್ಯವಿದ್ದರೂ ಅಲಂಕರಣದ ಮನೋಭಾವ ರಂಗೋಲಿಯಲ್ಲಿ ಕಂಡುಬರುತ್ತದೆ.

ಹಚ್ಚೆ ಇನ್ನೊಂದು ಜನಪದ ಚಿತ್ರಕಲೆಯ ಪ್ರಕಾರ. ರಂಗೋಲಿಗೆ ನೆಲ ಬೇಕಾದರೆ ಹಚ್ಚೆಗೆ ಶರೀರ ಭಿತ್ತಿಯಾಗಿದೆ. ಮನುಷ್ಯನ ಕಡೆತನಕದ ಸಂಗಾತಿ ಹಚ್ಚೆ ಎಂಬುದನ್ನು ಎಲ್ಲ ಸಂಸ್ಕೃತಿಗಳಲ್ಲೂ ಕಾಣಬಹುದು. "ಸತ್ತಾರೆ ಸಮಕೂಟೆ ಮತ್ತೇನು ಬರಬಹುದು ಹಚ್ಚೇಯ ಬೊಟ್ಟು ಸುಲಿಹಲ್ಲು ಕಟ್ಟಿರೋ ತುರುಬು" ಎಂದು ಹಚ್ಚೆಯ ಹಾಡುಗಳಲ್ಲಿ ವರ್ಣನೆಯಿದೆ. "ಅತ್ತೆ ಬೈದರೆ ಒಪ್ಪು । ಮಾವ ಬೈದರೆ ಒಪ್ಪು । ಹಚ್ಚೇಯ ಬೊಟ್ಟು ಹಣೆಗೊಪ್ಪು । ತಂಗ್ಯವ್ವ ॥ ಚೊಚ್ಚಲ ಬಸರು ನಿನಗೊಪ್ಪು" ಎಂದು ಹಾಡಿ ಹೊಗಳಿದ್ದಾರೆ.

ಹಚ್ಚೆ ಅತ್ಯಂತ ಪ್ರಾಚೀನವಾದ ಅಲಂಕಾರದ ಸಂಗತಿಯಾಗಿದೆ. ಉಡುಪಿನ ಆವಿಷ್ಕಾರವಾಗದ ಕಾಲಘಟ್ಟದಲ್ಲಿ ಇಡೀ ದೇಹವನ್ನು ಹಚ್ಚೆಯಿಂದ ಮುಚ್ಚಿಕೊಂಡಿರುವಂತಹ ಉದಾಹರಣೆಗಳನ್ನು ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ನೀಡಿದ್ದಾರೆ. ಜಗತ್ತಿನ ಎಲ್ಲ ಭಾಗದ ಜನಾಂಗಗಳಲ್ಲೂ ಹಚ್ಚೆ ಬಗ್ಗೆ ಒಲವಿದೆ. ತಮಗೆ ಅತ್ಯಂತ ಪ್ರಿಯರಾದವರ ಹೆಸರನ್ನೋ ಗುರುತನ್ನೋ ಅಥವಾ ಚಿತ್ರವನ್ನೋ ಹಚ್ಚೆಯ ಮೂಲಕ ಬಿಡಿಸಿಕೊಂಡರೆ ಅವರು ಯಾವ ಕೇಡಿಗೂ ಒಳಗಾಗದೆ ದೀರ್ಘಾಯುಷಿಗಳಾಗುವರೆಂಬ ನಂಬಿಕೆಗಳಿವೆ.

ಕರ್ನಾಟಕದಲ್ಲಿ ಕೊರಮರು, ಕರೆಗಾರರು, ಜೆಸ್ತರು, ದೊಂಬರು, ಗೊಂಬೆರಾಮರು ತಮ್ಮ ಕುಲಕಸುಬುಗಳ ಜೊತೆಯಲ್ಲೇ ಹಚ್ಚೆ ಹುಯ್ಯುವುದನ್ನು ಉಪಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಇವರು ಬಳಸುವ ಉಪಕರಣಗಳೆಂದರೆ ಬಟ್ಟೆ ಹೊಲಿಯುವ ಸೂಜಿಗಳು. ಮೂರು, ಆರು, ಒಂಬತ್ತು ಸಂಖ್ಯೆಯ ಸೂಜಿಗಳನ್ನು ಗುಂಡಾಗಿ ಬರುವಂತೆ ಜೋಡಿಸಿ ಹೊರಭಾಗಕ್ಕೆ ಎರಡು ಕಬ್ಬಿಣದ ಪಟ್ಟಿ ಕಟ್ಟುತ್ತಾರೆ. ಇಂಥ ಗುಂಪುಸೂಜಿಗಳನ್ನಾಗಲೀ ಅಥವಾ ಒಂದು ಸೂಜಿಯನ್ನಾಗಲೀ ಬಳಸಿ ಹಾಡು ಹೇಳುತ್ತಾ ನೋವು ಗೊತ್ತಾಗದಂತೆ ಹಚ್ಚೆ ಹೊಯ್ಯುತ್ತಾರೆ.

ಹಚ್ಚೆಯ ಬಣ್ಣ ತಯಾರಿಸಲು ಲಭ್ಯವಿರುವ ಗಿಡಮೂಲಿಕೆ, ಬರೆಯುವ ಮಸಿ ಅರಿಷಿಣ ಔಡಲೆಣ್ಣೆಯನ್ನು ಬಳಸುತ್ತಾರೆ. ಕೆಲವರು ಬಳ್ಳಿ, ಕಾಯಿ, ಎಲೆಯ ರಸ ಮತ್ತು ಬೇರಿನ ರಸಗಳಿಂದ ಬಣ್ಣ ತಯಾರಿಸುತ್ತಾರೆ. ಈ ಬಣ್ಣಗಳು ಶಾಶ್ವತವಾಗಿ ಉಳಿಯುವುದೇ ಅಲ್ಲದೆ ದೇಹಕ್ಕೆ ಬರುವ ನಂಜನ್ನು ನಿವಾರಿಸುತ್ತವೆ. ಹಸಿರು ಮಿಶ್ರಿತ ಹಳದಿ ಬಣ್ಣ, ನೀಲಿಮಿಶ್ರಿತ ಕಪ್ಪುಬಣ್ಣ ಬರುವಂತಹ ಎಲೆ ಸೊಪ್ಪುಗಳನ್ನು ಬಳಸಿ ಇಂತಹ ಬಣ್ಣ ತಯಾರಿಸಿಕೊಳ್ಳುತ್ತಾರೆ.

ಕಣ್ಣಿಗೆ ಕಾಣುವಂತಿರುವ ದೇಹದ ಎಲ್ಲಾ ಭಾಗದ ಮೇಲೆ ಹಚ್ಚೆಯನ್ನು ಹುಯ್ಯಿಸಿಕೊಳ್ಳುತ್ತಾರೆ. ಅಂಗೈ, ಮುಂಗೈ, ಹಿಂಗೈ, ಮೊಳಕೈ, ತೋಳು, ಕೆನ್ನೆ, ಗಲ್ಲ, ಹಣೆ, ಹುಬ್ಬು, ಎದೆ, ನಡು, ತೊಡೆ, ನಿತಂಬ, ಮರ್ಮಾಂಗಗಳು, ಮೊಣಕಾಲು, ಮೀನಖಂಡ ಕಾಲಿನ ಮೇಲುಭಾಗ, ಹಿಮ್ಮಡಿ ಮುಂತಾದ ಹಲವಾರು ಸ್ಥಳಗಳ ಮೇಲೆ ಆ ಜಾಗಕ್ಕೇ ಒಪ್ಪುವಂತಹ ವಿಶಿಷ್ಟವಾದ ವಿನ್ಯಾಸದ ಹಚ್ಚೆಯನ್ನು ಹುಯ್ಯಿಸಿಕೊಳ್ಳುತ್ತಾರೆ.

ಕರ್ನಾಟಕದಲ್ಲಿ ಪ್ರಚಲಿತವಿರುವ ಹಚ್ಚೆ ಚಿತ್ರಗಳನ್ನು ಗಮನಿಸಿದಾಗ ಬಹುಪಾಲು ಚಿತ್ರಗಳು ಸರಳರೇಖಾ ವಿನ್ಯಾಸವನ್ನು ಹೊಂದಿವೆ. ಅಲಂಕಾರಕ್ಕಾಗಿ ಅಲ್ಲಲ್ಲಿ ವಕ್ರರೇಖೆಗಳನ್ನು ಬಳಸಿದ್ದರೂ ಸರಳರೇಖೆಗಳಿಂದಲೇ ಚಿತ್ರಗಳನ್ನು ಪೂರ್ಣಗೊಳಿಸಿದ್ದಾರೆ. ಹಚ್ಚೆಯ ಸೂಜಿಗಳು ಒಂದೇ ರೇಖೆಯಲ್ಲಿರುವುದರಿಂದ ಚಿತ್ರಗಳೂ ಸಾಮಾನ್ಯವಾಗಿ ಸರಳರೇಖೆಯಲ್ಲೇ ಸಾಗುತ್ತವೆ. ಸಾಮಾನ್ಯವಾಗಿ ಚಿತ್ರಗಳೆಲ್ಲವೂ ನಮ್ಮ ಸುತ್ತಮುತ್ತಲ ಪ್ರಕೃತಿಯಿಂದ ಆಯ್ದು ಮಾಡಿದವೇ ಆಗಿವೆ. (ಎಚ್.ಎಂ. ಮಹೇಶ್ವರಯ್ಯ ೧೯೮೮ : ೬೨). ಕೆಲವು ಚಿತ್ರಗಳು ಧಾರ್ಮಿಕ ಆಚರಣೆ ದೈವ ನಂಬಿಕೆಗಳ ಕುರುಹುಗಳಾಗಿಯೂ ಬಳಕೆಯಾಗಿವೆ.

ಹಚ್ಚೆಯ ನಮೂನೆಗಳು ವಿನ್ಯಾಸಗಳು ಹಲವಾರಿವೆ. ಜೋಗಿ ಜಡೆ, ನಾಣ್ಯದ ಸಾಲು, ಯಾಲಕ್ಕಿ ಸಾಲು, ಮಲ್ಲಿಗೆ ದಂಡೆ, ಚುಕ್ಕಿಗಳು, ಸೀತೆ ಸೆರಗು, ನಾಗಪ್ಪನ ವಿವಿಧ ನಮೂನೆಗಳು, ಪಾಲಕಿ, ನವಿಲುಗಳ

ನಮೂನೆಗಳು, ಗೌರಿಗಿಡ, ಈಶ್ವರಲಿಂಗು, ಗೌರಿಕಣ್ಣು, ಮುತ್ತಿನ ಮೆಲುಕು, ತೋಳುಚಪ್ಪರ, ತೊಂಡೆ ಚಪ್ಪರ, ಮುತ್ತಿನ ಬಳ್ಳಿ, ಚೇಳುಗಳ ವಿವಿಧ ನಮೂನೆಗಳು, ಮುತ್ತಿನಬಟ್ಟು, ಮುತ್ತಿನಾರುತಿ, ಪಾರಿಜಾತ, ಹೊನ್ನೆಮರ, ಕತ್ರಿಕೋಲು, ಮಾವಿನ ಎಲೆ, ಹೂವುಗಳ ನಮೂನೆ, ಮೀನು, ಶಂಖು, ಚಕ್ರ, ವಾಲಿಗುಪ್ಪಿ, ತಕ್ಕಡಿ, ತ್ರಿಶೂಲ ಹದ್ದಿನ ಚಿತ್ರ ಇತ್ಯಾದಿ. ಈ ಹಚ್ಚೆ ಕಲೆಯಲ್ಲೂ ಕಲ್ಪನೆಗಿಂತಲೂ ವಾಸ್ತವ ಬದುಕಿನಲ್ಲಿ ಕಂಡುಂಡ ಸಂಗತಿಗಳು ಅನುಭವಗಳ ಹಿನ್ನೆಲೆಯಲ್ಲಿಯೇ ಚಿತ್ರಬಿಡಿಸುವ ಕಲೆಗಾರಿಕೆ ಕಂಡುಬರುತ್ತದೆ.

ಕಾಡು ಪ್ರಾಣಿಗಳು ಅಥವಾ ದುಷ್ಟಪ್ರಾಣಿಗಳ ವೇಷ ಹಾಕಿ ಕುಣಿಯುವ ಜನಪದ ಕುಣಿತಕ್ಕೆ ಮೂಲಾಧಾರವಾಗಿರುವುದು ಜನಪದ ಚಿತ್ರಕಲೆ. ಹುಲಿವೇಷ ಸಿಂಹನೃತ್ಯ, ಕರಡಿ ಕುಣಿತ, ಪಾಳೆಯಗಾರರ ವೇಷ, ಸೋಮನ ಕುಣಿತ, ಕೊಂಡಮಾಮ, ಸಿದ್ದವೇಷ, ಬಹುರೂಪಿ ವೇಷಗಾರರು, ಹಗಲು ವೇಷ, ಆಂಜನೇಯನ ವೇಷ ಮುಂತಾದ ಬಿಡಿಬಿಡಿ ಕುಣಿತ ಕಲೆಗಳಿಗೆ ಜೀವ ತುಂಬುವುದು ಈ ಜನಪದ ಚಿತ್ರಕಲೆಯೇ. ಬರೀ ಮೈಗೆ ಆಯಾ ಪ್ರಾಣಿಯ ಚರ್ಮ ಅಥವಾ ಬಣ್ಣದ ರೀತಿಯಿಂತೆಯೇ ಬಣ್ಣಗಳಿಂದ ಸಿಂಗರಿಸಿಕೊಂಡು ತಮಟೆ ಅಥವಾ ಆ ಕಲೆಗೆ ಹೊಂದುವಂಥ ವಾದ್ಯದ ಗತ್ತಿಗೆ ಕುಣಿಯುವುದು ಜನಪದರ ಹವ್ಯಾಸ, ಹೆಚ್ಚುಕಡಿಮೆ ವೇಷಕಟ್ಟುವ ಪ್ರದರ್ಶನ ಕಲೆಗಳೆಲ್ಲಕ್ಕೂ ಚಿತ್ರಕಲೆ ಹೊಸ ಆಯಾಮ ನೀಡುತ್ತದೆ.

ಜನಪದ ಚಿತ್ರಕಲೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಕಲಾಪ್ರಕಾರಗಳೆಂದರೆ ಮೂಡಲಪಾಯ ಪಡುವಲಪಾಯ ಬಯಲಾಟ ಯಕ್ಷಗಾನಗಳು, ಭೂತಾರಾಧನೆ, ತೊಗಲುಗೊಂಬೆ ಮತ್ತು ಸೂತ್ರದ ಗೊಂಬೆಯಾಟಗಳು. ಬಿಡಿಬಿಡಿಯಾದ ವೇಷಕಟ್ಟುವ ಪ್ರದರ್ಶಕ ಕಲೆಗಳಿಗಿಂತ ಇನ್ನೂ ಹೆಚ್ಚು ಗಂಭೀರವಾಗಿ ತನ್ಮಯತೆಯಿಂದ ಇಲ್ಲಿ ಬಣ್ಣ ರೇಖೆಗಳನ್ನು ಅಭಿವ್ಯಕ್ತಿಸಲಾಗುತ್ತದೆ. ತೊಗಲುಗೊಂಬೆ ಪ್ರಕಾರವಂತೂ ಜನಪದ ಚಿತ್ರಕಲಾವಿದನಿಗೆ ತನ್ನೆಲ್ಲ ಅಭಿವ್ಯಕ್ತಿ ವೈವಿಧ್ಯಗಳನ್ನು ವ್ಯಕ್ತಪಡಿಸುವ ಒಂದು ಕ್ಯಾನ್‌ವಾಸ್. ಪೇಪರನ್ನು ಕಂಡುಕೊಳ್ಳದಿದ್ದ ಕಾಲದಲ್ಲಿ ಚರ್ಮ ಮತ್ತು ಬಟ್ಟೆಗಳೇ ಜನಪದ ಚಿತ್ರಕಾರರಿಗೆ ಕ್ಯಾನ್‌ವಾಸ್ ರೀತಿ ಬಳಕೆಗೆ ಬರುತ್ತಿದ್ದುದು.

ತೊಗಲುಗೊಂಬೆಯ ರಚನೆಗೆ ಜಿಂಕೆ ಅಥವಾ ಆಡಿನ ಚರ್ಮವನ್ನು ಉಪಯೋಗಿಸುತ್ತಾರೆ. ಆಡಿಗಿಂತ ಜಿಂಕೆಯ ಚರ್ಮ ಸುಕ್ಕುಗಟ್ಟದೆ ದೀರ್ಘಕಾಲ ಬಾಳಿಕೆಗೆ ಬರುವುದರಿಂದ ಜೊತೆಗೆ ರಾಮಾಯಣ ಮಹಾಭಾರತದ ಪ್ರಸಂಗಗಳನ್ನು ಜಿಂಕೆಯ ಚರ್ಮದಲ್ಲೇ ಮಾಡಬೇಕೆಂಬ ನಿಯಮವಿರುವುದರಿಂದ ಇದನ್ನೇ ಬಳಸುತ್ತಾರೆ. ಆದರೆ ಜಿಂಕೆಯ ಚರ್ಮ ದುರ್ಲಬವಾದುದರಿಂದ ಆಡಿನ ಚರ್ಮವನ್ನು ಇತ್ತೀಚೆಗೆ ಹೆಚ್ಚಾಗಿ ಬಳಸುತ್ತಾರೆ. ಆಳೆತ್ತರದ ಗೊಂಬೆಗಳ ರಚನೆಗೆ ಎಮ್ಮೆಯ ಚರ್ಮವನ್ನು ಬಳಸುತ್ತಾರೆ. ಚರ್ಮವನ್ನು ಹದಗೊಳಿಸುವುದರ ಮೂಲಕ ಅದನ್ನು ಪಾರದರ್ಶಕವನ್ನಾಗಿ ಮಾಡುತ್ತಾರೆ. ಅದರ ಮೇಲೆ ಬೇಕಾದ ಚಿತ್ರವನ್ನು ರೇಖೆಗಳ ಮೂಲಕ ಬಿಡಿಸಿ ಆಭರಣ, ಸೀರೆಯ ಅಂಚು, ರಥದ ಚಕ್ರ ಕಿರೀಟ ಇತ್ಯಾದಿ ಕುಸುರಿ ಕೆಲಸಗಳನ್ನು ಬಹಳ ಸೂಕ್ಷ್ಮವಾಗಿ ಮಾಡುತ್ತಾರೆ. ಅನಂತರ ಹದವರಿತ ಬಣ್ಣವನ್ನು ಹಾಕುತ್ತಾರೆ. ದೇವತಾ ಪಾತ್ರಗಳಿಗೆ ಹಳದಿ, ನಸುಕೆಂಪು, ನೀಲಿ ಬಣ್ಣವನ್ನೂ ಘೋರಪಾತ್ರಗಳಿಗೆ ಸಿಂಧೂರ, ಕಡುಕೆಂಪು, ಕಪ್ಪು, ಹಳದಿ ಬಣ್ಣಗಳನ್ನೂ ಹಾಕುತ್ತಾರೆ. ಗೊಂಬೆಗಳಿಗೆ ಪಾರ್ಶ್ವನೋಟ ಮಾತ್ರವಿರುವುದರಿಂದ ಚರ್ಮದ ಎರಡು ಬದಿಗೂ ಚಿತ್ರ ಬಿಡಿಸಿ ಬಣ್ಣ ತುಂಬುತ್ತಾರೆ.

ಸೂತ್ರದ ಗೊಂಬೆಯಾಟಗಳಲ್ಲಿ ಚರ್ಮದ ಬದಲಿಗೆ ಮರದ ಬೊಂಬೆ ಬಳಕೆಯಾಗುತ್ತಿದೆ. ಮರದ ಮುಖಕ್ಕೆ ಎದುರು ನೋಟ ಸಾಧ್ಯವಿರುವುದರಿಂದ ಮನುಷ್ಯನ ಅಲಂಕಾರದ ರೀತಿಯಲ್ಲಿಯೇ ಮರದ ಅಲಂಕಾರ ಮಾಡಿ ಗೊಂಬೆಗಳನ್ನು ತಯಾರು ಮಾಡಲಾಗುತ್ತದೆ. ಎರಡು ಅಥವಾ ಮೂರು ಅಡಿ ಎತ್ತರವಿರುವ ಹಗುರ ಮತ್ತು ಹೆಚ್ಚು ಬಾಳಿಕೆ ಬರುವ ಮರಗಳಿಂದ ಗೊಂಬೆ ತಯಾರಿಸುತ್ತಾರೆ. ಮನುಷ್ಯರ ಅಂಗಾಗಳಂತೆ ಗೊಂಬೆಗಳ ಅಂಗಾಂಗಗಳನ್ನು ಪ್ರತ್ಯೇಕವಾಗಿ ವಿನ್ಯಾಸಗೊಳಿಸಿ ಕೀಲಿಗಳ ಸಹಾಯದಿಂದ ಜೋಡಿಸಿರುತ್ತಾರೆ. ಅನಂತರ ಐದು ಆರು ಸೂತ್ರಗಳನ್ನು ಮಂಡಿ, ಹಸ್ತ ಮತ್ತು ತಲೆಯ ಭಾಗಗಳಿಗೆ ಜೋಡಿಸಿ, ಒಂದು ಅಡಿ ಉದ್ದವಿರುವ ಬಿದಿರ ಕಡ್ಡಿಯ ತುದಿಗಳಿಗೆ ಸೇರಿಸಿ ಅದನ್ನು ಕೈಯಲ್ಲಿ ಹಿಡಿದುಕೊಂಡು ಕುಣಿಸುತ್ತಾರೆ.

ರಾಜನ ಪಾತ್ರಗಳಿಗೆ ಹೆಚ್ಚಾಗಿ ಹಳದಿ ಬಣ್ಣವನ್ನು ಉಪಯೋಗಿಸಿ ಇದರ ಜೊತೆಗೆ ಕೆಂಪು ಹಾಗೂ ಕಪ್ಪು ಬಣ್ಣವನ್ನು ಹದವರಿತು ಉಪಯೋಗಿಸುತ್ತಾರೆ. ರಾಕ್ಷಸ ಪಾತ್ರಗಳಿಗೆ ಕಪ್ಪು ಘೋರ ಪಾತ್ರಗಳಿಗೆ ಕಡುಕೆಂಪು ಬಣ್ಣ ಉಪಯೋಗಿಸುತ್ತಾರೆ. ತೊಗಲುಗೊಂಬೆಯಾಟ ಹಾಗೂ ಸೂತ್ರದ ಗೊಂಬೆಯಾಟದ ರೀತಿಯಲ್ಲೇ ಮಾನವ ರಂಗಭೂಮಿಯ ದೊಡ್ಡಾಟ ಬಯಲಾಟ ಯಕ್ಷಗಾನಗಳ ಮುಖವರ್ಣಿಕೆ, ಬಣ್ಣಗಾರಿಕೆ ವೇಷಭೂಷಣಗಳನ್ನು ಮಾಡಿಕೊಳ್ಳುತ್ತಾರೆ. ವೇಷಭೂಷಣ ಬಣ್ಣಗಾರಿಕೆಯೆಲ್ಲ ಚಿತ್ರಕಲೆಯ ಭಾಗವಾಗಿ ಬರುತ್ತದೆ.

ಕರಾವಳಿ ಜಿಲ್ಲೆಗಳಲ್ಲಿ ಮಲೆನಾಡಿನ ಕೆಲಭಾಗಗಳಲ್ಲಿ ಕಂಡುಬರುವ ಭೂತಾರಾಧನಾ ಸಂಪ್ರದಾಯ ಜನಪದ ಚಿತ್ರಕಲೆಯ ಮತ್ತೊಂದು ಮಜಲನ್ನು ತೋರಿಸುವಂತಹದ್ದು. ಭಯ ಹುಟ್ಟಿಸುವಂತಹ ಮುಖವರ್ಣಿಕೆಗಳಿಂದ ಭೂತದ ವೇಷಕಟ್ಟಿ ಪಾಡ್ದನಗಳನ್ನು ಹಾಡಿಕೊಂಡು ಅತಿಮಾನುಷ ಶಕ್ತಿಯನ್ನು ಆವಾಹಿಸಿಕೊಂಡು ಜನರ ಬೇಕು ಬೇಡಗಳನ್ನು ಈಡೇರಿಸುವುದು. ಭೂತಗಳು ಅತಿಮಾನುಷ ಶಕ್ತಿಯಾದುದರಿಂದ ಮನುಷ್ಯನ ಅಳತೆಯ ಎರಡು ಪಟ್ಟು ದೊಡ್ಡದಾಗಿ ಕಾಣುವಂತಹ ರೀತಿಯಲ್ಲಿ ಮುಖವರ್ಣಿಕೆ ಮಾಡಿಕೊಳ್ಳುತ್ತಾರೆ. ಕಡುಕೆಂಪು, ಕಡುನೀಲಿ, ಕಪ್ಪು ಬಿಳುಪು ಬಣ್ಣಗಳನ್ನು ಮುಖವರ್ಣಿಕೆಗೆ ಬಳಸಿಕೊಳ್ಳಲಾಗುತ್ತದೆ. ಇಲ್ಲಿ ರೇಖೆಗಳಿವೆ, ಬಣ್ಣಗಳಿವೆ. ರೇಖೆಗಳಲ್ಲಿ ಸರಳ ಹಾಗೂ ವಕ್ರರೇಖೆಗಳೆರಡೂ ಬಳಕೆಯಾಗುತ್ತವೆ. ಹಣೆಯ ಭಾಗವನ್ನು ಪ್ರಧಾನವಾಗಿ ಅಲಂಕರಿಸಿಕೊಳ್ಳಲಾಗುತ್ತದೆ. ಮೂಗಿನ ತುದಿ ಮತ್ತು ತುಟಿಯನ್ನು ಕೆಂಪುಬಣ್ಣದ ಲೇಪನಕ್ಕೆ ಗಲ್ಲವನ್ನು ಮುದ್ರೆಯ ಚಿತ್ರಣಕ್ಕೆ ಬಳಸಿಕೊಳ್ಳುತ್ತಾರೆ. ಕಣ್ಣುಗಳ ಸುತ್ತ ಕಪ್ಪು, ಕೆಂಪು ರೇಖೆಗಳನ್ನೆಳೆದು ಕಣ್ಣಿನ ಕೆಳಗೆ ಎರಡು ಗಲ್ಲಗಳ ಮೇಲೆ ಕೆಂಪು ಬಿಳಿ ಮುದ್ರೆ ಬರೆದು, ಗಡ್ಡ ಬಿಡಿಸಿ ಕಿವಿಯ ಬದಿಗಳಿಂದ ಮುಖದ ವಿಸ್ತಾರದ ಒಂದು ಗಡಿರೇಖೆಯಾಗಿ ಕಪ್ಪು ಅಥವಾ ಕೆಂಪು ರೇಖೆಯನ್ನು ಎಳೆದು ಚುಕ್ಕಿಯ ಸಾಲನ್ನು ಇಡುವಷ್ಟು ಹೊತ್ತಿಗೆ ಬಣ್ಣಗಾರಿಕೆ ಮುಗಿಯುತ್ತದೆ. ಅದ್ಭುತ, ಭಯಾನಕ ರಸಗಳೆರಡೂ ಒಡಮೂಡುವಂತೆ ಭೂತಗಳ ಬಣ್ಣಗಾರಿಕೆ ಕೆಲಸ ಮಾಡುತ್ತದೆ. ಇಲ್ಲಿ ಮನುಷ್ಯನ ವರ್ತನೆಗಳನ್ನು ವೈಭವೀಕರಿಸಲಾಗುತ್ತದೆ.

ಜನಪದ ಕಲೆಗಳ ವಾದ್ಯಗಳ ಮೇಲೆ, ಕಲಾವಿದರ ಬಟ್ಟೆಗಳ ಮೇಲೆ ಕಸೂತಿಗಳ ಮೇಲೆ, ಮೈಮೇಲೆ ಜನಪದ ಚಿತ್ರಕಲೆ ಒಡಮೂಡುತ್ತಿರುತ್ತದೆ. ಜನಪದ ಕಲೆಗಳೆಲ್ಲವೂ ಸಾಮೂಹಿಕ ಹಿತಾಸಕ್ತಿಯ ಆಶಯಗಳನ್ನು ಉಳ್ಳವಾದ್ದರಿಂದ ಚಿತ್ರಕಲೆಯಲ್ಲಿಯೂ ಅದೇ ಆಶಯಗಳು ಒಡಮೂಡಿವೆ. ಆರಂಭ ಕಾಲದ ಮಾನವಾಕೃತಿ ಕೈಕೈಹಿಡಿದು ನರ್ತನ ಮಾಡುವಂತಹ ಚಿತ್ರಗಳೇ ಇಂದಿನ ಜನಪದ ಪ್ರದರ್ಶಕ ಕಲೆಗಳ ಮೇಲೆ ಪ್ರಭಾವ ಬೀರಿ ಕೈಕೈ ಹಿಡಿದುಕೊಂಡು ಸಹಕಾರ ತತ್ವದಿಂದ ಮುನ್ನಡೆಯಬೇಕೆಂಬ ಸಂದೇಶ ಸಾರುತ್ತಿವೆ. ಮನುಷ್ಯನ ದಿನನಿತ್ಯದ ಒಡನಾಟದಲ್ಲಿ ಕಂಡುಬರುವ ಸಂಗತಿಗಳೆಲ್ಲ ಜನಪದ ಚಿತ್ರಕಲೆಯಲ್ಲಿ ಅಭಿವ್ಯಕ್ತಿ ಪಡೆದಿವೆ.

ಜನಪದ ಕ್ಷೇತ್ರದ ಯಾವುದೇ ಕಲೆಯಾಗಲೀ ಅದರಲ್ಲಿ ಸಾಮೂಹಿಕ ಭಾಗವಹಿಸುವಿಕೆ, ಸಾಮೂಹಿಕ ಒಡನಾಟ, ಸಾಮೂಹಿಕ ಹಿತಾಸಕ್ತಿ ಇರುತ್ತದೆ. Live and let live ಎಂಬ ತತ್ವ ಎಲ್ಲ ಜನಪದಕಲೆಗಳಲ್ಲೂ ಅಂತರ್ಗತವಾಗಿರುತ್ತದೆ. ಗ್ರಾಮದ ಕೆಲಸಗಳನ್ನೆಲ್ಲ ಸಾಮೂಹಿಕವಾಗಿ ಮಾಡಬೇಕು ಎಂಬುದು ಸಂಪ್ರದಾಯವಾಗಿರುವುದರಿಂದ ಸೃಜನಶೀಲಕಲೆಗಳಾಗಲೀ ಸೃಜನೇತರ ಕೆಲಸಗಳಾಗಲೀ ಸಾಮೂಹಿಕ ಆಶಯಗಳನ್ನು ಪ್ರತಿಬಿಂಬಿಸುತ್ತಿವೆ. ಕೆಲಸ ಮತ್ತು ಕಲೆ ಎರಡರಲ್ಲೂ ವ್ಯತ್ಯಾಸವಿಲ್ಲದೆ "ಕೆಲಸವೇ ಕಲೆ"ಯಾಗಿರುವುದರಿಂದ ಜನಪದ ಚಿತ್ರಕಲೆಯಲ್ಲಿ ಅಂದಂದಿನ ಜನಜೀವನ ಅಭಿವ್ಯಕ್ತಗೊಂಡಿದೆ.

ಸಹಾಯಕ ಸಾಹಿತ್ಯ

* ಗಿರಡ್ಡಿ ಗೋವಿಂದರಾಜ : ೧೯೮೯, ಸಾಹಿತ್ಯ ವಿಮರ್ಶೆ ೧೯೮೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ವಾರ್ಷಿಕ ಸಂಕಲನ, ಬೆಂಗಳೂರು
* ಡಾ. ಎಚ್.ಎಂ. ಮಹೇಶ್ವರಯ್ಯ : ೧೯೮೮, ಹಚ್ಚೆ : ಒಂದು ಜನಪದ ಕಲೆ, ಐಬಿಎಚ್ ಪ್ರಕಾಶನ, ಬೆಂಗಳೂರು
* ಡಾ. ಶಿವರಾಮ ಕಾರಂತ : ೧೯೮೨, ಕಲೆಯ ದರ್ಶನ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು

❑

೬೯೩, ೨ನೇ ಮಹಡಿ, ಹೆಬ್ಬಾಳ ಫೈನಾನ್ಸ್ ಮೇಲೆ, ೨ನೇ ಮೈನ್, ಹೆಬ್ಬಾಳ, ಬೆಂಗಳೂರು ೫೬೦ ೦೨೪

ಆರು ಪುಸ್ತಕಗಳ ಇಣುಕುನೋಟ

ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧೀ ಕೇಂದ್ರವು ಭಾರತೀಯ ಧರ್ಮ ಮತ್ತು ಸಾಹಿತ್ಯದಲ್ಲಿನ ಮಾನವೀಯ ಮೌಲ್ಯಗಳನ್ನು ಎತ್ತಿ ತೋರಿಸುವ ಕೃತಿಗಳನ್ನು ಪ್ರಕಟಿಸುತ್ತಿದೆ. ಈ ಸರಣಿಯಲ್ಲಿ ಗಣಿತ-ಇತಿಹಾಸ ಶಾಸ್ತ್ರಜ್ಞ ಡಾ॥ ಎಸ್. ಬಾಲಚಂದ್ರರಾವ್ ಅವರು ರಚಿಸಿರುವ ಮೂರು (ಗಣಿತ ಶಾಸ್ತ್ರಕ್ಕೆ ಸಂಬಂಧಿಸಿದ) ಕೃತಿಗಳ ಇಣುಕುನೋಟ ಇಲ್ಲಿದೆ.

ಭಾರತೀಯ ಖಗೋಳ ಶಾಸ್ತ್ರ : ಕ್ರಿ.ಪೂ. ೧೨ನೇ ಶತಮಾನದ ಹೊತ್ತಿಗೇ ವೇದಾಂಗ ಜ್ಯೋತಿಷವು ಖಗೋಲಶಾಸ್ತ್ರದ ಜ್ಞಾನದ ದಾಖಲೆಯಾಗಿ ಅಸ್ತಿತ್ವದಲ್ಲಿತ್ತು. ವೇದಕಾಲದ ಜನರ ಸರಳ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಆರಂಭವಾದ ನಕ್ಷತ್ರ ಪದ್ಧತಿ, ಕಾಲನಿರ್ಣಯ ಮುಂತಾದವು ಬರಬರುತ್ತಾ ಗ್ರಹಗಳ ಸ್ಫುಟಚಲನೆ, ಗ್ರಹಣಗಳ ಲೆಕ್ಕಾಚಾರ, ಪ್ರೌಢ ಖಗೋಳ ಸಿದ್ಧಾಂತಗಳೇ ಅಲ್ಲದೆ ವೀಕ್ಷಣೆಯ ಉಪಕರಣಗಳ ರಚನೆ ಮುಂತಾದ ದಿಕ್ಕುಗಳಲ್ಲಿ ಖಗೋಳಶಾಸ್ತ್ರವು ಭಾರತದಲ್ಲಿ ಬೆಳೆಯತೊಡಗಿತು. ವೇದವೇದಾಂಗ ಜ್ಯೋತಿಷದಿಂದ ಆರಂಭಿಸಿ ಭಾರತೀಯ ಖಗೋಲಸಿದ್ಧಾಂತಗಳತ್ತ ಸ್ಥೂಲ ನೋಟ ಬೀರಿ, ಆರ್ಯಭಟನ ಕಾಲ, ದೇಶ, ಕಾಣ್ಕೆಗಳನ್ನು ವಿವರಿಸುತ್ತಾ ಮುಂದುವರೆಯುವ ಈ ಕೃತಿಯಲ್ಲಿ ಚಾಂದ್ರಮಾನ-ಸೌರಮಾನ ಪದ್ಧತಿಗಳು, ತಿಥಿ, ವಾರ, ನಕ್ಷತ್ರ, ಯೋಗ, ಕರಣ ಎಂಬ 'ಪಂಚಾಂಗ'ದ ಐದು ಅಂಗಗಳು ಮುಂತಾದ ಪರಿಕಲ್ಪನೆಗಳನ್ನು ವಿವರಿಸಲಾಗಿದೆ. ಗ್ರಹಣಗಳನ್ನು ಕುರಿತ ಗಣಿತ ಶಾಸ್ತ್ರೀಯ ಚಿಂತನೆಗಳೂ ಇಲ್ಲಿವೆ.

ಆರ್ಯಭಟ : ಭಾರತದ ಉದ್ದಾಮ ಖಗೋಲಶಾಸ್ತ್ರಕಾರನಾದ ಆರ್ಯಭಟನ ಹಾಗೂ ಅವನ ಕಾಣ್ಕೆಯ ವಿವರ ಮಾಹಿತಿ ನೀಡುವ ಈ ಪುಸ್ತಕ ಖಗೋಲಶಾಸ್ತ್ರದ ಐತಿಹಾಸಿಕ ಹಿನ್ನೆಲೆಯಿಂದ ಆರಂಭವಾಗುತ್ತದೆ. ಕ್ರಿ.ಪೂ. ೧೨ನೇ ಶತಮಾನದಲ್ಲೇ ವೇದಾಂಗ ಜ್ಯೋತಿಷ ಅಸ್ತಿತ್ವದಲ್ಲಿದ್ದರೂ ಕ್ರಿ.ಶ. ೫ನೇ ಶತಮಾನದಿಂದ ೧೯-೨೦ನೇ ಶತಮಾನದವರೆಗೂ ಭಾರತದಲ್ಲಿ ಗಣಿತಜ್ಞರ ಪರಂಪರೆ ನಿಚ್ಚಳವಾಗಿತ್ತು. ಈ ಪರಂಪರೆಯಲ್ಲಿ ಖಗೋಳಶಾಸ್ತ್ರಕ್ಕೆ ವೈಜ್ಞಾನಿಕ ತಳಹದಿ ಹಾಕಿಕೊಟ್ಟವನು ಆರ್ಯಭಟ. ಕ್ರಿ.ಶ. ೪೭೬ರಲ್ಲಿ ಜನಿಸಿದ ಆರ್ಯಭಟನು ತನ್ನ ೨೩ನೇ ವಯಸ್ಸಿನಲ್ಲಿ ರಚಿಸಿದ 'ಆರ್ಯಭಟೀಯಂ' ಒಂದು ಅದ್ಭುತ ಗಣಿತಗ್ರಂಥ. ಆರ್ಯಭಟನು ಪಾಟಲೀಪುತ್ರದವನು. ಖಗೋಲಶಾಸ್ತ್ರಕ್ಕೆ ಅವನು ನೀಡಿದ ಕೊಡುಗೆಗಳನ್ನು ತಿಳಿಸುತ್ತಾ ಅವುಗಳನ್ನು ಶಾಸ್ತ್ರೀಯ ರೀತಿಯಲ್ಲಿ ಈ ಕೃತಿಯು ಪರಿಶೀಲಿಸುತ್ತದೆ.

π(ಪೈ)ನ ಬೆಲೆಯನ್ನು ನಾಲ್ಕು ದಶಮಾಂಶ ಸ್ಥಾನಗಳವರೆಗೆ ನಿಖರವಾಗಿ (ಅಂದರೆ ೩.೧೪೧೬ ಎಂದು) ಕೊಡುವುದರ ಜತೆಗೆ ಆ ಬೆಲೆಯು 'ಆಸನ್ನ' (ಹತ್ತಿರದ ಬೆಲೆ - approximate) ಎಂದು ಹೇಳಿದ್ದು ಆರ್ಯಭಟನ ಮುಖ್ಯ ಸಾಧನೆಗಳಲ್ಲಿ ಒಂದು.

ಭೂಮಿಯು ಗುಂಡಗಿದೆಯೆಂದೂ (ಭೂಗೋಲಃ ಸರ್ವತೋ ವೃತ್ತಃ), ತನ್ನ ಅಕ್ಷದ ಮೇಲಿನ (ಭೂಮಿಯ) ದೈನಂದಿನ ಪರಿಭ್ರಮಣದಿಂದ ಸೂರ್ಯೋದಯಾಸ್ತಗಳಾಗುವುದೆಂಬ ಸತ್ಯವನ್ನು ಗೆಲಿಲಿಯೋಗಿಂತ ೧೦೦೦ ವರ್ಷಗಳ ಹಿಂದಿನ 'ಆರ್ಯಭಟೀಯಂ'ನಲ್ಲಿ ಎತ್ತಿ ತೋರಿಸಲಾಗಿದೆ. ಗ್ರಹಣಗಳ ಸ್ಪಷ್ಟ ಕಾರಣಗಳನ್ನು ಆರ್ಯಭಟ ವೈಜ್ಞಾನಿಕವಾಗಿ ವಿವರಿಸಿದ. ಗಣಿತ ಸೂತ್ರಗಳು ಹಾಗೂ ಜ್ಯಾಮಿತೀಯ ರಚನೆಗಳು 'ಆರ್ಯಭಟ'ವನ್ನು ಪ್ರೌಢವಾಗಿಸಿವೆ.

ಗಣಿತಶಾಸ್ತ್ರದ ಪ್ರವರ್ತಕರು : ಪ್ರೌಢ ಗಣಿತದ ಅಧ್ಯಯನ ಹಾಗೂ ಅಧ್ಯಾಪನದಲ್ಲಿ ತೊಡಗಿಕೊಂಡಿರುವ ಓದುವರ್ಗಕ್ಕೆ ವಿಶ್ವದ ಖ್ಯಾತ ಗಣಿತಜ್ಞರು ಹಾಗೂ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿಕೊಡುವ ಉದ್ದೇಶದಿಂದ ಬರೆಯಲಾದ ಈ ಕೃತಿಯಲ್ಲಿ ೩೩ ಲೇಖನಗಳಿವೆ. ವೇದಕಾಲೀನ ಗಣಿತ, ಪೈಥಾಗೊರಾಸ್, ಪ್ಲೇಟೋ, ಯೂಕ್ಲಿಡ್ ಮುಂತಾದ ಪ್ರಾಚೀನ ಗ್ರೀಕ್ ಗಣಿತಜ್ಞರು, ಆರ್ಯಭಟ, ಭಾಸ್ಕರ, ಬ್ರಹ್ಮಗುಪ್ತನೇ ಮೊದಲಾದ ಭಾರತೀಯ ಗಣಿತಜ್ಞರು, ಕೆಪ್ಲರ್, ಡೆಕಾರ್ಟೆ, ನ್ಯೂಟನ್, ಲೀಬ್ನಿಸ್, ಆಯ್ಲರ್ ಮತ್ತಿತರ ಪಾಶ್ಚಾತ್ಯ ಗಣಿತಜ್ಞರನ್ನು ಕುರಿತ ಲೇಖನಗಳು ಇದರಲ್ಲಿ ಸೇರಿವೆ. 'ಕೇರಳದ ಗಣಿತಜ್ಞರ ಅದ್ಭುತ ಸಾಧನೆ' ಲೇಖನದಲ್ಲಿ 'ಕಟಪಯಾದಿ' ಎಂಬ ಅಕ್ಷರ-ಸಂಖ್ಯಾ ಪದ್ಧತಿಯ ಬಗ್ಗೆ ತಿಳಿಸಿರುವ ಸಂಗತಿ ರೋಚಕವಾಗಿದೆ. ಕೊನೆಯ ಲೇಖನದಲ್ಲಿ ವಿಜ್ಞಾನವನ್ನು ತತ್ತ್ವಜ್ಞಾನದ ಅಂಚಿಗೆ ಕೊಂಡೊಯ್ಯುವ 'ಅನಂತ' (infinity)ದ

ವಿಸ್ಮಯವನ್ನು ಕುತೂಹಲಕಾರಿಯಾಗಿ ಪರಿಚಯ ಮಾಡಿಕೊಡಲಾಗಿದೆ. ಸಾಮಾನ್ಯ ಓದುಗರೂ ಈ ಕೃತಿಯನ್ನು ಓದಿ ಮೆಚ್ಚಲು ಸಾಧ್ಯವಾದರೂ ಪ್ರೌಢಗಣಿತದ ಪರಿಚಯವುಳ್ಳವರನ್ನು ಇದು ಮತ್ತಷ್ಟು ರಂಜಿಸುವುದು ನಿಜ.

ಈ ಮೂರು ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಸೇರ್ಪಡೆಯಾಗುತ್ತಿರುವುದು ಸ್ವಾಗತಾರ್ಹ.

ಬಿ.ಎಸ್. ಚಂದ್ರಶೇಖರ್

---

೫೯. ಬೆಳಗು, ೯ನೇ ಕ್ರಾಸ್. ೬ನೇ ಮೈನ್, ಆವಲಹಳ್ಳಿ ಬಡಾವಣೆ,
ಬನಶಂಕರಿ ೩ನೇ ಘಟ್ಟ, ಬೆಂಗಳೂರು ೫೬೦ ೦೮೫ . ☐

ಭಾರತೀಯ ವಿದ್ಯಾಭವನ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧೀ ಕೇಂದ್ರ ಪ್ರಕಟಿಸಿರುವ ಮೂರು ಕೃತಿಗಳು ಇಲ್ಲಿವೆ. ಅವುಗಳಲ್ಲಿ ಎರಡು ಪ್ರೊ. ಎನ್. ಕೃಷ್ಣಸ್ವಾಮಿಯವರು ಬರೆದವುಗಳ ಅನುವಾದಗಳು.

ಒಂದು, 'Mahatma the sage of Scientific age', ಎನ್ನುವ ಅವರ ಇಂಗ್ಲಿಷ್ ಪುಸ್ತಕದ 'ಮಹಾತ್ಮ' ಎಂಬ ಶೀರ್ಷಿಕೆಯ, ಅವರೇ ಸಿದ್ಧಪಡಿಸಿದ ಕನ್ನಡ ರೂಪ. ಕನ್ನಡದ ಪುಸ್ತಕದಲ್ಲಿ ಸ್ವಲ್ಪ ಸುಧಾರಿತ ಬದಲಾವಣೆಗಳನ್ನು ತಂದಿದ್ದಾರೆ. ಈ ಕೃತಿಗಳಲ್ಲಿ ಗಾಂಧೀಜಿಯವರನ್ನು 'ವಿಜ್ಞಾನಯುಗದ ಪ್ರಾಜ್ಞ' ಎಂದು ಬಣ್ಣಿಸಿದ್ದಾರೆ. ಇದರಲ್ಲಿ ಗಾಂಧೀಜಿಯವರ ಸತ್ಯನಿಷ್ಠೆ, ನಿರಂತರ ಅಪ್ರಮತ್ತತೆ, ಸೋಲರಿಯದ ಇಚ್ಛಾಶಕ್ತಿಗಳು ನಿಚ್ಚಳವಾಗಿ ಮೂಡಿಬಂದಿವೆ. ಇವು ಎಲ್ಲರಿಗೂ ಅಪೇಕ್ಷಣೀಯವಾದ ಮೌಲ್ಯಗಳು. ನೂರೆಂಟು ಚಿಕ್ಕಚಿಕ್ಕ ಟಿಪ್ಪಣಿಗಳನ್ನು ಜೋಡಿಸಿದ್ದಾರೆ. ಹಾಗೆ ಸುಂದರವಾದ ಕಥಾನಕ ರೂಪವನ್ನು ಇದು ಪಡೆದುಕೊಂಡಿದೆ. ಹೇಳಿರುವ ವಿಷಯಗಳು ಅಧಿಕೃತ. ಭಾಷೆ ನೇರ ಮತ್ತು ಸರಳ.

ಇನ್ನೊಂದು, ಇವರದೇ 'Hundred Facets of Vinoba', ಎಂಬ ಪುಸ್ತಕದ 'ವಿನೋಬಾ ನೂರು ಮುಖಗಳು' ಎಂಬ ಕನ್ನಡ ಅನುವಾದ. ಅನುವಾದದ ಕೆಲಸವನ್ನು ಅವರ ಅಕ್ಕ ಸಾವಿತ್ರಿ ಶ್ರೀಕಂಠಯ್ಯ ಅನುಪಮವಾಗಿ ಮಾಡಿದ್ದಾರೆ. ನಿರೂಪಣೆ ಸರಳಸುಂದರವಾಗಿದೆ.

ವಿನೋಬಾ, ಗಾಂಧೀಜಿಯ ಶಿಷ್ಯರು ಮತ್ತು 'ಗೀತಾಪ್ರವಚನ'ದಂತಹ ಕೃತಿಗಳ ಕರ್ತೃ. ಧರ್ಮಗಳ ವ್ಯಾಖ್ಯಾನಕಾರ, ಸಿದ್ಧಪುರುಷ, ಸರ್ವೋದಯ-ಭೂದಾನ ಚಳುವಳಿಗಳ ನಾಯಕ ಮತ್ತು ಆಧ್ಯಾತ್ಮ ಗುರು. ಈ ಎಲ್ಲ ಮುಖಗಳ ನಿರೂಪಣೆಯನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಲೇಖಕರು ಸ್ವಯಂ ವಿಜ್ಞಾನಿ ಮತ್ತು ಗಾಂಧೀಇಸಂ ಕುರಿತಂತೆ ವಿದ್ವಾಂಸರು. ಆದ್ದರಿಂದಲೇ, ಸಂಗ್ರಹವಾಗಿದ್ದರೂ ಅಧಿಕೃತವಾಗಿ ವಿಷಯ ನಿರೂಪಣೆ ಮಾಡಿದ್ದಾರೆ.

ಸರಳವಾದ ಚಿಕ್ಕವಾಕ್ಯಗಳು ಆಕರ್ಷಣೀಯವಾಗಿವೆ. ಇಲ್ಲಿಯೂ ಸಹ ನೂರೆಂಟು ಟಿಪ್ಪಣಿಗಳನ್ನೂ ಬರೆದು ಜೋಡಿಸಿದ್ದಾರೆ. ಪ್ರಾಯಃ ಈ ೧೦೮ರ ಸಂಖ್ಯೆ ಲೇಖಕರು ಗಾಂಧೀ ಜಪಮಾಡುವಲ್ಲಿನ ಶ್ರದ್ಧಾಭಕ್ತಿಗಳಿಗೆ ದ್ಯೋತಕವೆಂದನಿಸುತ್ತದೆ !

ಮತ್ತೊಂದು ಪುಸ್ತಕ ವೇಮಗಲ್ ಸೋಮಶೇಖರ್ ಬರೆದಿರುವ 'ಬೆಂಗಳೂರಿನಲ್ಲಿ ಮಹಾತ್ಮಗಾಂಧಿ'. ಶ್ರೀಯುತರು ಇತಿಹಾಸ ಅಕಾಡೆಮಿಯ ಸದಸ್ಯರು. ಮುನ್ನುಡಿಯಲ್ಲಿ ಡಾ. ಸೂರ್ಯನಾಥಕಾಮತ್‌ರವರು ಹೇಳಿರುವಂತೆ ಲೇಖಕರಿಗೆ ಇತಿಹಾಸದಲ್ಲಿ ಅಪಾರ ಪ್ರೀತಿ ಮತ್ತು ಸಂಶೋಧನಾ ಉತ್ಸಾಹವಿದೆ. ಈ ಮಾತಿಗೆ ಅವರ ಕೃತಿ ಸಾಕ್ಷಿಯಾಗಿದೆ. ವಿಷಯ ಸಂಗ್ರಹವನ್ನು ವ್ಯಾಪಕವಾಗಿ ಮಾಡಿದ್ದಾರೆ. ಅಪರೂಪದ ಮೂವತ್ತು ಚಿತ್ರಗಳನ್ನು ಬಳಸಿಕೊಂಡಿದ್ದಾರೆ. ಗಾಂಧೀಜಿ ಬೆಂಗಳೂರಿಗೆ ನೀಡಿದ ಐದು ಭೇಟಿಗಳನ್ನೂ ಐದು ಅಧ್ಯಾಯಗಳನ್ನಾಗಿ ಮಾಡಿಕೊಂಡಿದ್ದಾರೆ. ಚಕಿತಗೊಳಿಸುವ ಅಪೂರ್ವ ವಿಷಯಗಳು ಮಂಡಿತವಾಗಿವೆ. ಸೋಮಶೇಖರ್ ಅಭಿನಂದನಾರ್ಹರು.

೨೧ನೇ ಶತಮಾನದಲ್ಲಿ 'ಗಾಂಧೀ ಇಸಂ' ಹೆಚ್ಚು ಮನ್ನಣೆ ಪಡೆಯುತ್ತಿದೆ ಅನ್ನುತ್ತಿರುವ ಹೊತ್ತಿನಲ್ಲಿ, ಈ ಮೂರು ಪುಸ್ತಿಕೆಗಳೂ ಪ್ರಸ್ತುತವಾಗುತ್ತವೆ. ಹಾಗಾಗಿ, ಇವು ಬಹಳ ಉಪಯುಕ್ತವಾದ ವಾಚಿಕೆಗಳಾಗಿವೆ. ಶಾಲಾ ಕಾಲೇಜುಗಳ ಎಳೆಯ ಮನಸ್ಸುಗಳಿಗೆ ಈ ಸಂಸ್ಕೃತಿಯ ಪರಿಮಳ ತಲುಪುವಂತಾದರೆ ಈ ಲೇಖಕರ ಶ್ರಮ ಪೂರ್ಣವಾಗಿ ಸಾರ್ಥಕವಾಗುತ್ತದೆ ಎಂದನಿಸುತ್ತದೆ.

ನೈಪಥಂ ಎಸ್ಸೆ

ಪರಿಪೂರ್ಣ, ೨ನೇ ಮೈನ್, ೨ನೇ ಕ್ರಾಸ್, ಕತ್ರಿಗುಪ್ಪೆ ಈಸ್ಟ್, ಬನಶಂಕರಿ ೩ನೇ ಹಂತ, ಬೆಂಗಳೂರು [illegible] ☐

ಸೌಂದರ್ಯ ಅವಮಾನಿಸಿದ ಭೈರಪ್ಪ ಸತ್ಯ ಅನುಮಾನಿಸಿದ ಬಂಜಗೆರೆ

ವಿಮರ್ಶೆಗಾಗಿ ಎರಡಿರಲಿ, ಕೊನೆಗೆ ಇತ್ತೀಚಿನ ಪುಸ್ತಕಗಳ ಪಟ್ಟಿಗಾಗಿ ಒಂದು ಪ್ರತಿ ಕಳಿಸದಿದ್ದರೂ, ಎಸ್.ಎಲ್. ಭೈರಪ್ಪನವರ 'ಆವರಣ' ಹಾಗೂ ಬಂಜೆಗೆರೆ ಜಯಪ್ರಕಾಶರ 'ಆನು ದೇವಾ ಹೊರಗಣವನು...' ಕೊಂಡು ಓದಲಾಗಿದೆ.

ಹೊಯ್ಸಳ ಕರ್ನಾಟಕ ಬ್ರಾಹ್ಮಣ ಭೈರಪ್ಪ, ಕಾದಂಬರಿ ಎಂಬ ಮುಖವಾಡ ಹಾಕಿಕೊಂಡು, ಹಿಂದೂ ಚರಿತ್ರೆ ಬರೆದಿದ್ದರೆ; ಗೊಲ್ಲರ ಬಂಜೆಗೆರೆ ಸಂಶೋಧನೆ ಹೆಸರಿನಲ್ಲಿ ಕಾಡು ಹರಟೆ ಹೊಡಿದಿದ್ದಾರೆ.

ಮೂಲತಃ ಕಾದಂಬರಿಗೆ ಇರಬೇಕಾದ ಸೌಂದರ್ಯವನ್ನು ವಯೋವೃದ್ಧ ಭೈರಪ್ಪ ನಿಭಾಯಿಸಲಾರದೆ ಅವಮಾನಿಸಿದ್ದಾರೆ, ಸಂಶೋಧನೆಗೆ ಬೇಕಾದ ಸತ್ಯವನ್ನು ಕೈಹಿಡಿಯಬೇಕಾಗಿದ್ದ ತರುಣ ಬಂಜೆಗೆರೆ ಅನುಮಾನಿಸಿದ್ದಾರೆ. ಇವರಿಬ್ಬರೂ ಪರಸ್ಪರ ಅದಲುಬದಲಾಗಿ, ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಕಂಟಕರಾಗಿ ಬಿಟ್ಟಿದ್ದಾರೆ.

ಸಾಹಿತ್ಯದಿಂದ ಕ್ರಾಂತಿ ಸಾಧ್ಯವಿಲ್ಲ ಎಂದು ಕನಕಪುರದವರೆಗೆ ಮೆರವಣಿಗೆ ನಡೆಸಿ ಬೊಬ್ಬೆ ಹಾಕಿದ ಭೈರಪ್ಪ, ಹಿಂದೂಗಳೆಲ್ಲ ನಪುಂಸಕರು, ಅದಕ್ಕೆ ಮುಸ್ಲಿಮರು ಕಾರಣ ಎಂಬಂಥ ಶ್ರೀಮದ್ ಭಗವದ್ಗೀತಾ ಬೋಧನೆಯನ್ನು ಕೈಗೊಂಡಿದ್ದಾರೆ. ದಶಕಗಳ ಕಾಲ ಗುಪ್ತ ಬಂಡುಕೋರನಾಗಿ ವರ್ಗ ಹೋರಾಟಕ್ಕೆ ನೇರವಾಗಿ ಸಜ್ಜುಗೊಳಿಸುವ ಸಾಹಿತ್ಯವನ್ನೇ ನೀಡಿ ಕುಪ್ರಸಿದ್ಧರಾಗಿದ್ದ ಬಂಜಗೆರೆ, ಇದೀಗ ಮೂಲಭೂತವಾದಿಯಾಗಿ ವೀರಶೈವರನ್ನು ಬಡಿದೆಬ್ಬಿಸಿ, ಬ್ರಾಹ್ಮಣರ ಮೇಲೆ ಕೊಚ್ಚೆ ಎರಚಿ ಸುಪ್ರಸಿದ್ಧ ಮನುಧರ್ಮ ರಚನೆಗೆ ಇಳಿದಿದ್ದಾರೆ.

ಭೈರಪ್ಪ ತರುಣನಾಗಿ, ಬಂಜಗೆರೆ ವಯೋವೃದ್ಧನಾದ ಸಿದ್ಧಿಸಾಧನೆಗಳೇ ಈ ಎರಡೂ ಪುಸ್ತಕಗಳ ಕೊಂಬು ಕಹಳೆ. ಒಂದನ್ನು ಅಮಾನವೀಯ ಎಂದರೆ ಇನ್ನೊಂದನ್ನು ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ, ಅರ್ಧಜರತೀಯನ್ಯಾಯದ ಫಲಿತವೇ ಓದುಗರ, ಸಮಾಜದ ಸ್ಥಿತಿಯಾದೀತು. ಓದಬಾರದು ಎಂಬ ಬರವಣಿಗೆ ಇಲ್ಲವೇ ಇಲ್ಲ, ಓದಿದ್ದೇವೆ ಎಂಬುವವರನ್ನು ನಿಜಕ್ಕೂ ಮೆಚ್ಚಬೇಕಾದ – ಹುಡುಕಬೇಕಾದ ಪುಸ್ತಕಗಳು ಇವು.

ಪುಸ್ತಕಪ್ರಿಯ

ಕಲಾವಿದ ಶೆಣೈ ಸ್ಮಾರಕ ಪ್ರಶಸ್ತಿ : ಅಭಿನಂದನೆ

ಇನ್ನಿಲ್ಲವಾದ ಗೆಳೆಯ ಜಿ.ಎಸ್. ಶೆಣೈ ಕಲಾವಿದ, ಹೋರಾಟಗಾರ, ವ್ಯಾಪಾರಿ ಮನೋಧರ್ಮಿ. ಇದ್ದಿದ್ದರೆ, ಭಾರತದ ಪ್ರಮುಖ ಕಲಾವಿದನಾಗುವ ಶಕ್ತಿಯಿದ್ದವರು. ಅಂಥ ವ್ಯಕ್ತಿಯ ಕಲೆ, ಚಟುವಟಿಕೆ ಕರ್ನಾಟಕಕ್ಕೆ ದಾರಿದೀಪವೇ. ಆತನ ಹೆಸರಿನಲ್ಲಿ ಸ್ಮಾರಕ ಪ್ರಶಸ್ತಿ ಎನ್. ಮರಿಶಾಮಾಚಾರ್ (೨೦೦೬) ಹಾಗೂ ಯು. ರಮೇಶರಾವ್ (೨೦೦೭) ಅವರಿಗೆ ನೀಡಲಾಗಿದೆ.

ಜಿ.ಎಸ್. ಶೆಣೈ ಆರ್ಟ್‌ಫೌಂಡೇಷನ್, ರಾಷ್ಟ್ರಮಟ್ಟದಲ್ಲಿ ಹೆಸರಾಗಿರುವ ಮರಿಶಾಮಾಚಾರ್ ಹಾಗೂ ಉಡುಪಿಯಲ್ಲಿ ಪೀಟರ್ ಲೂಯಿಸ್, ಶೆಣೈ ನಂತರ ಕಲಾವಾತಾವರಣಕ್ಕಾಗಿಯೂ ದುಡಿಯುತ್ತಿರುವ ರಮೇಶರಾವ್ ಅವರಿಗೆ ನೀಡಿರುವುದು ಅಭಿನಂದನೀಯ.

ಕರ್ನಾಟಕದಲ್ಲಿ ಈ ಮೂಲಕ ಕಲಾಕ್ಷೇತ್ರದಲ್ಲಿ ಜೀವಂತಿಕೆ ಮೂಡುವಂತಾಗಲಿ.

ಪ್ರಜಾಸಾಹಿತ್ಯ

ಹಟದ, ದಿಟದ ಪವಾಡ

ನನ್ನ ಮೆಚ್ಚಿಕೆಯ ಹರಿಹರಪ್ರಿಯರೇ, ಸಸ್ನೇಹ ವಂದನೆ. ಕೆಲ ತಿಂಗುಗಳ ಹಿಂದೆ ನೀವು ನನ್ನನ್ನು ರಾಜಾಜಿನಗರದ ನನ್ನ ಮನೆಯಲ್ಲಿ ಕಂಡು ಆತ್ಮೀಯವಾಗಿ ಮಾತನಾಡಿಸಿ ಹೋದುದನ್ನು ಹೇಗೆ ಮರೆಯಲಿ? ನಮ್ಮ ನಿಮ್ಮ ಸ್ನೇಹ-ಸಂಬಂಧ ಇಂದು ನಿನ್ನೆಯದಲ್ಲ. ನೀವು ರಾಜಾಜಿನಗರದಲ್ಲಿ ನಿಮ್ಮ ಪೂಜ್ಯ ತಂದೆಯವರೊಂದಿಗೆ ವಾಸವಾಗಿದ್ದು, ಎಳಹರೆಯದ ತಾರುಣ್ಯದಲ್ಲಿ ಹಲವಾರ ಬಗೆಯ ಕನ್ನಡ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಸದಾ ತೊಡಗಿಕೊಂಡು ಹೊಸಹೊಸ ವಿಚಾರಗಳ ಸುರಿಮಳೆ ಸುರಿಸುತ್ತ, ಅಂದಿನ ಹಿರಿಕಿರಿಯ ಕವಿ-ಕತೆಗಾರ-ಕಾದಂಬರಿಕಾರ-ನಾಟಕಕಾರ-ಸಾಹಿತ್ಯ ವಿಮರ್ಶಕ-ಸಂಶೋಧಕರೆಂಬವರನೇಕರು ನಿಮ್ಮನ್ನು ಬೆರಗುಗಣ್ಣುಗಳಿಂದ ನೋಡುತ್ತಿದ್ದ ಕಾಲದಿಂದ ನಿಮ್ಮನ್ನು ಬಲ್ಲೆನಷ್ಟೆ? ಅಂದು ನೀವು ನನ್ನನ್ನು ಕಾಣಬಂದಾಗ ಹೊಸತೇನನ್ನೋ ತಿಳಿಸಬಂದಿರುವಿರೆಂದು ತಕ್ಷಣ ಗ್ರಹಿಸಿದೆ !

ಹೊಸಗನ್ನಡದಲ್ಲಿ ಈವರೆಗೆ ಯಾರೂ ಕಂಡರಿಯದ 'ಪುಸ್ತಕಮನೆ'ಯ ಹೊಚ್ಚ ಹೊಸ ಕನಸೊಂದನ್ನು ನನಸಾಗಿಸಿಕೊಂಡ ಹಟದ, ದಿಟದ ಪವಾಡ ಮೆರೆದವರು ನೀವು ! ಈ ಪವಾಡದ ಕಥೆಯನ್ನು ನಿಮ್ಮ ಬಾಯಿಂದಲೇ ಕೇಳುವ ಕುತೂಹಲ ನನಗಿದ್ದಿತಾದರೂ ನಿಮ್ಮ ಅತ್ಯಮೂಲ್ಯ ಸಮಯವನ್ನು ವ್ಯರ್ಥಗೊಳಿಸಲು ಅಂದು ಹಿಂದೆಗೆದಿದ್ದೆ.

ಇತ್ತೀಚೆ ನೀವು ಆರಂಭಿಸಿದ ಪತ್ರಿಕಾ ಪ್ರಕಟನೆಯ ಮಾತು ಹೊರಟು, ಕೂಡಲೆ ಚಂದಾಹಣವನ್ನು ನಿಮ್ಮ ಕೈಗಿತ್ತು ಹರ್ಷಗೊಂಡಿದ್ದೆ. ಈಗ ಪ್ರತಿ ತಿಂಗಳು 'ಪ್ರಜಾಸಾಹಿತ್ಯ' ಸಂಚಿಕೆಗಳು ತಪ್ಪದೆ ಕೈ ಸೇರುತ್ತವೆ. ಬಂದ ಕೂಡಲೆ ಆದಷ್ಟು ಬೇಗನೆ ಓದಿಯೂ ಮುಗಿಸುವೆ. ಅನಂತರ ಅವುಗಳ ಬಗ್ಗೆ ಚಿಂತನಗೈಯತೊಡಗುವೆ. ಈಗೊಂದು ತಿಂಗಳಕಿಂತಲೂ ಹೆಚ್ಚು ಕಾಲವಾಯ್ತು, ನಾನು ರಾಜಾಜಿನಗರದ ಮನೆಯಲ್ಲಿಲ್ಲ. ಅಲ್ಲಿಂದ ಸುಮಾರು ೨೫ ಕಿ.ಮೀ. ದೂರದ ಮಾರತಹಳ್ಳಿಯ ನನ್ನ ಹಿರಿಯ ಮೊಮ್ಮಗ ಚಿ॥ ಹರ್ಷನ ಮನೆಯಲ್ಲಿದ್ದೇನೆ. ನಿಮ್ಮ ದೂರವಾಣಿಯ ಕರೆ ಬಂದಾಗ ನನ್ನ ಬಳಿ 'ಪ್ರಜಾಸಾಹಿತ್ಯ'ದ ಸಂಚಿಕೆಗಳಿರಲಿಲ್ಲ. ಅವುಗಳನ್ನು ರಾಜಾಜಿನಗರದ ಮನೆಯಿಂದ ಮತ್ತೊಮ್ಮೆ ಕಣ್ಣಾಡಿಸಲು ತರಿಸಿಕೊಳ್ಳಬೇಕಾಯ್ತು. ಏಪ್ರಿಲ್, ಮೇ, ಜೂನ್ – ಈ ಮೂರು ತಿಂಗಳ ಸಂಚಿಕೆಗಳು ನನ್ನ ಕೈ ಸೇರಿವೆ. ಶ್ರೀ ಅರವಿಂದರನ್ನು ಕುರಿತ ನನ್ನ ಲೇಖನವಿದ್ದ ಸಂಚಿಕೆಯೊಂದನ್ನು ದಯವಿಟ್ಟು ಇಲ್ಲಿಯ ವಿಳಾಸಕ್ಕೆ ಕಳಿಸಿಕೊಡುವಿರಾ ? ಅದು ಹೇಗೆ ಬಂದಿದೆ ಓದಿ ನೋಡುವೆ.

ಇನ್ನು ಕೊನೆಯದಾಗಿ – 'ಪ್ರಜಾಸಾಹಿತ್ಯ' ಪತ್ರಿಕೆಯನ್ನು ಕುರಿತು ಒಂದು ಮಾತು : ನಾನು ಮೊದಲೇ ನಿರೀಕ್ಷಿಸಿದ್ದಂತೆ ನಿಮ್ಮೀ ಪತ್ರಿಕೆ ನಿರಾತಂಕವಾಗಿ, ಯಾವೊಂದೂ ಅಡೆ-ತಡೆಗಳಿಲ್ಲದೆ ಸಾಹಿತ್ಯದ ಹೊಚ್ಚಹೊಸ ಹೊನಲ ಹೊಮ್ಮಿಸುವ ವಿಶಿಷ್ಟ ಮಾದರಿಯದು. ಜೊತೆಗೆ, ನೀವೇ ಅರ್ಥವತ್ತಾಗಿ ಸಾರಿರುವಂತೆ – 'ಓದು ಬರಹ ಬಲ್ಲವರ ಮಾಸಪತ್ರಿಕೆ'ಯಾಗಿರುವುದೂ ನಿಜ. ನಿಮ್ಮ ಸಂಪಾದಕೀಯಗಳು ಚಿಕ್ಕಚಿಕ್ಕದಾಗಿದ್ದರೂ ಓದುಗರ ಮನಮುಟ್ಟುವಂತಿವೆ, ಕೆಲವೆಡೆಗಳಲ್ಲಿ ಅವರನ್ನು ಬಡೆದೆಬ್ಬಿಸುವಂಥವೂ ಆಗಿವೆ ! ಗೊತ್ತು-ಗುರಿ ಸುಸ್ಪಷ್ಟವಾಗಿರುವ ಸಂಪಾದಕರ ಕಾರ್ಯವೇ ಇಂಥದು. ನೀವು ಆಯ್ಕೆ ಮಾಡಿಕೊಳ್ಳುವ ಲೇಖಕರೆಲ್ಲರೂ ನೀವು ಬಯಸುವಂತೆ – ನೂತನ ಪ್ರಜ್ಞಾವಂತಿಕೆ – ಸಂವೇದನಾಶೀಲತೆಗಳನ್ನು ತಂತಮ್ಮ ವಿಶಿಷ್ಟ ಪ್ರತಿಭೆಗನುಗುಣವಾಗಿ ಪ್ರದರ್ಶಿಸುವಲ್ಲಿ ಸಮರ್ಥರೆಂಬಲ್ಲಿ ಎರಡು ಮಾತಿಲ್ಲ.

'ಪ್ರಜಾಸಾಹಿತ್ಯ'ದ ಪ್ರತಿ ಸಂಚಿಕೆಯೂ ಯಾವೊಂದು ಪ್ರಸ್ತುತ ಉಜ್ವಲ ಸಮಸ್ಯೆಯೊಂದನ್ನು ಮುಂದಿರಿಸಿಕೊಂಡು ಅದರಲ್ಲಿಯ ಬಿಡಿಸಲಾರದ ತೊಡಕುಗಳನ್ನು ಸಡಿಲುಗೊಳಿಸುವ ಸಾರ್ಥಕ ಕಾರ್ಯ ಕೈಕೊಳ್ಳುವ ದೃಷ್ಟಿ-ಧೋರಣೆಗಳು ಸ್ತುತ್ಯವಾದುವು. ಸಮೂಹ ಮಾಧ್ಯಮದ ಸತ್ಯಪಥ, ಉದಾತ್ತ ಧ್ಯೇಯವೇ ಇದು. ಉದಾ: ಕಾವೇರಿ ಸಂಚಿಕೆ, ರಾಜ್ಯೋತ್ಸವ ಸಂಚಿಕೆ, ವಿಶ್ವಕನ್ನಡ ಸಮ್ಮೇಳನ ಸಂಚಿಕೆ, ಕೋಮುವಿವಾದ ಸಂಚಿಕೆ, ಅಪಾಯದ ವೈರಸ್‌ನಿಂದ ಜ್ಞಾನ-ವಿಜ್ಞಾನ ಕಾಪಾಡುವಿಕೆ, ಕನ್ನಡದಲ್ಲಿ ಜೀವನ ಚರಿತ್ರೆಗಳು – ಈ ಬಗೆಯ ಸಂಚಿಕೆಗಳಲ್ಲಿಯ ನಿಮ್ಮ ಲೇಖಕರ ಬಳಗ – ಈ ಮೊದಲೆ ಸೂಚಿಸಿದಂತೆ, 'ಪ್ರಜಾಸಾಹಿತ್ಯ'ದ ಮೂಲಕ ಇಂದಿನ ಕನ್ನಡ ಸಾಹಿತ್ಯ ಹಾಗೂ ವಿಚಾರವಾಹಿನಿಗೆ ಹೊಸ ದಿಕ್ಕು-ದೆಸೆ ತೋರಿಸುವ ಸಾಮರ್ಥ್ಯವುಳ್ಳವರು. ಜೊತೆಗೆ, ಓದುಗರ ಪ್ರಜ್ಞಾಶಕ್ತಿಗೂ ಪುಟವೀಯುವ ಗುರಿಯುಳ್ಳವರು.

ಎಸ್.ಆರ್. ಮಳಗಿ
(ಸೇತುರಾಮ ರಾಘವೇಂದ್ರ ಮಳಗಿ)

ಈ ತಿಂಗಳು ನೆರವಿಗೆ ನಿಂತ ಉದಾರಿಗಳು

●

ಬೆಂಗಳೂರಿಗೆ ಮಾತ್ರವೇ ಅಲ್ಲ ಕರ್ನಾಟಕದಲ್ಲೇ ಹೆಸರು ಗಳಿಸಿದ ಶೇಖರ್ ನರ್ಸಿಂಗ್ ಹೋಂ ಹಾಗೂ ವೈದ್ಯರು ಶೇಖರ ಐತಾಳರು. ಪತ್ರಿಕೆ ಪುರೋಭಿವೃದ್ಧಿ ಬಯಸಿ, ಉಮೇಶ್ ಮತ್ತು ರಾಜಶೇಖರ್ ಮೂಲಕ ಅಯಿದು ಸಾವಿರ ರೂ.ಗಳನ್ನು ಕಳಿಸಿಕೊಟ್ಟಿದ್ದಾರೆ.

ಈಗ ನೆಲೆನಿಂತಿರುವ ನಮ್ಮ ಬಡಾವಣೆಯ ಸಹ ನಿವಾಸಿಗಳಾಗಿ ಬಂದವರು ಚಂದ್ರಶೇಖರ ಮತ್ತು ರಾಜೇಶ್ವರಿಯವರು. ಎಲ್ಲ ಮತ್ತು ಎಲ್ಲರ ಕಷ್ಟಸುಖಗಳಿಗೂ ಜೊತೆಯಾಗಿರುವವರು. ಹಿತೈಷಿಗಳಾಗಿದ್ದ ನಿಟ್ಟೂರು ಶ್ರೀನಿವಾಸರಾಯರ ಬಂಧುಗಳು. ಎರಡನೇ ವರುಷವೂ ಪತ್ರಿಕೆ ಚೆನ್ನಾಗಿ ನಡೆಯಲಿ ಎಂದು ಅಯಿದು ಸಾವಿರ ರೂ.ಗಳನ್ನು ನೀಡಿದ್ದಾರೆ. ಅದೇ ರೀತಿ ನಮ್ಮವರೇ ಆದ ಮಾಲತೇಶ ನಾಡಿಗೇರರು ಕೂಡ ಒಂದೂವರೆ ಸಾವಿರ ರೂ.ಗಳನ್ನು ನೀಡಿ, ಹಾರೈಸಿದ್ದಾರೆ.

೩೦-೩೫ ವರ್ಷಗಳ ಗೆಳೆಯ ಟಿ.ಕೆ. ರಂಗನಾಥ (ರಂಗಣ್ಣ), ದೊಡ್ಡಸ್ಥಾನದಲ್ಲಿದ್ದು ದೇಶವಿದೇಶದಲ್ಲಿ ಸೇವೆಸಲ್ಲಿಸಿಯೂ, ಸರಳಾತಿ ಸರಳವಾಗಿರುವ ಮನುಷ್ಯ. ಚಂದ್ರಶೇಖರನ ಒತ್ತಾಸೆಯಿಂದ ಕೇಳುವವರೆಗು ಸುಮ್ಮನಿದ್ದು ತಕ್ಷಣ ಅಯಿದು ಸಾವಿರ ಕಳಿಸಿ, ಮುಂದುವರೆಸು ಎಂದಿದ್ದಾನೆ.

ಅಂತೆಯೇ ಹಿರಿಯರಾದ ಶಿವಮೊಗ್ಗ ಸುಬ್ಬಣ್ಣ ಅವರು, ಇದೀಗ ಮುಖ್ಯ ಗ್ರಂಥಪಾಲಕರಾಗಿ ನಿವೃತ್ತರಾದ ಗೆಳೆಯ ನಿಂಗಪ್ಪ ಮಹದೇವಪ್ಪ ಅಕ್ಕಿಯವರು, ಕರ್ನಾಟಕ ನಾಟಕ ಅಕಾಡೆಮಿ ಕುಲಸಚಿವರಾದ, ಬಾಲ್ಯದ ಗೆಳೆಯ ಅಕ್ಕಿಹೆಬ್ಬಾಳಿನ ಎ.ಎಸ್. ನಾಗರಾಜ್, 'ಗುಂಟೂರು ದೊರೆ' ಎಂದೇ ನೆಲಮಂಗಲ ಭಾಗದಲ್ಲಿ ಪರಿಚಿತರಾದ ತೆಲುಗಿನ ಹಿರಿಯ ಮಿತ್ರರಾದ ಪೆದ್ದಿ ಸತ್ಯನಾರಾಯಣ ಅವರು, ಮೈಸೂರಿನಿಂದ ಶಾರದ ಮತ್ತು ಚಂದ್ರಶೇಖರ್ ಅವರು, ವಿ. ಗಣೇಶ್ ಅವರು ತಲಾ ಒಂದೊಂದು ಸಾವಿರ ರೂ.ಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ.

ಕರ್ನಾಟಕದ ಕನ್ನಡದ ಪರಿಸ್ಥಿತಿ ಬಲ್ಲವರು ತಾವಾಗಿಯೇ ಮುಂದೆ ಬಂದು, ಪತ್ರಿಕೆ ತನ್ನಷ್ಟಕ್ಕೆ ತಾನು ನಡೆದುಕೊಂಡು ಹೋಗುವ ಮೂಲಕ ತಾವೂ ಜೊತೆಗೆ ನಿಂತು ಮುಂದೆಯೂ ಸಹಕರಿಸುತ್ತೀರಿ ಎಂದು ನಂಬುವೆ, ಕಾಯುವೆ.

ಮೊದಲ ವರ್ಷ ಚಂದಾದಾರರಾದ ಹಾಗೂ ನೆರವಿಗೆ ನಿಂತವರು
ದಯವಿಟ್ಟು ಈಗಲೂ ಮುಂದುವರೆಸಬೇಕಾಗಿ ಪ್ರಾರ್ಥನೆ.

ಸಂಪಾದಕ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಗೆ ಅಭಿವಂದನೆ

ಬ್ರಾಹ್ಮಣ, ಒಕ್ಕಲಿಗ, ಕುರುಬ, ಕೊರಚ – ಹೀಗೆ ಒಂದೊಂದು ಜನಾಂಗಗಳ ಪ್ರಮುಖರನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಈವರೆಗೂ ನೇಮಿಸುತ್ತ ಬಂದ ಕರ್ನಾಟಕ ಘನ ಸರ್ಕಾರ, ಎರಡನೇ ಸಲವೂ ಕುರುಬ ಜನಾಂಗಕ್ಕೆ ಸೇರಿದ ಎಸ್.ಜಿ. ಸಿದ್ಧರಾಮಯ್ಯ ಅವರನ್ನು ನೇಮಿಸಿದೆ. ಇನ್ನೇನು ಕೆಲವೇ ತಿಂಗಳಲ್ಲಿ ಅವರ ಅವಧಿ ಕೂಡ ಮುಗಿಯಲಿದ್ದು, ಇದೀಗ ಒಂದು ವರ್ಷ ಪೂರೈಸಿ, ಮಾನವ ಸಮಾಜ ನಿರ್ಮಾಣಕ್ಕೆ ಹೊರಟಿರುವ 'ಪ್ರಜಾಸಾಹಿತ್ಯ' ಪತ್ರಿಕೆಗೆ, ಎರಡು ವರ್ಷಗಳ ಚಂದಾ ಹಣ ಅರ್ಧ ಸಹಸ್ರ ರೂಪಾಯಿಗಳನ್ನು ನೀಡಿ, ಕನ್ನಡ ಸಾಹಿತ್ಯ ಪತ್ರಿಕೆಗಳ ಬಿಕ್ಕಟ್ಟನ್ನು ಪರಿಹರಿಸಲು ಕೈಜೋಡಿಸಿದ ಅವರನ್ನು ಮರೆಯದೇ ಅಭಿವಂದಿಸಲು ಬಯಸುತ್ತಿದ್ದೇನೆ.

ಸಂಪಾದಕ



